ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜೂನ್ 30 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 75 | ಪುಟಗಳು: 12 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com








ಇಂದು ಎರಡನೇ ಆಷಾಢ ಶುಕ್ರವಾರ
ಚಾಮುಂಡಿಬೆಟ್ಟದಲ್ಲಿ ವಿಶೇಷ ಪೂಜೆ



ಮೈಸೂರು, ಜೂ.29(ಆರ್‌ಕೆ)–ಎರಡನೇ ಆಷಾಢ ಶುಕ್ರವಾರದ ಅಂಗವಾಗಿ ನಾಳೆ (ಜೂ.30) ಮೈಸೂರಿನ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ. ದೇವರ ದರ್ಶನಕ್ಕೆ ತೆರಳಲಿರುವ ಭಕ್ತಾದಿಗಳಿಗೆ ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಬಳಿಯ ಮೈದಾನದಿಂದ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತ ಪ್ರಯಾಣಕ್ಕೆ ವ್ಯವಸ್ಥೆ ಮಾಡಲಾಗಿದೆ ಶಿಷ್ಟಾಚಾರ ಹೊಂದಿರುವ ಗಣ್ಯರನ್ನು ಹೊರತುಪಡಿಸಿ ಇತರ ವಾಹನಗಳ ಪ್ರವೇಶ ನಿರ್ಬಂಧಿಸಿರುವುದರಿಂದ ಭಕ್ತಾದಿಗಳು ತಮ್ಮ ವಾಹನಗಳನ್ನು ಲಲಿತ ಮಹಲ್ ಹೋಟೆಲ್ ಬಳಿಯಲ್ಲೇ ಪಾರ್ಕ್ ಮಾಡಿ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳುವಂತೆ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ. ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ ಸಹಸ್ರಾರು ಮಂದಿ ತೆರಳುವುದರಿಂದ ಚಾಮುಂಡಿಬೆಟ್ಟದಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ, ಭಾರೀ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆಯಲ್ಲದೇ ಸುಗಮ ಸಂಚಾರಕ್ಕೆ ಅನುಕೂಲ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಮರ್ಪಕ ಬಸ್ ಸೇವೆ ಕಲ್ಪಿಸಲು ಸಾರಿಗೆ ಸಂಸ್ಥೆ ಬದ್ಧ
ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ಭರವಸೆ



ಮೈಸೂರು, ಜೂ.29(ಎಂಕೆ)– ಕೆಎಸ್‌ಆರ್‌ಟಿಸಿ ಉಚಿತ ಪ್ರಯಾಣ 'ಶಕ್ತಿ' ಯೋಜನೆಯಿಂದ ಬಸ್ ಸಂಚಾರಕ್ಕೆ ತೊಂದರೆಯಾಗಿರುವ ಮಾರ್ಗಗಳಲ್ಲಿ ಹೆಚ್ಚಿನ ಬಸ್ ಸೇವೆ ಕಲ್ಪಿಸಲು ಮನವಿ ಮಾಡಿದರೆ ಪೂರೈಸಲಾಗುವುದು ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದ್ದಾರೆ.

'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅವರು, ಮೈಸೂರು ವಿಭಾಗದ ವತಿಯಿಂದ 760 ಬಸ್‌ಗಳು(ಉಚಿತ ಪ್ರಯಾಣ) ನಿತ್ಯ ಸಂಚಾರ ಸೇವೆ ನೀಡುತ್ತಿವೆ. 'ಶಕ್ತಿ' ಯೋಜನೆ ಜಾರಿ ಬಳಿಕ ಎಲ್ಲಾ ಮಾರ್ಗಗಳಲ್ಲಿ ಸಾಗುವ ಬಸ್‌ಗಳು ಭರ್ತಿಯಾಗುತ್ತಿದ್ದು, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಈ ನಿಟ್ಟಿನಲ್ಲಿ ಯಾವ್ಯಾವ ಮಾರ್ಗಗಳಲ್ಲಿ ಬಸ್ ಸಂಚಾರ ಕೊರತೆ ಇದೆ ಎಂದು ಮನವಿ ಮಾಡಿದರೆ, ಪರಿಸ್ಥಿತಿಗೆ ಅನುಗುಣವಾಗಿ ಬಸ್ ಸೇವೆ ಕಲ್ಪಿಸಲಾಗುವುದು ಎಂದರು.

ಮೈಸೂರು ವಿಭಾಗದಲ್ಲಿ ಎಸಿ ಮತ್ತು ನಾನ್ ಎಸಿ ಸೇರಿ ಒಟ್ಟು 963 ಬಸ್‌ಗಳಿದ್ದು, ಉಚಿತ ಪ್ರಯಾಣದ 760 ಬಸ್‌ಗಳು ಸಂಚರಿಸುತ್ತಿವೆ. ಎಲ್ಲಾ ಬಸ್‌ಗಳು ಭರ್ತಿಯಾಗಿ ಸಂಚರಿಸುತ್ತಿದ್ದು, 'ಶಕ್ತಿ' ಉಚಿತ ಪ್ರಯಾಣ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗುತ್ತಿದೆ. ಸದ್ಯಕ್ಕೆ ಸರ್ಕಾರದಿಂದ ಹೆಚ್ಚುವರಿಯಾಗಿ ಬಸ್ ನೀಡುವ ಯಾವುದೇ ಸಾಧ್ಯತೆ ಇಲ್ಲದಿರುವುದರಿಂದ ಇರುವ ಬಸ್‌ಗಳಲ್ಲಿಯೇ ಸೇವೆ ನೀಡಲಾಗುತ್ತಿದೆ ಎಂದು ತಿಳಿಸಿದರು.

ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮಾಜಿ ಸಚಿವರೂ, ಹಾಲಿ ಶಾಸಕರಾದ ತನ್ವೀರ್ ಸೇಠ್ ಅವರನ್ನು ಕಾಂಗ್ರೆಸ್ ಮುಖಂಡರಾದ ಎನ್.ಧ್ರುವರಾಜ್, ಕುರುಬಾರಹಳ್ಳಿ ಪ್ರಕಾಶ್ ಅಭಿನಂದಿಸಿ, ಶುಭಾಶಯ ಕೋರಿದರು.



ಗ್ಯಾರಂಟಿ ಯೋಜನೆಗಳಿಗೆ ಅರ್ಜಿ ಸ್ವೀಕರಿಸುವ ಪ್ರಕ್ರಿಯೆಗೆ ಸೋಮಶೇಖರ್ ಚಾಲನೆ
ಸರ್ಕಾರದ 5 ಗ್ಯಾರಂಟಿಗಳನ್ನು ಸದುಪಯೋಗಪಡಿಸಿಕೊಳ್ಳಲು ಫಲಾನುಭವಿಗಳಿಗೆ ಸಲಹೆ



ಮೈಸೂರು, ಜೂ.29–ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಇತ್ತೀಚೆಗೆ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ ನಂ.59ರ ಗಣಪತಿ ದೇವಸ್ಥಾನದ ಬಳಿ ಉಚಿತ ವಿದ್ಯುತ್ ಕಲ್ಪಿಸುವ ಮಹತ್ವದ ಯೋಜನೆಯಾದ ಗೃಹ ಜ್ಯೋತಿಗೆ ಅರ್ಜಿ ಸ್ವೀಕರಿಸುವ ಪ್ರಕ್ರಿಯೆಗೆ ಚಾಲನೆ ನೀಡಿದರು.

ಈ ವೇಳೆ ಮುಖಂಡರಾದ ಆನಂದ್, ಗುಣಶೇಖರ್, ಕುಮಾರ್, ನಟರಾಜ್, ಕಿರಣ್, ಸೋಮು, ಸಿದ್ದರಾಮು, ಉಲ್ಲಾಸ್, ರವಿ, ವಿನಯ್, ಮನೋಜ್, ಶಿವರಾಜ್, ರೂಪೇಶ್, ಸಿದ್ದು ಇತರರು ಉಪಸ್ಥಿತರಿದ್ದರು.

ಚುನಾವಣೆಗೂ ಮುನ್ನ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ನೀಡಿದ್ದ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಗೃಹ ಜ್ಯೋತಿ, ಅನ್ನಭಾಗ್ಯ, ಶಕ್ತಿ ಹಾಗೂ ಯುವ ನಿಧಿ ಕಾರ್ಯಕ್ರಮಗಳನ್ನು ಈಡೇರಿಸಲು ಬದ್ಧರಾಗಿದ್ದು, ಈಗಾಗಲೇ ಶಕ್ತಿ ಯೋಜನೆಗೆ ಚಾಲನೆ ನೀಡಲಾಗಿದೆ. ಜುಲೈ 1 ರಿಂದ ಅನ್ನಭಾಗ್ಯ ಪೂರ್ಣ ಪ್ರಮಾಣದಲ್ಲಿ ಜಾರಿಗೊಳ್ಳಲಿದೆ. ಕೇಂದ್ರ ಸರ್ಕಾರ ಅಕ್ಕಿ ನೀಡದಿದ್ದರೂ, ರಾಜ್ಯ 5 ಕೆ.ಜಿ. ಅಕ್ಕಿಯೊಂದಿಗೆ ಬಾಕಿ 5 ಕೆ.ಜಿ.ಗೆ ಹಣವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಸಂದಾಯ ಮಾಡಲು ಕ್ರಮ ಕೈಗೊಂಡಿದೆ ಎಂದು ಸೋಮಶೇಖರ್ ತಿಳಿಸಿದರು.

ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಈ ಹಿಂದೆಯೂ ಅನ್ನಭಾಗ್ಯ, ವಿದ್ಯಾಸಿರಿ, ಮನಸ್ವಿನಿ, ಶೂ ಭಾಗ್ಯ, ಇಂದಿರಾ ಕ್ಯಾಂಟೀನ್ ಹೀಗೆ ಹತ್ತು ಹಲವಾರು ಮಹತ್ವಾಕಾಂಕ್ಷೆಯ ಯೋಜನೆಯ ಮೂಲಕ ಜನ ಮನ್ನಣೆ ಗಳಿಸಿತ್ತು. ಈಗ ಗೃಹ ಜ್ಯೋತಿ, ಗೃಹಲಕ್ಷ್ಮಿ, ಶಕ್ತಿ, ಅನ್ನ ಭಾಗ್ಯ, ಯುವನಿಧಿ ಯೋಜನೆಗಳನ್ನು ಕಲ್ಪಿಸಿ ಬಡವರು ಹಾಗೂ ದೀನ-ದಲಿತರಿಗೆ ಜೀವನ ಭದ್ರತೆಯನ್ನು ಕಲ್ಪಿಸಿದೆ.

ಅರ್ಹ ಫಲಾನುಭವಿಗಳು ಈ ಯೋಜನೆಗಳ ಫಲವನ್ನು ಪಡೆಯುವುದರ ಮೂಲಕ ತಮ್ಮ ಜೀವನವನ್ನು ಸುಗಮ ರೀತಿ ನಡೆಸಲು ಮುಂದಾಗಬೇಕು. ಅದಕ್ಕಾಗಿ ಸರ್ಕಾರ ಯೋಜನೆಗಳಿಗೆ ಸಂಬಂಧಿಸಿದಂತೆ ಕೇಳಿರುವ ಮಾಹಿತಿಗಳನ್ನು ಒದಗಿಸಬೇಕು. ಇದಕ್ಕಾಗಿ ಯಾವುದೇ ರೀತಿಯ ಹಣವನ್ನು ತೆರಬೇಕಾಗಿಲ್ಲ. ಅಗತ್ಯ ಬಿದ್ದರೆ ಕಾಂಗ್ರೆಸ್ ಕಾರ್ಯಕರ್ತರ ನೆರವು ಪಡೆಯುವಂತೆ ಸೋಮಶೇಖರ್ ಸಲಹೆ ನೀಡಿದರು.

ವೇಶ್ಯಾವಾಟಿಕೆ ಮೇಲೆ ದಾಳಿ; ಇಬ್ಬರು ಯುವತಿಯರ ರಕ್ಷಣೆ

ಮೈಸೂರು, ಜೂ.29(ಎಂಕೆ)– ವೇಶ್ಯಾವಾಟಿಕೆ ಅಡ್ಡೆ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಇಬ್ಬರು ಯುವತಿಯರನ್ನು ರಕ್ಷಣೆ ಮಾಡಿದ್ದಾರೆ.

ಮೈಸೂರು ಸರಸ್ವತಿಪುರಂ ಪೊಲೀಸ್ ಠಾಣೆ ವ್ಯಾಪ್ತಿಯ ಬಸವೇಶ್ವರ ನಗರದ ಆಶ್ರಯ ಯೋಜನೆ ಮನೆಯೊಂದರ ಮೊದಲ ಮಹಡಿಯಲ್ಲಿ ನಡೆಸುತ್ತಿದ್ದ ವೇಶ್ಯಾವಾಟಿಕೆಯ ಬಗ್ಗೆ ಖಚಿತ ಮಾಹಿತಿ ಮೇರೆಗೆ ಜೂ.28ರಂದು ದಾಳಿ ಮಾಡಿದ ಪೊಲೀಸರು, ಇಬ್ಬರು ಯುವತಿಯರನ್ನು ರಕ್ಷಣೆ ಮಾಡಿದ್ದಾರೆ. ವೇಶ್ಯಾವಾಟಿಕೆ ನಡೆಸುತ್ತಿದ್ದ ಇಬ್ಬರನ್ನು ಬಂಧಿಸಿ, 4 ಸಾವಿರ ರೂ. ನಗದು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಪಂ ಮಾಜಿ ಉಪಾಧ್ಯಕ್ಷ ಪುಟ್ಟಯ್ಯ ನಿಧನ



ಮೈಸೂರು, ಜೂ.29– ಮೈಸೂರು ತಾಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷರು ಮತ್ತು ಕೀಳನಪುರದ ನಿವಾಸಿಗಳೂ ಆದ ಪುಟ್ಟಯ್ಯ (ಶನೇಶ್ವರ ಗುಡ್ಡಪ್ಪ) ಗುರುವಾರ ಮಧ್ಯಾಹ್ನ ವಯೋಸಹಜ ಖಾಯಿಲೆಯಿಂದ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪತ್ನಿ ಸಾವಿತ್ರಮ್ಮ, ಓರ್ವ ಪುತ್ರ, ಪುತ್ರಿ, ಸೊಸೆ, ಅಳಿಯ ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಶುಕ್ರವಾರ (ಜೂ.30) ಮಧ್ಯಾಹ್ನ 2 ಗಂಟೆಗೆ ಕೀಳನಪುರ ಗ್ರಾಮದಲ್ಲಿರುವ ಜಮೀನಿನಲ್ಲಿ ಅವರ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರಲ್ಲಿ ವ್ಯಾಪಕಗೊಳ್ಳುತ್ತಿರುವ ಬಿಡಾಡಿ ಜಾನುವಾರುಗಳ ಹಾವಳಿ

● ಪಾದಚಾರಿಗಳು, ವಾಹನ ಚಾಲಕರಿಗೆ ಇದೊಂದು ಸವಾಲು ● ಮೈಸೂರು ಪಾಲಿಕೆ ಕ್ರಮದ ಭರವಸೆಗೆ ಯಾವುದೇ ಕಿಮ್ಮತ್ತಿಲ್ಲ



ಮೈಸೂರು, ಜೂ.29(ಎಸ್‌ಬಿಡಿ)– ಮೈಸೂರು ನಗರದಲ್ಲಿ ಬಿಡಾಡಿ ಸಾಕು ಪ್ರಾಣಿಗಳ ಸಂಖ್ಯೆ ಹೆಚ್ಚುತ್ತಿದ್ದು, ಮಹಾನಗರ ಪಾಲಿಕೆ ಆದೇಶಕ್ಕೆ ಕಿಂಚಿತ್ತೂ ಕಿಮ್ಮತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ.

ಅರಮನೆ ಅಕ್ಕಪಕ್ಕ, ಸಯ್ಯಾಜಿರಾವ್ ರಸ್ತೆ, ಅಶೋಕ ರಸ್ತೆ, ಮಹಾತ್ಮಗಾಂಧಿ ರಸ್ತೆ, ಚಾಮರಾಜ ಜೋಡಿ ರಸ್ತೆ, ವಾಣಿ ವಿಲಾಸ ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಬಿಡಾಡಿ ದನಗಳಿಂದ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಕೆಲವೆಡೆ ಹಂದಿ, ಕುದುರೆಗಳ ಉಪಟಳವೂ ಹೆಚ್ಚಾಗಿದೆ. ನಗರದ ಹೃದಯ ಭಾಗದಲ್ಲೇ ಹೀಗಿರುವಾಗ ಬಡಾವಣೆ ರಸ್ತೆಗಳ ಪರಿಸ್ಥಿತಿಯನ್ನು ಊಹಿಸಿಕೊಳ್ಳಬಹುದು.

ನಗರದಲ್ಲಿ ದಿನೇ ದಿನೆ ವಾಹನಗಳ ಸಂಖ್ಯೆ ಹೆಚ್ಚುತ್ತಿದೆ. ಅದರಲ್ಲೂ ಅಧಿಕ ಸಂಖ್ಯೆಯ ಕಾರುಗಳು ರಸ್ತೆಗಿಳಿದಿವೆ. ಪರಿಣಾಮ ವಾಹನ ದಟ್ಟಣೆ ಸಹಜ ಎನ್ನುವಂತಾಗಿದೆ. ಇದರ ನಡುವೆ ಬಿಡಾಡಿ ಪ್ರಾಣಿಗಳ ಅಡೆತಡೆಯೂ ಹೆಚ್ಚುತ್ತಿದೆ. ವಾಹನಗಳ ನಡುವೆಯೇ ಪ್ರಾಣಿಗಳು ನುಸುಳುತ್ತವೆ. ರಸ್ತೆ ಮಧ್ಯೆ ಬಹಳ ಹೊತ್ತು ನಿಲ್ಲುತ್ತವೆ. ಕೆಲವು ಅಲ್ಲಿಯೇ ಮಲಗಿ ದಣಿವಾರಿಸಿಕೊಳ್ಳುತ್ತವೆ. ವಾಹನಗಳು ಪಕ್ಕದಲ್ಲೇ ಹೋದರೂ ರಸ್ತೆ ಬದಿಗೆ ಹೋಗುವುದಿಲ್ಲ. ಹಾರನ್ ಸದ್ದಿಗೂ ಬೆದರುವುದಿಲ್ಲ. ಕೆಲವೊಮ್ಮೆ ವಾಹನಗಳನ್ನು ನಿಲ್ಲಿಸಿ, ರಸ್ತೆ ಮಧ್ಯೆ ಮಲಗಿದ್ದ ದನಗಳನ್ನು ಎಬ್ಬಿಸಿ ಪಕ್ಕಕ್ಕೆ ಕಳುಹಿಸಿ, ಮುಂದೆ ಸಾಗಬೇಕಾದ ಪರಿಸ್ಥಿತಿಯೂ ನಿರ್ಮಾಣವಾಗುತ್ತದೆ.

ಸುಗಮ ಸಂಚಾರಕ್ಕೆ ಅಡ್ಡಿಯಾಗುವುದು ಮಾತ್ರವಲ್ಲ, ಈ ಸಮಸ್ಯೆಯಿಂದ ಪ್ರಾಣಾಪಾಯ ಸಂಭವಿಸುವ ಸಾಧ್ಯತೆಯೂ ಇದೆ. ವಾಹನ ದಟ್ಟಣೆ ನಡುವೆ ರಸ್ತೆಯಲ್ಲಿದ್ದ ಪ್ರಾಣಿಗಳನ್ನು ಗುರುತಿಸಲಾಗದೆ ಅಪಘಾತಗಳಾಗಬಹುದು. ವೇಗವಾಗಿ ಬಂದು ತಕ್ಷಣ ಪ್ರಾಣಿಗಳಿಗೆ ಗುದ್ದುವುದನ್ನು ತಪ್ಪಿಸುವ ಯತ್ನದಲ್ಲಿ ಆಯತಪ್ಪಿ ಬೀಳಬಹುದು. ವಾಹನ ಸವಾರರಿಗೆ ಮಾತ್ರವಲ್ಲ ಬಿಡಾಡಿ ಪ್ರಾಣಿಗಳಿಗೂ ಅಪಾಯವಿದೆ. ದೊಡ್ಡ ವಾಹನಗಳು ಡಿಕ್ಕಿ ಹೊಡೆದರೆ ಪ್ರಾಣಿಗಳ ಕಾಲು ಮುರಿಯಬಹುದು. ಪ್ರಾಣಹಾನಿಯೂ ಸಂಭವಿಸಬಹುದು.

ಚರ್ಚೆಗಷ್ಟೇ ಸೀಮಿತ

ಬಿಡಾಡಿ ಪ್ರಾಣಿಗಳ ಬಗ್ಗೆ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಗಂಭೀರ ಚರ್ಚೆ ನಡೆದಿತ್ತು. ಬಿಡಾಡಿ ದನಗಳಿಂದ ಸಾರ್ವಜನಿಕರಿಗೆ ತುಂಬಾ ತೊಂದೆಯಾಗುತ್ತಿದ್ದು, ಇದನ್ನು ತಪ್ಪಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಸದಸ್ಯರು ಆಗ್ರಹಿಸಿದ್ದರು. ಪ್ರಾಣಿಗಳನ್ನು ರಸ್ತೆಗೆ ಬಿಡುವ ಪಾಲಕರಿಗೆ ವಿಧಿಸುವ ದಂಡದ ಮೊತ್ತ ಹೆಚ್ಚಿಸಬೇಕೆಂದು ಕೆಲವರು ಅಭಿಪ್ರಾಯಿಸಿದ್ದರು. ಕಡೆಗೆ ಯಾವುದೇ ಕಾರಣಕ್ಕೂ ಬಿಡಾಡಿ ರಾಸುಗಳು ರಸ್ತೆಗೆ ಬರದಂತೆ ಕ್ರಮ ವಹಿಸಬೇಕು. ನಿರ್ಲಕ್ಷಿಸಿದರೆ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಮೇಯರ್ ಶಿವಕುಮಾರ್ ಖಡಕ್ ಎಚ್ಚರಿಕೆ ನೀಡಿದ್ದರು. ಆದರೆ ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬುದನ್ನು ರಸ್ತೆಯಲ್ಲಿ ಕಾಣಸಿಗುವ ಬಿಡಾಡಿ ಪ್ರಾಣಿಗಳೇ ಸ್ಪಷ್ಟಪಡಿಸುತ್ತವೆ.

ಎಂಜಿ ರಸ್ತೆಯಲ್ಲಿ ಠಿಕಾಣಿ: ಮಾರುಕಟ್ಟೆ ಇರುವುದರಿಂದ ಮಹಾತ್ಮಗಾಂಧಿ (ಎಂಜಿ) ರಸ್ತೆಯಲ್ಲಿ ಅಡ್ಡಾದಿಡ್ಡಿ ವಾಹನಗಳ ನಿಲುಗಡೆ ಮಾಡುವ ಗಂಭೀರ ಸಮಸ್ಯೆ ಜೊತೆಗೆ ಬಿಡಾಡಿ ದನಗಳ ಉಪಟಳವೂ ಇದೆ. ತರಕಾರಿ ತ್ಯಾಜ್ಯಕ್ಕಾಗಿ ಹೆಚ್ಚು ದನಗಳು ಇಲ್ಲಿಗೆ ಬರುತ್ತವೆ. ರಸ್ತೆ ಮಧ್ಯೆಯೇ ಠಿಕಾಣಿ ಹೂಡುತ್ತವೆ. ವಾಹನಗಳಿಗೆ ಕಿಂಚಿತ್ತೂ ಅಂಜುವುದಿಲ್ಲ. ಎಲ್ಲೆಂದರಲ್ಲಿ ಮಲಗಿ ಮೆಲುಕು ಹಾಕುತ್ತಿರುತ್ತವೆ. ದ್ವಿಚಕ್ರ ವಾಹನ ಸವಾರರು ಸ್ವಲ್ಪ ಎಚ್ಚರ ತಪ್ಪಿದರೂ ದನಗಳಿಗೆ ಗುದ್ದಿ ನೆಲಕ್ಕುರುಳುವುದು ನಿಶ್ಚಿತ. ಪಾಪ ಮೂಕ ಪ್ರಾಣಿಗಳಿಗೂ ಪೆಟ್ಟಾಗುತ್ತದೆ. ಆಹಾರ ಅರಸಿ ಬರುವ ಪ್ರಾಣಿಗಳಿಗೇನು ಗೊತ್ತು. ಅವುಗಳನ್ನು ರಸ್ತೆಗೆ ಬಿಡುವ ಮಾಲೀಕರು ಈ ಬಗ್ಗೆ ಸ್ವಲ್ಪ ಯೋಚಿಸಬೇಕು.

ದಾಳಿ ಮಾಡಿದರೆ ಹೊಣೆ ಯಾರು: ಎಲ್ಲಾ ರಾಸುಗಳು ಒಂದೇ ರೀತಿ ಇರುವುದಿಲ್ಲ. ಕೆಲವು ವಾಹನಗಳ ಸದ್ದು, ಹಾರನ್ ಶಬ್ದಕ್ಕೆ ಕೆರಳಿ ಅಡ್ಡಾದಿಡ್ಡಿ ಓಡಾಡುತ್ತವೆ. ಭಯದಿಂದ ಸಿಕ್ಕಿದವರ ಮೇಲೆ ದಾಳಿ ಮಾಡುತ್ತವೆ. ಬೇರೆ ಕಡೆ ಜನರನ್ನು ಅಟ್ಟಾಡಿಸಿಕೊಂಡು ಹೋಗಿರುವ ವಿಡಿಯೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಕಾಣಬಹುದು. ಇಂತಹ ಘಟನೆಗಳು ಮೈಸೂರಿನಲ್ಲಿ ಸಂಭವಿಸಿದರೆ ಯಾರು ಹೊಣೆ?. ಮೈಸೂರು ನಗರ ಪಾಲಿಕೆಯೋ ಅಥವಾ ಪ್ರಾಣಿ ಪಾಲಕರೋ ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ಆಯುಕ್ತರೂ ಆದೇಶಿಸಿದ್ದರು: ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಅವರೂ ಈ ಸಂಬಂಧ ಮೊನ್ನೆಯಷ್ಟೇ ಅಂತಿಮ ಸೂಚನೆಯನ್ನೂ ಹೊರಡಿಸಿದ್ದರು. ನಗರ ಹಾಗೂ ಹೊರ ವಲಯದಲ್ಲಿ ಬಿಡಾಡಿ ದನ ಹಾಗೂ ಹಂದಿಗಳನ್ನು ರಸ್ತೆಗಳು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಬಿಡುವುದರಿಂದ ವಾಹನ ಸಂಚಾರಕ್ಕೆ ತುಂಬಾ ಅಡಚಣೆಯಾಗುವುದರ ಜೊತೆಗೆ ವಾಹನ ಸವಾರರು ಮಾರಣಾಂತಿಕ ಅಪಘಾತಕ್ಕೀಡಾಗಿರುವುದು ಕಂಡು ಬಂದಿದೆ. ಆಹಾರ ಸೇವಿಸುವುದಕ್ಕಾಗಿ ತೊಟ್ಟಿಯಲ್ಲಿರುವ ಕಸವನ್ನೆಲ್ಲ ಚೆಲ್ಲಾಡುವುದರಿಂದ ಪರಿಸರ ಮಾಲಿನ್ಯವಾಗಿ, ಜನರ ಆರೋಗ್ಯದ ಮೇಲೂ ದುಷ್ಪರಿಣಾಮ ಉಂಟಾಗುವುದಲ್ಲದೆ ನಗರದ ನೈರ್ಮಲ್ಯವೂ ಹಾಳಾಗುತ್ತಿದೆ. ಪ್ರಾಣಿ ಪಾಲಕರ ಸಭೆ ನಡೆಸಿ, ಕಟ್ಟುನಿಟ್ಟಿನ ಸೂಚನೆ ನೀಡಿದ್ದರೂ ದನ ಹಾಗೂ ಹಂದಿಗಳನ್ನು ಬಿಡಾಡಿ ಬಿಡಲಾಗುತ್ತಿದೆ. ವಾರದೊಳಗೆ ತಮ್ಮ ಸ್ವಂತ ಸ್ಥಳದಲ್ಲಿ ಕಟ್ಟಿ ಹಾಕಿಕೊಂಡು ಪಾಲನೆ ಮಾಡದಿದ್ದರೆ ಕ್ರಮ ಕೈಗೊಳ್ಳುವುದಾಗಿ ಜೂ.27ರಂದು ಪ್ರಕಟಣೆ ಮೂಲಕ ಅಂತಿಮ ಎಚ್ಚರಿಕೆ ನೀಡಿದ್ದಾರೆ. ಆದರೂ ಸ್ವಲ್ಪವೂ ಬದಲಾಗಿಲ್ಲ.

> **" ಮೂಕ ಪ್ರಾಣಿಗಳನ್ನು ರಸ್ತೆಗೆ ಬಿಡುವುದು ಸರಿಯಲ್ಲ. ಯಾವುದಾದರೂ ದೊಡ್ಡ ವಾಹನ ಗುದ್ದಿದರೆ ಪ್ರಾಣಿಗಳಿಗೂ ಪೆಟ್ಟಾಗುತ್ತದೆ. ಪಾಪ ಅವು ಹೇಗೆ ಹೇಳಿಕೊಳ್ಳುತ್ತವೆ. ಕಾಲು ಮುರಿದರೆ ಅವು ಬೀದಿಪಾಲಾಗುತ್ತವೆ. ಅಪಘಾತ ಸಂಭವಿಸಿ ವಾಹನ ಸವಾರರೂ ಪ್ರಾಣ ಕಳೆದುಕೊಳ್ಳಬಹುದು. ಇಂತಹ ಅವಘಡ ವಾಗದಂತೆ ಈಗಲೇ ಕ್ರಮ ವಹಿಸಬೇಕು. ಈವರೆಗೆ ಯಾವುದೇ ಕ್ರಮ ವಹಿಸದೆ ಈಗ ವಾರದ ಗಡುವು ನೀಡುವುದರಲ್ಲಿ ಅರ್ಥವಿಲ್ಲ. ಪ್ರಾಣಿ ಪಾಲಕರನ್ನು ಸಂಪರ್ಕಿಸಿ ತಿಳಿಹೇಳಬೇಕು. ಪಾಲಕರಿಲ್ಲದ ಪ್ರಾಣಿಗಳಾದರೆ ಪುನರ್ವಸತಿ ಕೇಂದ್ರಕ್ಕೆ ಬಿಡುವ ಕೆಲಸವಾಗಬೇಕು.–ಪ್ರಹ್ಲಾದ್, ಮೈಸೂರು**

ಬಿಜೆಪಿ ರಾಜ್ಯಾಧ್ಯಕ್ಷರು ಸರ್ವ ರೀತಿಯಲ್ಲೂ ವಿಫಲ
ಸಿದ್ದರಾಮಯ್ಯ ಸರ್ಕಾರ ಟೀಕಿಸುವುದು ನಾಚಿಕೆಗೇಡು

ನಳಿನ್ ಕುಮಾರ್ ಕಟೀಲ್ ಸೇರಿ ಬಿಜೆಪಿಗರ ವಿರುದ್ಧ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಟೀಕಾಪ್ರಹಾರ



ಮೈಸೂರು,ಜೂ.29(ಪಿಎಂ)–ಬಿಜೆಪಿ ರಾಜ್ಯಾಧ್ಯಕ್ಷರಾಗಿ ಸರ್ವ ರೀತಿಯಲ್ಲಿಯೂ ವಿಫಲರಾಗಿರುವ ನಳಿನ್ ಕುಮಾರ್ ಕಟೀಲ್, ಸಿದ್ದರಾಮಯ್ಯನವರ ನೇತೃತ್ವದ ಜನಪರ ಕಾಂಗ್ರೆಸ್ ಸರ್ಕಾರವನ್ನು ಟೀಕಿಸುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಛೇಡಿಸಿದ್ದಾರೆ. ಬಿಜೆಪಿ ಹೀನಾಯ ಸೋಲಿನ ಹಿನ್ನೆಲೆಯಲ್ಲಿ ಸ್ವಪಕ್ಷೀಯರೇ ನಳಿನ್ ಕುಮಾರ್ ಕಟೀಲ್ ರಾಜೀನಾಮೆಗೆ ನಿತ್ಯವೂ ಒತ್ತಾಯಿಸುತ್ತಿದ್ದಾರೆ. ಅವರ ವಿರುದ್ಧ ಬಹಿರಂಗವಾಗಿಯೇ ಟೀಕಿಸುತ್ತಿದ್ದಾರೆ. ಹೀಗಾಗಿ ನಳಿನ್‌ಕುಮಾರ್ ಕಟೀಲ್ ತಮ್ಮ ಪಕ್ಷದೊಳಗೆ ಅವರ ವ್ಯಕ್ತಿತ್ವದ ಘನತೆ ಉಳಿಸಿಕೊಳ್ಳಲು ಆದ್ಯತೆ ನೀಡಬೇಕಿದೆ.

ಬಿಜೆಪಿ ದುರಾಡಳಿತ, ಭ್ರಷ್ಟಾಚಾರ, ಕೋಮುವಾದದಿಂದ ಬೇಸತ್ತು ಜನತೆ ಕಾಂಗ್ರೆಸ್‌ಗೆ ಆಶೀರ್ವದಿಸಿದ್ದಾರೆ ಎನ್ನುವುದನ್ನು ನಳಿನ್ ಕುಮಾರ್ ಕಟೀಲ್ ಸೇರಿದಂತೆ ಬಿಜೆಪಿಗರು ಮನಗಾಣಬೇಕಿದೆ. ಕಾಂಗ್ರೆಸ್ ಚುನಾವಣೆ ಪೂರ್ವದ ಎಲ್ಲಾ ಆಶ್ವಾಸನೆಗಳನ್ನು ಈಡೇರಿಸುತ್ತಿದ್ದು, ಜನಪರ ಆಡಳಿತ ನೀಡುತ್ತಿದೆ. ಸರ್ಕಾರದ ಯಶಸ್ಸು ಸಹಿಸಲಾಗದೇ ಸರ್ಕಾರ, ಮುಖ್ಯಮಂತ್ರಿಯವರ ಬಗ್ಗೆ ಬಿಜೆಪಿ ನಾಯಕರು ಕೀಳು ಅಭಿರುಚಿಯ ಹೇಳಿಕೆಗಳನ್ನು ನೀಡುತ್ತಿದ್ದು, ಇದು ಅವರ ವ್ಯಕ್ತಿತ್ವಕ್ಕೆ ಶೋಭೆಯಲ್ಲ.

ಕಮಿಷನ್ ದಂಧೆ, ವರ್ಗಾವಣೆ ಅವ್ಯವಹಾರ ನಡೆಯುತ್ತಿದೆ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿರುವ ನಳಿನ್‌ಕುಮಾರ್ ಕಟೀಲ್, ತಮ್ಮ ಪಕ್ಷದ ಆಡಳಿತಾವಧಿಯಲ್ಲಿ ನಡೆದಿರುವ ಇಂತಹ ಕೃತ್ಯಗಳ ನೆನಪಿನಲ್ಲಿ ಇಲ್ಲಿಯೂ ಹಾಗೇ ಇರಬಹುದೆಂದು ಭಾವಿಸಿ ಆರೋಪಿಸುತ್ತಿರುವಂತಿದೆ. ಒಂದು ಪಕ್ಷದ ರಾಜ್ಯಾಧ್ಯಕ್ಷರಾದವರು ಇಷ್ಟೊಂದು ಹಗುರವಾಗಿ ನಡೆದುಕೊಳ್ಳುವುದು ಒಪ್ಪತಕ್ಕದ್ದಲ್ಲ.

ಮಾಜಿ ಸಚಿವ ಆರ್.ಅಶೋಕ್, ಸೋತು ಸುಣ್ಣವಾಗಿರುವ ಸಿ.ಟಿ.ರವಿ, ಸಂಸದರಾದ ಮುನಿಸ್ವಾಮಿ, ಪ್ರತಾಪ್ ಸಿಂಹ ಇತ್ಯಾದಿ ಬಿಜೆಪಿಗರು ಕಾಂಗ್ರೆಸ್ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ನಾಲಿಗೆ ಹರಿ ಬಿಡುತ್ತಿದ್ದಾರೆ. ಶಕ್ತಿ ಯೋಜನೆಯಿಂದ ಆಗಿರುವ ಬದಲಾವಣೆ, ಜನರ ಮನಸ್ಸಿನಲ್ಲಿ ಕಾಂಗ್ರೆಸ್ ಆಳವಾಗಿ ಬೇರೂರುತ್ತಿರುವುದನ್ನು ಸಹಿಸದೇ ಇವರು ಮಾನಸಿಕವಾಗಿ ಅಸ್ಥಿರರಾಗಿರುವಂತಿದೆ. ಹೀಗಾಗಿ ಬಾಯಿಗೆ ಬಂದಂತೆ ಆರೋಪಿಸಿ ಜನತೆಯ ಗಮನ ಸೆಳೆಯುವ ವಿಫಲ ಯತ್ನ ನಡೆಸುತ್ತಿದ್ದಾರೆ.

ಬಕ್ರೀದ್ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ
ನಾವೆಲ್ಲರೂ ಪ್ರೀತಿ, ವಿಶ್ವಾಸದಿಂದ ಬದುಕೋಣ...



ಬೆಂಗಳೂರು, ಜೂ.29 (ಕೆಎಂಶಿ)–ನಾವೆಲ್ಲರೂ ವಿವಿಧ ಧರ್ಮ, ಜಾತಿಗೆ ಸೇರಿದ್ದರೂ ಮೊದಲು ನಾವೆಲ್ಲ ಮನುಷ್ಯರು. ಎಲ್ಲರೂ ಪರಸ್ಪರ ಪ್ರೀತಿ, ವಿಶ್ವಾಸದಿಂದ ಬದುಕಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿದರು. ಅವರು ಇಂದು ಬಕ್ರೀದ್ ಹಬ್ಬದ ಅಂಗವಾಗಿ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡು, ಮಾತನಾಡಿದರು. ನಮ್ಮ ನಮ್ಮಲ್ಲೇ ದ್ವೇಷ ಹುಟ್ಟುಹಾಕುವ ಅನೇಕ ಶಕ್ತಿಗಳಿವೆ. ಆ ಶಕ್ತಿಗಳು ಉದ್ದೇಶಪೂರ್ವಕವಾಗಿಯೇ ಇದನ್ನು ಮಾಡುತ್ತವೆ. ಅದಕ್ಕೆ ನಾವು ಸೊಪ್ಪು ಹಾಕುವುದಾಗಲೀ, ಮಹತ್ವ ನೀಡುವುದಾಗಲೀ ಮಾಡಬಾರದು. ಮನುಷ್ಯರು ಪ್ರೀತಿ, ವಿಶ್ವಾಸದಿಂದ, ಮನುಷ್ಯರಂತೆ ಬದುಕುವ ವಾತಾವರಣ ನಿರ್ಮಾಣ ಮಾಡಬೇಕಿದೆ. ರಾಜ್ಯದ ಅಭಿವೃದ್ಧಿಯ ಜೊತೆಗೆ ಜನತೆಯೂ ಅಭಿವೃದ್ಧಿಯಾಗಬೇಕು. ದೇವರು ಎಲ್ಲರಿಗೂ ಸದ್ಬುದ್ದಿ ನೀಡಿ, ಮನುಷ್ಯರಾಗಿ ಬಾಳುವ ಗುಣವನ್ನು ನೀಡಲಿ ಎಂದರು.

ತ್ಯಾಗದ ಸಂಕೇತ: ರಾಜ್ಯದ ಮುಸಲ್ಮಾನ ಬಾಂಧವರಿಗೆ ಬಕ್ರೀದ್ ಹಬ್ಬದ ಶುಭಾಶಯಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಇದೇ ವೇಳೆ ತಿಳಿಸಿದರು. ಬಕ್ರೀದ್ ಹಬ್ಬ ತ್ಯಾಗದ ಸಂಕೇತ. ಮನುಕುಲಕ್ಕೆ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿರುವುದಾಗಿ ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.6.2023 ಶುಕ್ರವಾರ, ಮಳೆ ನಕ್ಷತ್ರ: ಆರಿದ್ರಾ 22.06.2023 ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9ಕ್ಕೆ ಲಕ್ಷಾರ್ಚನೆ ಹೋಮ, ಕು. ಅರುಣ ತ್ಯಾಗರಾಜನ್ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶ್ರೀಶಂಕರ ಪ್ರಾರ್ಥನಾ ಮಂದಿರ.

■ **ಶ್ರೀ ಮಹರ್ಷಿ ವಾಲ್ಮೀಕಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು :** ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮೇಯರ್ ಶಿವಕುಮಾರ್, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಪ್ರಾಧ್ಯಾಪಕರಾದ ಡಾ. ವಿಜಯಲಕ್ಷ್ಮಿ, ಸಂಯೋಜನಾಧಿಕಾರಿ ಕೆ.ಕೆ. ದೇವಾನಂದ್ ವರಪ್ರಸಾದ್, ವಾಲ್ಮೀಕಿ ಟ್ರಸ್ಟ್ ಅಧ್ಯಕ್ಷೆ ಕು. ಎಸ್. ರಮ್ಯಾ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 9.30ಕ್ಕೆ.

■ **ಜೆಎಸ್‌ಎಸ್ ಫಾರ್ಮಸಿ ಕಾಲೇಜು :** ಸಂವರ್ತನಾ, ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಅಹಮದಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಫಾರ್ಮಾಸ್ಯುಟಿಕಲ್ ಎಜುಕೇಷನ್ ಅಂಡ್ ರಿಸರ್ಚ್ ನಿರ್ದೇಶಕ ಡಾ. ಶೈಲೇಂದ್ರ ಸರಾಫ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರಮಠ, ಗೌರವ ಅತಿಥಿಗಳು : ಎಹೆಚ್‌ಇಆರ್ ಸಮಕುಲಾಧಿಪತಿ ಡಾ. ಬಿ. ಸುರೇಶ್, ಕುಲಪತಿ ಡಾ. ಸುರಿಂದರ್ ಸಿಂಗ್, ಸ್ಥಳ: ಕಾಲೇಜು ಆವರಣ, ಸಂಜೆ 4ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಬೇ.ನಾ. ವಿಜಯೇಂದ್ರಾಚಾರ್ ಅವರಿಂದ ಮಹಾಭಾರತದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ದಿಗಂಬರ ಜೈನ ಸಮಾಜ, ಪದ್ಮಶ್ರೀ ಜೈನ ಮಹಿಳಾ ಸಮಾಜ:** ಆಷಾಢ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಡಾ. ಎಂ.ಪಿ. ರಾಜೇಂದ್ರಕುಮಾರ್ ಅವರಿಂದ ವಿಷಯ : ಗಾಥ : 676 ರಿಂದ 700 ಕುರಿತು ಉಪನ್ಯಾಸ, ಸ್ಥಳ: ಶ್ರೀ ಶಾಂತೀಶ್ವರಸ್ವಾಮಿ ಬಸದಿ (ಕೋಟೆ ಬಸದಿ), ಸಂಜೆ 6.45 ರಿಂದ.

■ **ಕೋಟೆ ತ್ರಿನೇಶ್ವರ ದೇವಸ್ಥಾನ:** ಗಿರಿಜಾ ಕಲ್ಯಾಣ ಮಹೋತ್ಸವ, ರಾತ್ರಿ 8ಕ್ಕೆ ಗುರುಕಾಲ ಹೊರೆಯಲ್ಲಿ ಶಯನೋತ್ಸವ, ಸ್ಥಳ: ದೇವಸ್ಥಾನ, ಕೋಟೆ ಆವರಣ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು– ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಪದ ಸಂಸ್ಕೃತಿ–ಡಾ. ಕೆ.ಎಲ್.ಪ್ರಸನ್ನಾಕ್ಷಿ, 7.15 ಭಾವಗೀತೆಗಳು–ಮೈಸೂರು ಅನಂತಸ್ವಾಮಿ, 9.05 ವಸುದೈವ ಕುಟುಂಬಕಂ – ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ವಿ.ಕೃಷ್ಣಮೂರ್ತಿ – ನಾಗಸ್ವರವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಅಂಬುಜಾ ಶ್ರೀಧರ್, 12.45 ಕಾದಂಬರಿ ವಿಹಾರ –ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಹೆಚ್.ಆರ್. ವಿಜಯ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಆರ್. ಮೋಹನ್–ಕ್ಲಾರಿಯೋನೆಟ್ ವಾದನ, 4.00 ಮಹಿಳಾರಂಗ– ಸಖೀ ಸಂವಾದ, ಪ್ರಸ್ತುತಿ– ಎಂ.ಎಸ್. ಭಾರತಿ, 4.30 ವೃತ್ತಿ ಮಾಗದರ್ಶನ–ಮೆಡಿಕಲ್ ಸ್ಟ್ಯಾಟಿಸ್ಟಿಕ್ಸ್ ವಿಷಯಗಳಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಎನ್.ಚೈತ್ರಾ ಅವರೊಂದಿಗೆ ಮಾತುಕತೆ, 6.55 ಕೃಷಿರಂಗ–ಕಿಸಾನ್‌ವಾಣಿ, ಆಧುನಿಕ ತೋಟಗಾರಿಕಾ ಬೇಸಾಯ ಪದ್ಧತಿಗಳು ಕುರಿತು ಇಲಾಖೆಯ ಜಂಟಿ ನಿರ್ದೇಶಕರಾದ ನಾಗರಾಜ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 8.00 ಚರ್ಚೆ, 9.30 ಗಾನ ಲಹರಿ, ಪ್ರಸ್ತುತಿ ಶ್ರೀಕಾಂತ ಕುಲಕರ್ಣಿ ಮತ್ತು ಮಾಯಾ ರಾಮನ್, 10.00 ವಾದ್ಯವೃಂದ, ನಿರ್ದೇಶನ– ಹೆಚ್.ಎಲ್. ಶಿವಶಂಕರ ಸ್ವಾಮಿ, 10.30 ಸವಿನೆನಪು

■ **ಶ್ರೀ ಆದಿಶಕ್ತಿ ಶ್ರೀ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ದೇವಸ್ಥಾನ ಸೇವಾ ಸಮಿತಿ :** ಆಷಾಢ ಮಾಸದ ಅಲಂಕಾರಗಳ ಪೂಜೆ, ವೀಳ್ಯೆದೆಲೆ ಅಲಂಕಾರ, ಸ್ಥಳ: ಶ್ರೀಬಂದಂತಮ್ಮ ದೇವಸ್ಥಾನ, ನ್ಯೂ ಕಾಂತರಾಜ ಅರಸ್ ರಸ್ತೆ.

■ **ಡಾ. ಲಕ್ಷ್ಮೀಗೌಡರ ಅಭಿಮಾನಿಗಳ ಬಳಗ :** ಡಾ. ಲಕ್ಷ್ಮೀಗೌಡರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ : ಕೃಷಿ ಸಚಿವ ಎನ್. ಚಲುವರಾಯಸ್ವಾಮಿ, ಪ್ರಾಸ್ತಾವಿಕ ನುಡಿ : ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ಕುಲಪತಿ ಡಾ. ಎಂ.ಎ. ಶೇಖರ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಶಾಸಕ ಜಿ.ಟಿ. ದೇವೇಗೌಡ, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮಾಜಿ ಶಾಸಕ ವಾಸು, ಸ್ಥಳ: ಕೇರಳ ಸಮಾಜ, ವಿಜಯನಗರ 2ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ :** ಶ್ರೀ ರಾಜರಾಜೇಶ್ವರಿ ದೇವತಾ ಆಷಾಢ ಮಾಸ ಪೂಜಾ ಮಹೋತ್ಸವ, ಬೆಳಗ್ಗೆ 7.30 ರಿಂದ ಪಂಚಾಮೃತಾಭಿಷೇಕ, ಬೆಳಗ್ಗೆ 10 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 5.30 ರಿಂದ ಶ್ರೀ ರಾಜರಾಜೇಶ್ವರಿ ಭಜನಾ ಮಂಡಳಿಯಿಂದ ಸೌಂದರ್ಯ ಲಹರಿ ಪಾರಾಯಣ, ಸಂಜೆ 6.30 ರಿಂದ ಬಿಇಎಂಎಲ್ ವೇದ ಬಳಗದ ಸದಸ್ಯರಿಂದ ವೇದ ಪಾರಾಯಣ, ಸಂಜೆ 8ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಜರಾಜೇಶ್ವರಿ ನಗರ.

■ **ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್, ಮೈಸೂರು ಘಟಕ :** ಚರ್ಚೆ ಹಾಗೂ ಸಂವಾದ ಕಾರ್ಯಕ್ರಮ, ಉಪಸ್ಥಿತರು : ಡೀಮ್ಡ್ ಕನ್ವರ್ಷನ್‌ನ ಧೀರೇಂದ್ರ ಮೆಹ್ತ, ವಕೀಲ ಎಂ.ವಿ. ರಮೇಶ್, ಸ್ಥಳ: ಸದರನ್ ಸ್ಟಾರ್ ಹೋಟೆಲ್, ಸಂಜೆ 7ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 30 ಶುಕ್ರವಾರ 2023


ಸಂಪುಟ: 44 | ಸಂಚಿಕೆ: 75 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ವಿವಿ ಕುಲಪತಿ ನೇಮಕ ತಡೆಯಾಜ್ಞೆ ತೆರವು ಕೋರಿದ ಅರ್ಜಿ ವಿಚಾರಣೆ ಜು.13ಕ್ಕೆ ಮುಂದೂಡಿಕೆ


ಪ್ರೊ.ಲೋಕನಾಥ್

ಮೈಸೂರು, ಜೂ.29(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ನೇಮಕಕ್ಕೆ ಹೈಕೋರ್ಟ್ ನೀಡಿರುವ ತಡೆಯಾಜ್ಞೆ ತೆರವು ಸಂಬಂಧ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಯನ್ನು ಜು.13ಕ್ಕೆ ಮುಂದೂಡಲಾಗಿದೆ. ಈಗ ಹೆಸರಾಂತ ವಿಶ್ವವಿದ್ಯಾನಿಲಯಕ್ಕೆ ಕುಲಪತಿಗಳಿಲ್ಲದೆ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹಿನ್ನಡೆಯಾಗಿದೆ.

ಪ್ರೊ.ಲೋಕನಾಥ್ ಅವರ ವಿರುದ್ಧ ಕ್ರಿಮಿನಲ್ ಪ್ರಕರಣಗಳಿವೆ. ಆದರೂ ನಿಯಮಾವಳಿಗಳನ್ನು ಉಲ್ಲಂಘನೆ ಮಾಡಿ ಅವರನ್ನು ಮೈಸೂರು ವಿವಿ ಕುಲಪತಿಯಾಗಿ ನೇಮಕ ಮಾಡಲಾಗಿದೆ. ಅವರ ಈ ನೇಮಕ ಸೂಕ್ತವಲ್ಲ ಎಂದು ಕುಲಪತಿ ರೇಸ್‌ನಲ್ಲಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ದಿವಂಗತ ಪ್ರೊ.ಯು.ಆರ್.ಅನಂತಮೂರ್ತಿ ಅವರ ಪುತ್ರ ಪ್ರೊ.ಶರತ್ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ದಾವೆಯ ವಿಚಾರಣೆ ನಡೆಸಿದ ಹೈಕೋರ್ಟ್ ಏಕ ಸದಸ್ಯ ಪೀಠ ಜೂ.21ರಂದು ತಡೆಯಾಜ್ಞೆ ನೀಡಿತ್ತು. ತಡೆಯಾಜ್ಞೆ ತೆರವುಗೊಳಿಸುವಂತೆ ಕೋರಿ ಸಲ್ಲಿಸಿದ ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ಹೈಕೋರ್ಟ್ ವಿಚಾರಣೆಯನ್ನು ಜು.13ಕ್ಕೆ ಮುಂದೂಡಿದೆ.

ರಾಜ್ಯದ ಕರಾವಳಿ ಭಾಗದಲ್ಲಿ ಮುಂದಿನ 10 ದಿನ ಭಾರೀ ಮಳೆ

NDRF ಸಿಬ್ಬಂದಿ ನಿಯೋಜನೆ

ಮಂಗಳೂರು: ರಾಜ್ಯದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಮುಂದಿನ 10 ದಿನ ವ್ಯಾಪಕ ಮಳೆಯಾಗುವ ಸಾಧ್ಯತೆಯಿದೆ ಎಂದು ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ತಿಳಿಸಿದೆ. ಈ ಅವಧಿಯಲ್ಲಿ ಅಲ್ಲಲ್ಲಿ ಅತೀ ಹೆಚ್ಚು 244.4 ಮಿಲಿ ಮೀಟರ್ ಮಳೆಯೊಂದಿಗೆ ಕರಾವಳಿ ಜಿಲ್ಲೆಯಲ್ಲಿ 64 ಮಿ.ಮೀನಿಂದ 115 ಮಿ. ಮೀ. ಚದುರಿದಂತೆ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಹೇಳಿದೆ. ರಾಜ್ಯದ ಕರಾವಳಿ ಎಲ್ಲಾ ಜಿಲ್ಲೆಗಳ ಅಲ್ಲಲ್ಲಿ ಮಿಂಚು ಸಹಿತ ಗುಡುಗು ಸಹಿತ ಮಳೆಯಾಗುವ ಸಂಭವವಿದೆ. ಕರಾವಳಿ ಪ್ರದೇಶಗಳಲ್ಲಿ ಭಾರೀ ಮಳೆಯು ಹೆಚ್ಚಿನ ಉಬ್ಬರ ವಿಳಿತದೊಂದಿಗೆ ಹೊಂದಿಕೆಯಾಗಬಹುದು, ಇದರ ಪರಿಣಾಮವಾಗಿ ತಗ್ಗು ಪ್ರದೇಶಗಳು ಜಲಾವೃತ ಮತ್ತು ಪ್ರವಾಹಕ್ಕೆ ಕಾರಣವಾಗಬಹುದು. ಅಗತ್ಯ ಪರಿಸ್ಥಿತಿಯನ್ನು ನಿಭಾಯಿಸಲು ಅಂತಹ ಪ್ರದೇಶಗಳಲ್ಲಿ ಮುಂಚಿತವಾಗಿ ಡಿ–ವಾಟರಿಂಗ್ ಪಂಪ್‌ಗಳು ಮತ್ತು ಇತರ ಉಪಕರಣಗಳನ್ನು ನಿಯೋಜಿಸಲು ಜಿಲ್ಲಾಡಳಿತಗಳಿಗೆ ತಿಳಿಸಲಾಗಿದೆ. ಯಾವುದೇ ಅನಾಹುತ ತಡೆಯಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ರಾಜ್ಯ ಡಿಆರ್‌ಎಫ್ ಸಿಬ್ಬಂದಿಯನ್ನು ದುರ್ಬಲ ಪ್ರದೇಶಗಳಲ್ಲಿ ನಿಯೋಜಿಸಲು ಸಂಬಂಧಿಸಿದ ಆಡಳಿತಕ್ಕೆ ಸೂಚಿಸಲಾಗಿದೆ

ಕೆಆರ್‌ಎಸ್, ಕಬಿನಿ ಜಲಾಶಯದ ಡೆಡ್ ಸ್ಟೋರೇಜ್‌ಗೆ ಕೆಲವೇ ಅಡಿ ಬಾಕಿ

ಮಳೆ ಬಾರದಿದ್ದರೆ ಕುಡಿಯುವ ನೀರಿಗೂ ಹಾಹಾಕಾರ...

ಮೈಸೂರು, ಜೂ.29(ಬಿಎಲ್‌ಯು)– ಜೂನ್ ತಿಂಗಳು ಕಳೆಯುತ್ತಾ ಬಂದರೂ ಮುಂಗಾರು ಮಳೆ ಬರುವ ಲಕ್ಷಣಗಳು ಕಾಣಿಸುತ್ತಿಲ್ಲ. ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯ ಬತ್ತಿ ಹೋಗುತ್ತಿವೆ. ಈ ಎರಡು ಜಲಾಶಯಗಳಲ್ಲಿ ಡೆಡ್ ಸ್ಟೋರೇಜ್‌ಗೆ ಕೆಲವೇ ಅಡಿಗಳು ಬಾಕಿ ಇದೆ. ಇದರಿಂದ ಮೈಸೂರು, ಮಂಡ್ಯ ಹಾಗೂ ಬೆಂಗಳೂರು ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಬಹುದು ಎಂಬ ಆತಂಕ ಎದುರಾಗಿದೆ.

ಕಳೆದ ವರ್ಷ ಈ ವೇಳೆಗಾಗಲೇ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯ ತುಂಬಿ ತುಳುಕುತ್ತಿದ್ದವು. ಆದರೆ ಜೂನ್ ತಿಂಗಳು ಕಳೆಯುತ್ತಿದ್ದರೂ ಮುಂಗಾರು ಮಳೆ ಆರ್ಭಟಿಸುವ ಸಂಕೇತಗಳು ಕಾಣಿಸುತ್ತಿಲ್ಲ. ಕೊಡಗಿನಲ್ಲಿ ಬಾರೀ ಮಳೆಯಾದರೆ ಕೆಆರ್‌ಎಸ್ ತುಂಬುತ್ತದೆ, ಹಾಗೆಯೇ ಕೇರಳದ ವೈನಾಡು ಪ್ರದೇಶದಲ್ಲಿ ವರುಣ ಆರ್ಭಟಿಸಿದರೆ ಕಬಿನಿ ಜಲಾಶಯ ಭರ್ತಿ ಯಾಗುತ್ತದೆ. ಆದರೆ ಕೇರಳದ ವೈನಾಡು ಹಾಗೂ ಕೊಡಗಿನಲ್ಲಿ ಈ ಭಾರಿ ಮಳೆ ಇರಲಿ, ದಟ್ಟ ಮೋಡಗಳು ಮಾಯವಾಗಿವೆ. ಕೆಆರ್‌ಎಸ್ ಜಲಾಶಯದ



ಗರಿಷ್ಠ ಮಟ್ಟ 124.80 ಅಡಿ. ಇಂದಿನ ಮಟ್ಟ 77.96 ಅಡಿ. 60 ಅಡಿಗೆ ಕೆಆರ್‌ಎಸ್ ಜಲಾಶಯದ ಡೆಡ್ ಸ್ಟೋರೇಜ್. ಈಗಿರುವ ನೀರಿನ ಪ್ರಮಾಣದಲ್ಲಿ ಕೆಆರ್‌ಎಸ್ ಡೆಡ್ ಸ್ಟೋರೇಜ್‌ಗೆ ಇನ್ನು 17 ಅಡಿ ಮಾತ್ರ ಬಾಕಿ ಇದೆ. ಜಲಾಶಯಕ್ಕೆ ಕೇವಲ 667 ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ. ಹಾಗಾಗಿ 309 ಕ್ಯೂಸೆಕ್ಸ್ ನೀರನ್ನು ಮಾತ್ರ ಜಲಾಶಯದಿಂದ ಹೊರಗೆ ಬಿಡಲಾಗುತ್ತಿದೆ. ಇನ್ನು ಕಬಿನಿ ಜಲಾಶಯದ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಲ್ಲ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿ ಆಗಿದ್ದು, ಇವತ್ತಿನ ಮಟ್ಟ 2,250 ಅಡಿ. 2,221 ಅಡಿಗೆ ಡೆಡ್ ಸ್ಟೋರೇಜ್. ಡೆಡ್ ಸ್ಟೋರೇಜ್‌ಗೆ ಇನ್ನು ಕೇವಲ 29 ಅಡಿ ಬಾಕಿ ಇದೆ. 1,461 ಕ್ಯೂಸೆಕ್ಸ್ ಜಲಾಶಯಕ್ಕೆ ಹರಿದು ಬರುತ್ತಿರುವ ಕಾರಣ 300 ಕ್ಯೂಸೆಕ್ಸ್ ನೀರನ್ನು ಮಾತ್ರ ಹೊರಗೆ ಬಿಡಲಾಗುತ್ತಿದೆ.

ಈಗ ಕೆಆರ್‌ಎಸ್‌ನಲ್ಲಿರುವ 17 ಅಡಿ ನೀರು ಹಾಗೂ ಕಬಿನಿ ಜಲಾಶಯದ 29 ಅಡಿ ನೀರು ಮೈಸೂರು, ಮಂಡ್ಯ ಹಾಗೂ ಬೆಂಗಳೂರು ● 9ನೇ ಪುಟಕ್ಕೆ

ವಿಧಾನಸಭೆ ವಿಪಕ್ಷ ನಾಯಕ, ಬಿಜೆಪಿ ರಾಜ್ಯಾಧ್ಯಕ್ಷರ ನೇಮಕಕ್ಕೆ ಕ್ಷಣಗಣನೆ

- ಪ್ರಮುಖ ಸ್ಥಾನ ಹಿಡಿಯಲು ಯಡಿಯೂರಪ್ಪ, ಸಂತೋಷ್ ಬಣ ಪೈಪೋಟಿ
- ಉಭಯರ ಬೆಂಬಲಿಗರು ಹೇಳಿಕೆಗಳ ಮೂಲಕ ಬಹಿರಂಗ ಬಲಾಬಲದ ಪ್ರದರ್ಶನ

ಬೆಂಗಳೂರು, ಜೂ.29(ಕೆಎಂಶಿ)– ವಿಧಾನಸಭೆಯ ಪ್ರತಿಪಕ್ಷದ ನಾಯಕತ್ವ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರ ಸ್ಥಾನಕ್ಕೆ ನೇಮಕಾತಿಗೆ ಕ್ಷಣಗಣನೆ ಆರಂಭವಾಗುತ್ತಿದ್ದಂತೆ ರಾಜ್ಯ ಬಿಜೆಪಿಯಲ್ಲಿನ ಆಂತರಿಕ ಕಲಹ ಬೀದಿಗೆ ಬಂದಿದೆ.



ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಬೆಂಬಲಿಗರನ್ನು ಈ ಸ್ಥಾನಕ್ಕೆ ತರಲು ಕಸರತ್ತು ನಡೆಸುತ್ತಿದ್ದಾರೆ. ಇದರ ಬೆನ್ನಲ್ಲೇ ಉಭಯ ನಾಯಕರು ಪಕ್ಷದಲ್ಲಿ ಮೇಲುಗೈ ಸಾಧಿಸಲು ತಮ್ಮ ಬೆಂಬಲಿಗರನ್ನು ಆರೋಪ ಮತ್ತು ಪ್ರತ್ಯಾರೋಪಕ್ಕೆ ಇಳಿಸಿದ್ದಾರೆ. ಜುಲೈ 3 ರಿಂದ ವಿಧಾನಮಂಡಲದ ಅಧಿವೇಶನ ಆರಂಭಗೊಳ್ಳುತ್ತಿದ್ದು, ಅದಕ್ಕೂ ಮುನ್ನ ಈ ಎರಡೂ ಪ್ರತಿಷ್ಠಿತ ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ದೆಹಲಿಯ ಬಿಜೆಪಿ ವರಿಷ್ಠರು ಮುಂದಾಗಿದ್ದಾರೆ. ಈ ಸ್ಥಾನಕ್ಕೆ ಯಾರನ್ನು ಕೂರಿಸಬೇಕು ಎಂಬ ವಿಚಾರಕ್ಕೆ ವರಿಷ್ಠರ ಪ್ರತಿನಿಧಿಗಳು ರಾಜ್ಯ ನಾಯಕರೊಟ್ಟಿಗೆ ಚರ್ಚೆ ಮಾಡಿದ್ದಾರೆ. ಚರ್ಚೆಯ ನಂತರ ಸಂತೋಷ್ ಬಣ ಮೇಲುಗೈ ಸಾಧಿಸುತ್ತದೆ ಎಂಬ ಮಾಹಿತಿ ಯಡಿಯೂರಪ್ಪ ಬಣಕ್ಕೆ ಬಂದಂತಿದೆ. ಈ ಮಾಹಿತಿ ಬರುತ್ತಿದ್ದಂತೆ ಅದನ್ನು ತಡೆಯಲು ಯಡಿಯೂರಪ್ಪ ಬೆಂಬಲಿಗರು, ಸಂತೋಷ್ ಅವರ ಹೆಸರು ಹೇಳದೆ ಪರೋಕ್ಷವಾಗಿ ಟೀಕೆಗಿಳಿದಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲಲು ವರಿಷ್ಠರು ತೆಗೆದುಕೊಂಡ ನಿಲುವುಗಳೇ ಕಾರಣ ಎಂದು ಬಹಿರಂಗ ಆರೋಪಕ್ಕೆ ಇಳಿದಿದ್ದಾರೆ. ಇದನ್ನು ಒಪ್ಪದ ಸಂತೋಷ್ ಬೆಂಬಲಿಗರು ಬೊಮ್ಮಾಯಿ ಅವರ ಆಡಳಿತ ಹಾಗೂ ಕಾಂಗ್ರೆಸ್ ಮುಖಂಡರ ಹೊಂದಾಣಿಕೆಯಿಂದ ಪಕ್ಷ ಇಂತಹ ಹೀನಾಯ ಸೋಲಿಗೆ ಕಾರಣವಾಯಿತು ಎಂದು ● 9ನೇ ಪುಟಕ್ಕೆ



ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಅವ್ಯವಸ್ಥೆ ಬಗ್ಗೆ ಹೈಕೋರ್ಟ್‌ಗೆ ಪಿಐಎಲ್

ಕೆಪಿಸಿಸಿ ವಕ್ತಾರ ಟಿ.ಎಸ್.ಸತ್ಯಾನಂದ ನಿರ್ಧಾರ



ಮಂಡ್ಯ, ಜೂ.29– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇನಲ್ಲಿ ನಿತ್ಯ ಒಂದಲ್ಲಾ ಒಂದು ಅಪಘಾತ ಸಂಭವಿಸುತ್ತಿದ್ದು, ಇದಕ್ಕೆ ಅವೈಜ್ಞಾನಿಕ ಕಾಮಗಾರಿಯೇ ಕಾರಣವಾಗಿದೆ ಎಂದು ಆರೋಪಿಸಿರುವ ಕೆಪಿಸಿಸಿ ವಕ್ತಾರ ಟಿ.ಎಸ್.ಸತ್ಯಾನಂದ, ಈ ಸಂಬಂಧ ತಾವು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡುವುದಾಗಿ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈಗಾಗಲೇ ಈ ರಸ್ತೆಯ ಅವೈಜ್ಞಾನಿಕ ನಿರ್ಮಾಣದಿಂದ ದಿನಂಪ್ರತಿ ಜನ ಅಪಘಾತಗಳಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದು, ಹೆದ್ದಾರಿಯಲ್ಲಿನ ಅಪಘಾತಗಳ ಸರಾಸರಿ ಐವತ್ತು ಪಟ್ಟು ಹೆಚ್ಚಾಗಿ, ಕೇವಲ ಆರು ತಿಂಗಳಲ್ಲಿ ಮುನ್ನೂರು ಜನ ಪ್ರಾಣ ಕಳೆದುಕೊಂಡಿದ್ದಾರೆ.


ಸತ್ಯಾನಂದ

ಭಾರತೀಯ ರೋಡ್ ಕಾಂಗ್ರೆಸ್ (ಐಆರ್‌ಸಿ) ನಿಯಮಾವಳಿಗಳ ಅನ್ವಯ ನಿರ್ಮಾಣವಾಗಬೇಕಾಗಿದ್ದ ಹೆದ್ದಾರಿ ಎಲ್ಲವನ್ನು ಗಾಳಿಗೆ ತೂರಿ, ಕೆಲವು ಸ್ವಹಿತಾಸಕ್ತಿ ವ್ಯಕ್ತಿಗಳ ಮಧ್ಯ ಪ್ರವೇಶದಿಂದ ಹಲವು ಅವಾಂತರಗಳಿಗೆ ಕಾರಣವಾಗಿದೆ ಎಂದರು. ರಸ್ತೆ ಕಾಮಗಾರಿ ಅವೈಜ್ಞಾನಿಕವಾಗಿ ಕೂಡಿದ್ದರೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನಬಂದಂತೆ ಟೋಲ್ ಶುಲ್ಕ ವಸೂಲಿಗೆ ಮುಂದಾಗಿದ್ದು, ಇದರ ವಿರುದ್ಧ ಈ ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರು ಗ್ರಾಹಕರ ವೇದಿಕೆಗೆ ● 9ನೇ ಪುಟಕ್ಕೆ

ಗುಂಡು ಪಾರ್ಟಿ ವೇಳೆ ಕಿರಿಕ್: ಸ್ನೇಹಿತನ ಮೇಲೆ ಹಲ್ಲೆಗೆ ತಾನು ತಂದ ಮಚ್ಚಿಗೆ

ತಾನೇ ಬಲಿಯಾದ ಮಾಜಿ ರೌಡಿಶೀಟರ್


ಸುಧೀರ್

ಶ್ರೀರಂಗಪಟ್ಟಣ, ಜೂ.29–ಸ್ನೇಹಿತರೊಂದಿಗೆ ಗುಂಡು ಪಾರ್ಟಿ ನಡೆಸುತ್ತಿದ್ದ ಮಾಜಿ ರೌಡಿಶೀಟರ್ ಓರ್ವ ಸ್ನೇಹಿತರಿಂದಲೇ ಬರ್ಬರವಾಗಿ ಹತ್ಯೆಯಾದ ಘಟನೆ ಶ್ರೀರಂಗಪಟ್ಟಣ ತಾಲೂಕು ಹುಲಿಕೆರೆ ಗ್ರಾಮದಲ್ಲಿ ಗುರುವಾರ ನಡೆದಿದೆ. ಇದೇ ಗ್ರಾಮದ ಸುಧೀರ್(35)

ಮೂವರು ಆರೋಪಿಗಳ ಬಂಧನ; ಮತ್ತೋರ್ವ ಪರಾರಿ

ಹತ್ಯೆಗೀಡಾದವನಾಗಿದ್ದು, ಸ್ನೇಹಿತರೊಂದಿಗೆ ನಡೆದ ಗಲಾಟೆಯ ವೇಳೆ ಈತನೇ ಮನೆಯಿಂದ ತಂದಿದ್ದ ಮಚ್ಚಿನಿಂದ ಸ್ನೇಹಿತರು ಇವನನ್ನೇ ಹತ್ಯೆಗೈದಿದ್ದಾರೆ.

ವಿವರ: ಹುಲಿಕೆರೆ ಗ್ರಾಮದ ಮಾಜಿ ರೌಡಿಶೀಟರ್ ಸುಧೀರ್ ಮತ್ತು ಈತನ ಸ್ನೇಹಿತರಾದ ಪೂರ್ಣಚಂದ್ರ, ಕುಮಾರ್, ವಿನೋದ್ ಅಲಿಯಾಸ್ ಡಿಸ್ಕೊ ವಿನಿ ಮತ್ತು ಚೆಲುವರಾಜು ಎಂಬುವರು ಇಂದು ಬೆಳಗ್ಗೆ ಗ್ರಾಮದ ಟೀ ಅಂಗಡಿಯೊಂದರ ಬಳಿ ಗುಂಡು ಪಾರ್ಟಿ ನಡೆಸಿದ್ದಾರೆ. ಈ ವೇಳೆ ಪೂರ್ಣಚಂದ್ರ ಮತ್ತು ಸುಧೀರ್ ನಡುವೆ ಯಾವುದೋ ವಿಚಾರಕ್ಕಾಗಿ ಮಾತಿಗೆ ಮಾತು ಬೆಳೆದು ವಿಕೋಪಕ್ಕೆ ಹೋಗಿದೆ. ರೊಚ್ಚಿಗೆದ್ದ ಸುಧೀರ್ ಮನೆಗೆ ಹೋಗಿ ಮಚ್ಚೊಂದನ್ನು ತಂದು ಪೂರ್ಣಚಂದ್ರನ ಮೇಲೆ ಹಲ್ಲೆಗೆ ಮುಂದಾದನೆಂದು ಹೇಳಲಾಗಿದೆ. ಉಳಿದ ಸ್ನೇಹಿತರು ● 9ನೇ ಪುಟಕ್ಕೆ

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಮತ್ತೆ ಎರಡು ಅಪಘಾತ: ಮೂವರ ಸಾವು

ಮಂಡ್ಯ, ಜೂ.29–ಕೆಎಸ್‌ಆರ್‌ಟಿಸಿ ಎಲೆಕ್ಟ್ರಿಕ್ ಬಸ್ ಪವರ್ ಪ್ಲಸ್ ಪ್ಲೇವುಡ್‌ಶೀಟ್ ತುಂಬಿದ್ದ ಬೊಲೆರೋಗೆ ಡಿಕ್ಕಿ ಹೊಡೆದ ಪರಿಣಾಮ ಕಂಡಕ್ಟರ್ ಸಾವನ್ನಪ್ಪಿ, 22 ಮಂದಿ ಗಾಯಗೊಂಡ ದುರಂತ ನಡೆದು 24 ಗಂಟೆಯಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಮತ್ತೆ ಎರಡು ಅಪಘಾತಗಳು ಸಂಭವಿಸಿದ್ದು, ದಂಪತಿ ಸೇರಿದಂತೆ ಮೂವರು ಸಾವನ್ನಪ್ಪಿದ್ದಾರೆ.

ಬೆಂಗಳೂರಿನ ಬಾಪೂಜಿ ನಗರದವರಾದ ಸನಾವುಲ್ಲಾ ಬೇಗ್(65) ಮತ್ತು ಅವರ ಪತ್ನಿ ನೂರ್ ಜಹಾನ್ ಕಾರ್ಯಕ್ರಮವೊಂದಕ್ಕಾಗಿ ಕಳೆದ ರಾತ್ರಿ ರಾಮನಗರಕ್ಕೆ ಬಂದಿದ್ದು, ಹಿಂತಿರುಗುವ ವೇಳೆ ಬಿಡದಿ ಸಮೀಪದ ಕೆಂಪನಹಳ್ಳಿ ಗೇಟ್ ಬಳಿ ರಸ್ತೆ ಬದಿ ಕೆಟ್ಟು ನಿಂತಿದ್ದ ಲಾರಿಗೆ ಸ್ಕೂಟರ್ ಡಿಕ್ಕಿ ಹೊಡೆದ ಪರಿಣಾಮ ಈ ದಂಪತಿ ಸಾವನ್ನಪ್ಪಿದ್ದಾರೆ. ಪಾರ್ಕ್ ಮಾಡಿದ್ದ ಲಾರಿಯಲ್ಲಿ ರಿಫ್ಲೆಕ್ಟರ್ ಇಲ್ಲದ ಕಾರಣ ಲಾರಿ ನಿಂತಿರುವುದು ಗೋಚರಿಸದೇ ಸನಾವುಲ್ಲಾ ಅವರು ಓಡಿಸುತ್ತಿದ್ದ ಸ್ಕೂಟರ್ ಲಾರಿಗೆ ಡಿಕ್ಕಿ ಹೊಡೆದಿದೆ ಎಂದು ಹೇಳಲಾಗಿದೆ. ಈ ಸಂಬಂಧ ಬಿಡದಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಗ ಸಾವು, ತಂದೆಗೆ ಗಾಯ: ಬೊಲೆರೋ ವಾಹನಕ್ಕೆ ಟ್ರಕ್ ಡಿಕ್ಕಿ ಹೊಡೆದ ಪರಿಣಾಮ ಕೇರಳ ಮೂಲದ ವ್ಯಕ್ತಿಯೋರ್ವ ಸಾವನ್ನಪ್ಪಿದ ಘಟನೆ ಮಂಡ್ಯದ ಬಳಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಇಂದು ಸಂಭವಿಸಿದೆ. ● 9ನೇ ಪುಟಕ್ಕೆ

ಮೈಸೂರಲ್ಲಿ ಮುಸ್ಲಿಂ ಬಾಂಧವರಿಂದ ಬಕ್ರೀದ್ ಸಾಮೂಹಿಕ ಪ್ರಾರ್ಥನೆ


ಮೈಸೂರು, ಜೂ.29(ಆರ್‌ಕೆ)–ಮೈಸೂರಿನ ತಿಲಕ್‌ನಗರದ ಹಳೇ ಈದ್ಗಾ ಮೈದಾನದಲ್ಲಿ ಇಂದು ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಮೂಲಕ ಬಕ್ರೀದ್ ಹಬ್ಬವನ್ನು ಭಕ್ತಿ–ಭಾವ ಹಾಗೂ ಸಂಭ್ರಮದಿಂದ ಆಚರಿಸಿದರು.

ನೆರೆದಿದ್ದ ಸಾವಿರಾರು ಮಂದಿಗೆ ಮೈಸೂರಿನ ಸರ್‌ಖಾಜಿ ಹಜರತ್ ಮೌಲಾನ ಮೊಹಮದ್ ಉಸ್ಮಾನ್ ಷರೀಫ್ ಅವರು ಬಕ್ರೀದ್ ಸಂದೇಶ ನೀಡಿದರು. ಪ್ರೊಫೆಟ್ ಇಬ್ರಾಹಿಂ ಖಲೀಲುಲ್ಲಾ ಮತ್ತು ಅವರ ಮಗ ಇಸ್ಮಾಯಿಲ್ ಜಬೀಉಲ್ಲಾ ಅವರ ಸ್ಮರಣಾರ್ಥ ಎಲ್ಲಾ ಮುಸ್ಲಿಂ ಬಾಂಧವರು ಬಕ್ರೀದ್ ಹಬ್ಬವನ್ನು ಆಚರಿಸುತ್ತಾರೆ. ಹಬ್ಬದ ಅಂಗವಾಗಿ ಕುರಿ ಬಲಿ ನೀಡುವ ಸಂದರ್ಭ ಎಲ್ಲರೂ ಮೈಸೂರು ನಗರದ ಸ್ವಚ್ಛತೆ ಕಾಪಾಡಬೇಕು. ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬಿಸಾಡಬೇಡಿ ಎಂದು ಅವರು ಸಲಹೆ ನೀಡಿದರು.

ಇತರ ಸಮುದಾಯದವರನ್ನು ಸೇರಿಸಿಕೊಂಡು ಹಬ್ಬ ಆಚರಣೆ ಮಾಡುವ ಮೂಲಕ ಕೋಮು ಸೌಹಾರ್ದ ಕಾಪಾಡಿಕೊಂಡು ಒಂದೇ ಕುಟುಂಬದವರಂತೆ ಸಮಾಜದಲ್ಲಿ ಸರ್ವರೂ ಶಾಂತಿಯಿಂದ ಬದುಕುವ ವಾತಾವರಣ ಸೃಷ್ಟಿಸಲು ಹಬ್ಬಗಳು ವೇದಿಕೆಯಾಗಬೇಕು ಎಂದು ಇದೇ ವೇಳೆ ಸರ್‌ಖಾಜಿ ಅವರು ತಿಳಿಸಿದರು.

ಈ ದೇಶದ ಪ್ರತಿಯೊಬ್ಬ ನಾಗರಿಕರ ಕ್ಷೇಮ ಹಾಗೂ ರಾಷ್ಟ್ರದ ಭದ್ರತೆ, ಐಕ್ಯತೆ, ಭ್ರಾತೃತ್ವ ಸಾರುವುದೇ ಹಬ್ಬದ ಮೂಲ ಉದ್ದೇಶವಾಗಿದ್ದು, ಬಕ್ರೀದ್ ಶುಭಾಶಯಗಳನ್ನು ಎಲ್ಲರಿಗೂ ಕೋರುವ ಮೂಲಕ ಪರಸ್ಪರ ಪ್ರೀತಿ–ವಿಶ್ವಾಸ, ಸಹಬಾಳ್ವೆ ಮೂಡಿಸಬೇಕೆಂದು ಮುಸ್ಲಿಂ ಧರ್ಮಗುರುಗಳು ಇದೇ ಸಂದರ್ಭ ನುಡಿದರು.

ದೇಶದ ಐಕ್ಯತೆ ಮತ್ತು ಸಮಗ್ರತೆಗಾಗಿ ಪ್ರತಿಯೊಬ್ಬ ಪ್ರಜೆಯೂ ಶ್ರಮಿಸಿದಲ್ಲಿ ಯಾವುದೇ ವೈಷಮ್ಯ, ಕೋಮುವಾದ, ಭೇದ–ಭಾವವಿಲ್ಲದೆ, ಶಾಂತಿ–ನೆಮ್ಮದಿಯಿಂದ ಸಹಬಾಳ್ವೆ ನಡೆಸಲು ಸಾಧ್ಯವಾಗುತ್ತದೆ. ನೆರೆ–ಹೊರೆಯವರು ಸ್ನೇಹಿತರು ಸಂಬಂಧಿಕರುಗಳೊಂದಿಗೆ ಉತ್ತಮ ಬಾಂಧವ್ಯ ಬೆಸೆಯುವ ವಾತಾವರಣ



ಮೈಸೂರಿನ ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ಗುರುವಾರ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಸರ್‌ಖಾಜಿ ಹಜರತ್ ಮೌಲಾನ ಮೊಹಮದ್ ಉಸ್ಮಾನ್ ಷರೀಫ್ ಅವರು ಬಕ್ರೀದ್ ಸಂದೇಶ ನೀಡಿದರು.

ನಿರ್ಮಿಸುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಮೊಹಮದ್ ಉಸ್ಮಾನ್ ಷರೀಫ್ ಅವರು ಇದೇ ಸಂದರ್ಭ ನುಡಿದರು.

ತಿಲಕ್‌ನಗರದ ಈದ್ಗಾ ಮೈದಾನದಲ್ಲಿ ನೆರೆದಿದ್ದ ಮುಸ್ಲಿಂ ಬಾಂಧವರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ಬಡವರಿಗೆ ತಮ್ಮ ಕೈಲಾದ ಸಹಾಯಹಸ್ತ ಚಾಚಿದರು. ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ● 9ನೇ ಪುಟಕ್ಕೆ



ನಕ್ಕರೆ ಅದೇ ಸ್ವರ್ಗ

ಹೆಂಡ್ತಿ : ನೀವು ಹೀಂಗೇ ಆಡ್ತಾ ಇರಿ ನರಕದಲ್ಲೂ ಜಾಗ ಸಿಗೋಲ್ಲ
ಗಂಡ : ಪ್ರತಿಯೊಂದು ಜಾಗಕ್ಕೂ ನಿನ್ನ ಜೊತೆ ಬರೋಕೆ ನನಗಿಷ್ಟ ಇಲ್ಲ.

ಮೈಸೂರು ಮಿತ್ರ

ಶುಕ್ರವಾರ, 30 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಾನು ಪದೇ ಪದೇ ಜೀವನದಲ್ಲಿ ಸೋಲುತ್ತಲೇ ಇದ್ದೆ. ಆದರೆ ಗೆಲ್ಲುವ ಛಲವನ್ನು ಯಾವತ್ತೂ ಕಳೆದುಕೊಳ್ಳಲಿಲ್ಲ. ಆದ್ದರಿಂದಲೇ ಯಶಸ್ವಿಯಾದೆ. –ಮೈಕೆಲ್ ಜೋರ್ಡಾನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹನಿ ಹನಿ ಸೇರಿದರೆ ಹಳ್ಳ, ತೆನೆ ತೆನೆ ಸೇರಿದರೆ ಬಳ್ಳ

ನಿಮ್ಮ ಪತ್ರಗಳು

ಬೆಂಗಳೂರಿನಿಂದ ಮೈಸೂರಿಗೆ ಓಡಾಡುವ ಜನರ ಅನಾನುಕೂಲತೆಗಳು

ಮಾನ್ಯರೆ,

ಸದ್ಯ ಕೆಂಗೇರಿಯಿಂದ ಮೈಸೂರಿಗೆ 6 ಪಥಗಳ ರಸ್ತೆಯಾಗಿದ್ದು, ಕೇವಲ 105 ನಿಮಿಷಗಳಲ್ಲಿ ತಡೆರಹಿತ ಬಸ್ಸುಗಳಲ್ಲಿ ಪ್ರಯಾಣ ಸಾಧ್ಯವಾಗುತ್ತಿದೆ. ಆದರೆ ಈ ತಡೆರಹಿತ ಬಸ್ಸುಗಳು ಹೊರಡುವುದು ಬೆಂಗಳೂರಿನ ಬ್ಯಾಟರಾಯನಪುರದ ಸ್ಯಾಟಲೈಟ್ ಬಸ್ ನಿಲ್ದಾಣದಿಂದ. ಸ್ಯಾಟಲೈಟ್ ಬಸ್ ನಿಲ್ದಾಣದಿಂದ ಕೆಂಗೇರಿಯವರೆಗೆ ತಡೆರಹಿತ ಬಸ್ಸುಗಳು ತಲುಪಲು ಸುಮಾರು 45 ರಿಂದ 60 ನಿಮಿಷ ತೆಗೆದು ಕೊಳ್ಳುತ್ತದೆ. ಜನರಿಗೆ ಬ್ಯಾಟರಾಯನಪುರ ಸ್ಯಾಟಲೈಟ್ ಬಸ್ ನಿಲ್ದಾಣ ತಲುಪುವುದಕ್ಕೂ ಸರಿಯಾದ ಮೆಟ್ರೋ ಸಂಪರ್ಕ ಇಲ್ಲ ಹಾಗೂ ದೀಪಾಂಜಲಿ ನಗರ ಮೆಟ್ರೋ ನಿಲ್ದಾಣದಿಂದ ಸುಮಾರು ಮುಕ್ಕಾಲು ಕಿ.ಮೀ. ಮತ್ತು ವಿಜಯನಗರ ಕಡೆಯಿಂದ ಬಸ್ಸಿನಲ್ಲಿ ಹೋದರೂ ರಸ್ತೆ ದಾಟಲು ಲಿಫ್ಟ್ ಅಥವಾ ಮೆಟ್ಟಿಲು ಬಳಸಿ ದಾಟಿ ಬಸ್ ನಿಲ್ದಾಣ ತಲುಪಬೇಕು. ಇದರಿಂದ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸುವ ಜನರಿಗೆ ಪ್ರಯಾಣದ ಸಮಯವೂ ಹೆಚ್ಚಾಗಿ ಸ್ಯಾಟಲೈಟ್ ಬಸ್ ನಿಲ್ದಾಣ ತಲುಪುವುದೂ ಒಂದು ಕಷ್ಟದ ಕೆಲಸವಾಗಿ ಪರಿಣಮಿಸುತ್ತಿದೆ. ಹಾಗಾಗಿ ಕೆಲವು ಬಸ್‌ಗಳನ್ನು ಮೆಟ್ರೋ ಸ್ಟೇಷನ್ ಬದಿಯಲ್ಲೇ ಇರುವ ಕೆಂಗೇರಿ ಬಸ್ ನಿಲ್ದಾಣದಿಂದ ಮೈಸೂರಿಗೆ (ತಡೆರಹಿತ) ಬಿಟ್ಟರೆ, ಪ್ರಯಾಣದ ಸಮಯವೂ ಕಡಿಮೆಯಾಗುತ್ತದೆ ಮತ್ತು ಮೈಸೂರಿನ ಜನತೆಗೆ ತುಂಬಾ ಅನುಕೂಲವಾಗುತ್ತದೆ.

ಹಾಗಾಗಿ ನಾನು ಮೈಸೂರಿನ ಜನರ ಪರವಾಗಿ ಕೆಂಗೇರಿ ಬಸ್ ನಿಲ್ದಾಣದಿಂದ ತಡೆರಹಿತ ಬಸ್‌ಗಳನ್ನು ಮೈಸೂರಿಗೆ ಹೊರಡಿಸುವ ಸಲುವಾಗಿ ತಕ್ಷಣವೇ ಆ ದಿಕ್ಕಿನಲ್ಲಿ ದಿಕ್ಸೂಚಿಯನ್ನು ಹೊರಡಿಸಿ, ಮೈಸೂರಿನ ಜನತೆಗೆ ಅನುಕೂಲವಾಗುವ ದಿಕ್ಕಿನಲ್ಲಿ ಮಾರ್ಗಸೂಚಿಯನ್ನು ನೀಡಬೇಕೆಂದು ಮನವಿ.

–ಎಂ.ವಿ. ಶ್ರೀನಿವಾಸ್, ಮೈಸೂರು.

ಯತ್ನಾಳ್ ದ್ವೇಷ ಬಿಟ್ಟು ವಿಶ್ವಾಸ ಗಳಿಸಲಿ

ಮಾನ್ಯರೆ,

ಇತ್ತೀಚೆಗೆ ಬಿಜೆಪಿ ಕಾರ್ಯಕರ ಸಭೆಯೊಂದರಲ್ಲಿ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು, ಉಪ–ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ನಮ್ಮ ಪಕ್ಷದ ಯಾವ ನಾಯಕರು ಮನೆಗೆ ಬಿಟ್ಟು ಕೊಳ್ಳಬೇಡಿ. ಅವರನ್ನು ಸ್ವಾಗತಿಸಿದರೆ ನಮ್ಮ ಪಕ್ಷದ ಕಾರ್ಯಕರ್ತರಿಗೆ ಸಮಸ್ಯೆ ಎಂದು ತಮ್ಮ ಭಯವನ್ನು ವ್ಯಕ್ತಪಡಿಸಿದ್ದಾರೆ.

ಡಿಕೆಶಿಯನ್ನು ಕಂಡರೆ ಬಿಜೆಪಿಯ ಕೆಲವು ನಾಯಕರಿಗೆ ಅಷ್ಟು ಭಯವಿದೆಯಾ? ಅಥವಾ ಡಿಕೆಶಿಯವರೇನು ಭಯೋತ್ಪಾದಕರೆ? ರಾಜಕಾರಣ ಚುನಾವಣೆಗೆ ಮಾತ್ರ. ನಂತರ ಎಲ್ಲರೂ ಸ್ನೇಹಿತರು. ಡಿಕೆಶಿ ಉಪ ಮುಖ್ಯಮಂತ್ರಿಯಾದ ಮೇಲೆ ಎಲ್ಲಾ ಪಕ್ಷದ ನಾಯಕರ ಮನೆಗೆ ಭೇಟಿ ನೀಡುತ್ತಿರುವುದು ರಾಜಕೀಯವನ್ನು ತಿಳಿಗೊಳಿಸುವ ಜೊತೆಗೆ ಎಲ್ಲಾ ನಾಯಕರ ಮೆಚ್ಚುಗೆಗೆ ಪಾತ್ರರಾಗುತ್ತಿದ್ದಾರೆ. ಯತ್ನಾಳ್ ಅವರ ಮನಸ್ಥಿತಿ ಹೇಗಿದೆ ಎಂದರೆ, ರಾಜಕೀಯ ಎಂದರೆ, ವರ್ಷದ 365 ದಿನವೂ ತಮ್ಮ ವಿರೋಧಿಗಳನ್ನು ದ್ವೇಷಿಸುವುದು ಮತ್ತು ಅನುಮಾನದಿಂದ ನೋಡುವುದು.

ಇದಕ್ಕೆ ಪ್ರತಿಕ್ರಿಯಿಸಿರುವ ಮಾಜಿ ಮುಖ್ಯಮಂತ್ರಿ ಬೊಮ್ಮಾಯಿಯವರು, ಮನೆಗೆ ಬಂದವರನ್ನು ಸ್ವಾಗತಿಸುವುದು ನಮ್ಮ ಸಂಪ್ರದಾಯ. ಬೇರೆಯವರಂತೆ ಒಳ ರಾಜಕೀಯ ಮಾಡಿ ಇನ್ನೊಬ್ಬರ ಸೋಲಿಗೆ ಕಾರಣವಾಗಿಲ್ಲ. ಈಗ ಯಾರು ಒಳ ರಾಜಕೀಯ ಮಾಡಿದ್ದಾರೆ ಎಂಬುದು ಬಹಿರಂಗವಾಗುತ್ತಿದೆ ಎಂದಿದ್ದಾರೆ. ಯಾತ್ನಾಳ್ ಅವರ ಹೇಳಿಕೆ ಸಣ್ಣತನದಿಂದ ಕೂಡಿದ್ದು, ಇನ್ನು ಮುಂದಾದರೂ ಅವರು ರಾಜಕೀಯ ಹೃದಯ ವೈಶಾಲತೆಯನ್ನು ಬೆಳೆಸಿಕೊಳ್ಳುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಬಸ್ ಇಲ್ಲದೆ ಗೂಡ್ಸ್ ವಾಹನಗಳ ಮೊರೆ ಹೋದ ಶಾಲಾ ಮಕ್ಕಳು



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನಾದ್ಯಂತ ವಿದ್ಯಾರ್ಥಿಗಳು ಶಾಲೆಗಳಿಗೆ ತೆರಳಲು ತುಂಬಾ ತೊಂದರೆಯಾಗಿದೆ. ಪ್ರತಿನಿತ್ಯ ಬರುತ್ತಿದ್ದ ಬಸ್‌ಗಳು ಕಡಿಮೆಯಾಗಿದ್ದು, ಇದರಿಂದಾಗಿ ಶಾಲೆಗಳಿಗೆ ತೆರಳಲು ವಿದ್ಯಾರ್ಥಿಗಳು ಗೂಡ್ಸ್ ವಾಹನದ ಮೊರೆ ಹೋಗುವಂತಾಗಿದೆ. ಆದರೆ ಗೂಡ್ಸ್ ವಾಹನಗಳಲ್ಲಿ ದನಕರುಗಳಂತೆ ತುಂಬಿಕೊಂಡು ಹೋಗುವಂತಾಗಿದ್ದು, ಇದರಿಂದ ಏನಾದರೂ ಅಪಘಾತ ಸಂಭವಿಸಿದರೆ ಇದಕ್ಕೆ ಸಾರಿಗೆ ಇಲಾಖೆ ಅಧಿಕಾರಿಗಳೇ ನೇರ ಹೊಣೆ. ಪ್ರತಿದಿನ ವಿದ್ಯಾರ್ಥಿಗಳು ಬಸ್‌ಗಾಗಿ ಕಾದು ಹಲವಾರು ದಿನಗಳ ಕಾಲ ಶಾಲೆಗೆ ಹೋಗದೆ ಮನೆಯಲ್ಲಿ ಉಳಿಯುವಂತಾಗಿದೆ. ಆದರೆ ಇದೀಗ ಪೋಷಕರು ಖಾಸಗಿ ವಾಹನಗಳನ್ನು ತರಿಸಿ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಿರುವುದು ಒಂದು ನೋವಿನ ಸಂಗತಿ. ಆದುದರಿಂದ ತಕ್ಷಣವೇ ಪಿರಿಯಾಪಟ್ಟಣ ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಅದರಲ್ಲೂ ಶಾಲಾ ಸಮಯ ಬೆಳಗ್ಗೆ 9 ಹಾಗೂ ಸಂಜೆ 4 ಗಂಟೆಗೆ ಹೆಚ್ಚುವರಿ ಬಸ್‌ಗಳನ್ನು ಹಾಕಬೇಕೆಂದು ಪೋಷಕರು ಹಾಗೂ ವಿದ್ಯಾರ್ಥಿಗಳ ಮನವಿ.

–ನೊಂದ ವಿದ್ಯಾರ್ಥಿಗಳು, ಪೋಷಕರು, ಪಿ.ಪಟ್ಟಣ ತಾ.

ಸರ್ಕಾರದ ಕಾರ್ಯ ಶ್ಲಾಘನೀಯ

ಮಾನ್ಯರೆ,

ಮಾನ್ಯ ಮುಖ್ಯಮಂತ್ರಿಗಳು ಕೆಲವು ವರ್ಷಗಳಿಂದ ವಾಸ್ತು ದೋಷ ಎಂದು ಹೇಳಿ ಮುಚ್ಚಿದ್ದ ವಿಧಾನಸೌಧದ ಒಂದು ಬಾಗಿಲನ್ನು ತೆಗೆಸಿ ಅದರಲ್ಲೇ ಒಳಹೋಗಿ ಮೂಢನಂಬಿಕೆಗೆ ಇತಿಶ್ರೀ ಹಾಡಿದ್ದಾರೆ ಹಾಗೂ ಹಿಂದಿನ ಬಿಜೆಪಿ ಸರಕಾರದ ಎಲ್ಲಾ ಹಗರಣಗಳ ತನಿಖೆಗೆ ಆದೇಶಿಸಿದ್ದಾರೆ. ಇದು ನಿಜಕ್ಕೂ ಮೆಚ್ಚುವಂತಹದ್ದು. ಆದರೆ ಇದು ಕೇವಲ ನೆಪಮಾತ್ರವಾಗಬಾರದು, ನಿಜವಾದ ತನಿಖೆ ನಡೆಸಿ ಜೈಲಿಗಟ್ಟಬೇಕು. ಆಗಲೇ ಜನರಿಗೆ ನಂಬಿಕೆ ಬರುವುದು ಹಾಗೂ ಆಷಾಢ ಶುಕ್ರವಾರದಂದು ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಪಾಸ್ ನಿಷೇಧಿಸಿರುವುದು ಹಾಗೂ 65 ವರ್ಷದ ಎಲ್ಲಾ ಹಿರಿಯರಿಗೆ ಎಲ್ಲಾ ದೇವಸ್ಥಾನಗಳಲ್ಲಿ ನೇರ ದರ್ಶನಕ್ಕೆ ಅವಕಾಶ ಮಾಡಿಕೊಟ್ಟಿರುವುದು ಶ್ಲಾಘನೀಯ. ಇದೇ ರೀತಿ ಇನ್ನೂ ಹಲವು ಜನಸಾಮಾನ್ಯ ಉಪಯೋಗಿ ಕೆಲಸ ಮಾಡಲಿ. ಅದಕ್ಕಾಗಿ, ಸರ್ಕಾರಕ್ಕೆ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳು.

–ಸಂತೋಷ, ಮೈಸೂರು

ಚಿಂತನೆ




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ನಿಜ, ಸಾಧನೆಗೆ ಅಡ್ಡ ಹಾದಿಗಳಿಲ್ಲ!!

ನಮ್ಮ ಸಮಾಜದಲ್ಲಿ ಹಲವು ರೀತಿಯ ಸಾಧನೆಗಳನ್ನು ಮಾಡಿದವರಿದ್ದಾರೆ. ಅವರು ನೃತ್ಯಪಟುಗಳಾಗಿರಬಹುದು, ಚಲನಚಿತ್ರ ಕಲಾವಿದರಾಗಿರಬಹುದು, ನಾಟಕಕಾರರಾಗಿರಬಹುದು, ಚಿತ್ರ ಬಿಡಿಸುವವರಾಗಿರಬಹುದು, ಕಮ್ಮಾರಿಕೆ, ಚಮ್ಮಾರಿಕೆ ಸೇರಿದಂತೆ ತಮ್ಮ ವೃತ್ತಿಯಲ್ಲಿ ಅಮೋಘ ಸಾಧನೆ ಮಾಡಿದವರಿದ್ದಾರೆ. ಅದೇ ರೀತಿಯಲ್ಲಿ ಉತ್ತಮ ಶಿಕ್ಷಕರು, ಉತ್ತಮ ಬರಹಗಾರರು, ಛಾಯಾಚಿತ್ರಕಾರರು, ಪತ್ರಕರ್ತರು ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ನಾವು ಕಾಣುತ್ತೇವೆ. ಇದರ ಜೊತೆಗೆ ನಿರಂತರವಾಗಿ ದಿನಗಟ್ಟಲೆ ಹಾಡು ಹೇಳುವವರು, ಚಿತ್ರ ಬರೆಯುವವರು, ನೃತ್ಯ ಮಾಡುವವರು, ಸಮುದ್ರದಲ್ಲಿ ಈಜುವವರು, ಹಿಮಾಲಯ ಪರ್ವತದಂತಹ ಎತ್ತರದ ಪರ್ವತಗಳನ್ನು ಏರುವವರು ಹೀಗೆ ಹಲವಾರು ಸಾಧನೆ ಮಾಡಿದವರನ್ನು ಕಾಣುತ್ತೇವೆ. ಅವರಿಗೆ ಹಲವು ಪ್ರಶಸ್ತಿಗಳೂ ಸಂದಿರಬಹುದು, ಅಲ್ಲದೇ ಎಲೆ ಮರೆ ಕಾಯಿಯಂತೆ ತಮ್ಮ ಕಾಯಕವನ್ನು ಸದ್ದಿಲ್ಲದೇ, ಪ್ರಚಾರ ಬಯಸದೇ ಮಾಡಿದವರೂ, ಮಾಡುತ್ತಿರುವವರೂ ಕಾಣಸಿಗುತ್ತಾರೆ. ದೊಡ್ಡ ಪ್ರಶಸ್ತಿಗಳು ಅವರನ್ನು ಅರಸಿ ಬಂದಾಗ ಹಲವಾರು ಸಂಘಸಂಸ್ಥೆಗಳು ಸನ್ಮಾನಿಸುತ್ತವೆ. ಕೆಲವೊಮ್ಮೆ ಇಂತಹ ಸಾಧಕರು ನಮ್ಮೂರಿನಲ್ಲಿ, ನಮ್ಮೊಡನೆ ಇದ್ದರೆ? ಎಂದು ಆಶ್ಚರ್ಯದಿಂದ ಅವರನ್ನು ಗೌರವಿಸುವ ಕೆಲಸವೂ ಆಗುತ್ತದೆ. ನಮ್ಮ ಪಕ್ಕದ ಮನೆಯಲ್ಲೇ ಇರುವ ಇಂತಹ ಒಬ್ಬ ಸಾಧಕರು ನಮ್ಮ ಗಮನಕ್ಕೆ ಬರದಿದ್ದರೂ ಆಶ್ಚರ್ಯವಿಲ್ಲ. ಇಂತಹವರಿಗೆ ಪ್ರಶಸ್ತಿಗಳು ಬಂದಾಗ ಅಲವರಿಗೆ ನಾವೂ ಅವರ ಹಾಗೆ ಆಗಿದ್ದಿದ್ದರೆ ಎಷ್ಟು ಚೆನ್ನಾಗಿತ್ತು ಎನ್ನಿಸುತ್ತದೆ. ಅದರಂತೆ ತಾವೂ ಆವರಂತೆ ಆಗಬೇಕು ಎಂದು ಪ್ರಯತ್ನ ಆರಂಭಿಸುವವರೂ ಇದ್ದಾರೆ.

ಆದರೆ ಒಂದಂತೂ ಸತ್ಯ, ಯಾವುದೇ ಸಾಧಕರ ಸಾಧನೆ ಒಂದೆರಡು ದಿನ, ವರ್ಷಗಳಲ್ಲಿ ಸಾಧ್ಯವಾಗಿರುವುದಿಲ್ಲ. ಅದಕ್ಕಾಗಿ ಅವರು ಹಲವಾರು ವರ್ಷಗಳ ಕಾಲ ಶ್ರಮಿಸಿರುತ್ತಾರೆ. ಶ್ರಮ ಎಂದರೆ ಆಹಾರ, ನಿದ್ರೆಗಳನ್ನೂ ಗಮನಿಸದೆ ನಿರಂತರ ಶ್ರಮಪಟ್ಟಿರುತ್ತಾರೆ. ಯಾವುದೋ ಒಂದು ಹಂತದಲ್ಲಿ ಮಾತ್ರ ಅವರು ಸಾಧಕರಾಗಿ ನಮ್ಮ ಮುಂದೆ ಪ್ರಕಟವಾಗುತ್ತಾರೆ. ಅವರನ್ನು ಕಂಡ ಹಲವರು ತಾವೂ ಹಾಗಾಗಿಲ್ಲವಲ್ಲ ಎಂದು ಹಲಬುತ್ತಾರೆ ಅಷ್ಟೆ.

ಒಬ್ಬ ಸಂಗೀತಗಾರ ಪ್ರಸಿದ್ಧನಾದ ಎಂದರೆ ಅವನ ಸಾಧನೆ ಅಲ್ಲಿಗೆ ಮುಗಿಯುವುದಿಲ್ಲ. ಅವನು ತನ್ನತನವನ್ನು ಉಳಿಸಿಕೊಳ್ಳಬೇಕಾದರೆ ಮತ್ತಷ್ಟು ಸಾಧನೆ ಮಾಡುತ್ತಲೇ ಇರಬೇಕಾಗುತ್ತದೆ. ಹೆಸರು ಬಂದ ನಂತರ ಹೇಗೂ ಹೆಸರು ಮಾಡಿದ್ದಾಗಿದೆ, ಇನ್ನು ನಾನು ಏನು ಬೇಕಾದರೂ ಮಾಡಬಹುದು ಎಂದು ಭಾವಿಸಲಾಗದು. ಅವನು ಒಮ್ಮೆ ಏನಾದರೂ ತಪ್ಪಾಗಿ ಹಾಡಿದರೆ ಅವನ ಬಗ್ಗೆ ಆವರೆಗೆ ಮೂಡಿದ್ದಂತಹ ಅಭಿಮಾನದ ಭಾವನೆ ಟುಸ್ ಆಗಿ ಬಿಡುತ್ತದೆ. ಹಾಗಾಗಿ ಹಾಡುಗಾರ ತನ್ನ ನಿದ್ರೆ, ಆಹಾರ, ವಿಹಾರಗಳ ಬಗ್ಗೆಯೂ ಜೀವಮಾನಪೂರ್ತಿ ಎಚ್ಚರಿಕೆ ವಹಿಸಬೇಕಾಗುತ್ತದೆ. ಅವರ ಆಹಾರ ಒಂದು ರೀತಿಯಲ್ಲಿ ಪಥ್ಯದಂತೆಯೇ ಇರುತ್ತದೆ. ಆಹಾರದಲ್ಲಿ ವ್ಯತ್ಯಾಸವಾದರೆ ಸ್ವರ ಹಾಳಾಗಬಹುದು. ಹಾಡುಗಾರಿಕೆಗೆ ಕಂಠ ಮುಖ್ಯ. ಹಾಗಾಗಿ ಆಹಾರದ ವಿಚಾರದಲ್ಲಿ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ, ಒಂದು ರೀತಿಯಲ್ಲಿ ಅವರು ಎಷ್ಟೇ ಶ್ರೀಮಂತರಾದರೂ ಬಡವರಂತೆ ಸರಳತೆ



ಸರಳ ಆಹಾರ ಸೇವಿಸಬೇಕಾಗುತ್ತದೆ. ಇದು ಒಂದೆರಡು ದಿನಗಳಿಗೆ ಅನ್ವಯಿಸುತ್ತದೆ ಎಂದಲ್ಲ. ಇದು ಅವರ ನಿರಂತರ ದಿನಚರಿಯಾಗ ಬೇಕಾಗುವುದು ಅನಿವಾರ್ಯವಾಗುತ್ತದೆ. ಆದರೆ ಹೊರಗಿನಿಂದ ಅವರ ಸಾಧನೆ ಹಾಗೂ ಪ್ರಶಸ್ತಿ ಗಮನಿಸಿ ನಾವೂ ಅವರಂತಾಗಿದ್ದರೆ ಎಂದು ಭಾವಿಸುವುದರಲ್ಲಿ ನೈಜತೆ ಕಂಡುಬರುವುದಿಲ್ಲ.

ಒಬ್ಬ ಶಿಕ್ಷಕನು ಉತ್ತಮ ಶಿಕ್ಷಕ ಪ್ರಶಸ್ತಿ ಗಳಿಸಿದರೆ ಮತ್ತೆ ಅವನ ಜವಾಬ್ದಾರಿ ಜಾಸ್ತಿಯೇ ಆಗುತ್ತದೆ. ಒಮ್ಮೆ ಅವನನ್ನು ಸಮಾಜ ಗಮನಿಸಲು ಆರಂಭಿಸಿದ ನಂತರ ಅವನ ನಡವಳಿಕೆ ಹಾಗೂ ಜವಾಬ್ದಾರಿ ಹೆಚ್ಚಿನದ್ದಾಗಿರುತ್ತದೆ. ನಮ್ಮಲ್ಲಿ ಅನೇಕರು ತಮ್ಮ ಓದು ಮುಗಿಸಿ ಶಿಕ್ಷಕರಾಗಿ ಕೆಲಸಕ್ಕೆ ಸೇರಿದರೆ ತಾವಿನ್ನು ಕಲಿಸುವವರು ಮಾತ್ರ ಕಲಿಯುವವರಲ್ಲ! ಎಂದು ಭಾವಿಸಿಬಿಡುತ್ತಾರೆ. ಆದರೆ ಒಬ್ಬ ಯಶಸ್ವೀ ಶಿಕ್ಷಕ ಎಂದರೆ ಅವನು ದಿನವೂ ಕಲಿಯಬೇಕಾಗಿರುತ್ತದೆ. ಅವನು ಹೆಚ್ಚು ಹೆಚ್ಚು ಅಧ್ಯಯನಶೀಲನಾಗಬೇಕಾಗುತ್ತದೆ. ಹಾಗೆ ನೋಡಿದರೆ ಅವನು ಅಧ್ಯಯನಶೀಲನಾಗಿದ್ದರಿಂದಲೇ ಅವನಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಲಭಿಸಿರುತ್ತದೆ. ಹೇಗೋ ತಾನು ಶಿಕ್ಷಕನಾಗಿದ್ದೇನೆ, ಇನ್ನು ಆರಾಮವಾಗಿ ಸಂಬಳ ಎಣಿಸಿಕೊಳ್ಳಬಹುದು ಎಂದು ಭಾವಿಸುವುದು ತಪ್ಪಾಗುತ್ತದೆ. ಇಂದಂತೂ ಮಾಹಿತಿ ಯುಗ. ನನ್ನ ವಿದ್ಯಾರ್ಥಿ ನನಗಿಂತ ಬುದ್ಧಿವಂತನಾಗಿರಬಹುದು. ಅವನ ಮುಂದೆ ನಾನು ತಪ್ಪು ಹೇಳುವ ಹಾಗಿಲ್ಲ ಹಾಗೂ ನಾನು ಅವನಿಗಿಂತ ದಡ್ಡ ಎಂದೂ ತೋರ್ಪಡಿಸಿಕೊಳ್ಳುವಂತಿಲ್ಲ ಎಂಬ ಎಚ್ಚರಿಕೆ ಶಿಕ್ಷಕನಾದವನಿಗೆ ಇರಬೇಕಾಗುತ್ತದೆ. ಇಂತಹ ಎಚ್ಚರಿಕೆ ಇರುವವರೇ ನಿರಂತರವಾಗಿ ಅಧ್ಯಯನಶೀಲರಾಗಿ, ಮನ್ನಣೆ ಗಳಿಸುತ್ತಾರೆ.

ಒಬ್ಬ ಲೇಖಕ ತನ್ನದು ಬರೆಯುವ ಕೆಲಸ ಮಾತ್ರ ಎಂದು ಭಾವಿಸುವಂತಿಲ್ಲ. ಅದಕ್ಕಾಗಿ ಅವನೂ ನಿರಂತರವಾಗಿ ಅಧ್ಯಯನ ಮಾಡಲೇಬೇಕಾಗುತ್ತದೆ. ಅದೇ ರೀತಿಯಲ್ಲಿ ಯಾವುದೇ ವೃತ್ತಿಯಲ್ಲಿ ಪರಿಣಿತರಾದವರು ನಿರಂತರವಾಗಿ ಸಾಧನೆಯ ಬಗ್ಗೆಯೇ ಮತ್ತಷ್ಟು ಗಮನ ಹರಿಸಬೇಕಾದುದು ಅನಿವಾರ್ಯ. ಇಲ್ಲದಿದ್ದರೆ ಅವರು ಪ್ರಶಸ್ತಿ ಹೇಗೆ ಗಳಿಸಿದರು, ಅವರಿಗೆ ಪ್ರಶಸ್ತಿ ಬಂದಿತೋ ಅಥವಾ ಅವರು ಪ್ರಶಸ್ತಿ ಪಡೆದರೋ ಎಂಬ ಅನುಮಾನ ಜನರಲ್ಲಿ ಮೂಡಿಬಿಡಬಹುದು.

ಯಾವುದೇ ವೃತ್ತಿಯಾಗಲಿ ಅದರಲ್ಲಿ ಒಂದಷ್ಟು ಸಾಧನೆ ಮಾಡಿದ್ದಾರೆ ಎಂದರೆ ಅವರು ನಿಜವಾಗಿಯೂ ಅದಕ್ಕಾಗಿ ಸಾಕಷ್ಟು ಶ್ರಮವಹಿಸಿದ್ದಾರೆ ಎಂದೇ ಭಾವಿಸಬೇಕಾಗುತ್ತದೆ. ಇಲ್ಲಿ ಅವರ ವಿದ್ಯಾರ್ಹತೆ ಮುಖ್ಯವಾಗುವುದಿಲ್ಲ. ಬದಲಾಗಿ ಅವರು ಆರಿಸಿಕೊಂಡ ಕ್ಷೇತ್ರದಲ್ಲಿ ಅವರು ತಮ್ಮನ್ನು ತಾವು ಹೇಗೆ ತೊಡಗಿಸಿಕೊಂಡರು, ಅವರು ಆ ಸಾಧನೆಗಾಗಿ ಪ್ರತಿದಿನ ಎಷ್ಟು ಸಮಯ ಮೀಸಲಿಡುತ್ತಿದ್ದರು ಎಂಬುದು ಮುಖ್ಯವಾಗಿರುತ್ತದೆ.

> ಇದು ಸಾಧನೆಯ ಹಂತ. ಒಮ್ಮೆಲೇ ಯಾರು ಚಿತ್ರ ರಚಿಸಿದರೂ ಅದರಲ್ಲಿ ಪಕ್ವತೆ ಇರುವುದಿಲ್ಲ. ತನ್ನ ಲೋಪಗಳನ್ನು ತಿದ್ದಿ ಕೊಳ್ಳುತ್ತಾ ಹೋದಂತೆ ಈ ಪಕ್ವತೆ ಬರುತ್ತದೆ. ಒಂದು ಗಂಟೆ ಪಾಠ ಮಾಡುವ ಶಿಕ್ಷಕ, ಒಂದು ಗಂಟೆ ಮಾತನಾಡುವ ಉಪನ್ಯಾಸಕ ಅದಕ್ಕಾಗಿ ಎಷ್ಟೋ ವರ್ಷದ ಕಠಿಣ ಸಾಧನೆ ಮಾಡಿರುತ್ತಾರೆ. ಅದನ್ನು ಗಮನಿಸಬೇಕು. ಅವರಂತೆ ನಾನೂ ತಕ್ಷಣವೇ ಆಗಬೇಕೆಂದರೆ ಅದು ಸಾಧ್ಯವಾಗದ ಮಾತು. ಅದಕ್ಕೇ ಹೇಳುವುದು ಸಾಧನೆಗೆ ಯಾವುದೇ ಅಡ್ಡದಾರಿಗಳು, ಅಂದರೆ ಶಾರ್ಟ್‌ಕಟ್‌ಗಳು ಇರುವುದಿಲ್ಲ.

ಇಂತಹ ಸಾಧಕರ ಬಗ್ಗೆ ಪತ್ರಿಕೆಗಳಲ್ಲಿ, ಆಕಾಶವಾಣಿ, ದೂರದರ್ಶನಗಳಂತಹ ಮಾಧ್ಯಮಗಳಲ್ಲಿ ಸಂದರ್ಶನ ಪ್ರಕಟವಾಗುತ್ತಿರುತ್ತದೆ. ನಿಜವಾದ ಸಾಧಕ ನಾನು ಸಾಧಿಸಿದ್ದು ಕಡಿಮೆಯೇ, ನನಗಿಂತ ಸಾಧಕರು ಇನ್ನೂ ಹೆಚ್ಚಿರಬಹುದು, ಅಂತಹವರಿಗೆ ಪ್ರಶಸ್ತಿ ಬರಬೇಕು ಎಂದು ವಿನೀತ ಭಾವದಿಂದ ನುಡಿಯುತ್ತಾರೆ. ಇಂತಹವರಿಗೆ ಪ್ರಶಸ್ತಿ ಬಂದಾಗ, ಅವರ ಸಂದರ್ಶನ ಆಲಿಸಿದಾಗ, ಅವರ ಬಗ್ಗೆ ನಿಜವಾಗಿಯೂ ಹೆಮ್ಮೆಯಾಗುತ್ತದೆ, ಅಭಿಮಾನ ಮೂಡುತ್ತದೆ. ಸಾಧಕರ ಸಾಧನಾಪೂರ್ವದ ಜೀವನದ ಬಗ್ಗೆ ಗಮನಿಸಿದಾಗ ಅವರೆಂದೂ ತಮ್ಮ ಗುರುಗಳ ಬಗ್ಗೆ, ಮಾರ್ಗದರ್ಶಕರ ಬಗ್ಗೆ ಅಗೌರವವಾಗಿ ಮಾತನಾಡಿರುವುದಿಲ್ಲ, ಅದು ಅವರ ವಿಧೇಯತೆಯನ್ನು ತೋರಿಸುತ್ತದೆ. ಅದು ಸಾಧನೆಯ ಅಗತ್ಯಗಳಲ್ಲಿ ಒಂದಾಗಿರುತ್ತದೆ.

ಈ ಹಂತದಲ್ಲಿ ಓದಿದ ಒಂದು ಘಟನೆ ನೆನಪಿಗೆ ಬರುತ್ತದೆ. 'ರಾಜಾ ರವಿವರ್ಮ' ಒಬ್ಬ ಪ್ರಖ್ಯಾತ ಚಿತ್ರ ಕಲಾವಿದರು. ಒಮ್ಮೆ ಅವರು ಒಂದು ನಗರದಲ್ಲಿ ಸಂಚರಿಸುತ್ತಿದ್ದಾಗ ಒಬ್ಬ ಯುವತಿ ಇವರನ್ನು ಗುರುತಿಸಿ ತನಗಾಗಿ ಒಂದು ಚಿತ್ರವನ್ನು ಬರೆದುಕೊಡಲು ಕೋರುತ್ತಾಳೆ. ಇದಕ್ಕೆ ರವಿವರ್ಮ ಆಶ್ಚರ್ಯ ವ್ಯಕ್ತಪಡಿಸುತ್ತಾ, ಹೀಗೆ ರಸ್ತೆಯಲ್ಲಿ ಚಿತ್ರ ಬರೆದುಕೊಡಿ ಎಂದರೆ ಹೇಗೆ ಅದಕ್ಕೆ ಸಮಯ ಬೇಕಾಗುತ್ತದೆ. ಮುಂದೆ ಯಾವಾಗಲಾದರೂ ಭೇಟಿಯಾದಾಗ ಬರೆದುಕೊಡುವೆ ಎಂದರು. ಆದರೆ ಆ ಯುವತಿ ಪಟ್ಟುಬಿಡದೇ ಈ ಕ್ಷಣವೇ ಚಿತ್ರ ಬರೆದುಕೊಡುವಂತೆ ಹಠ ಹಿಡಿದು, ಕೋರಿದಳು. ಕೊನೆಗೆ ಆಕೆಯ ಬಲವಂತಕ್ಕೆ ರಸ್ತೆಯಲ್ಲಿಯೇ ಒಂದು ಚಿತ್ರ ಬರೆದು ನೀಡುತ್ತಾ ನಸುನಗುತ್ತಲೇ ಆಕೆಗೆ ಹೇಳುತ್ತಾರೆ. 'ಇದರ ಬೆಲೆ ಕೋಟಿ ರೂಪಾಯಿಗೂ ಅಧಿಕವಾಗಿದ್ದು, ಎಚ್ಚರಿಕೆಯಿಂದ ಕಾಪಾಡಿಕೊಳ್ಳಿ'. ಆ ಯುವತಿ ಆಶ್ಚರ್ಯದಿಂದ ಅದನ್ನು ಪಡೆದು ಪೇಟೆಯಲ್ಲಿ ಹೋಗಿ ಪ್ರಮುಖರ ಚಿತ್ರಕಲೆಗಳನ್ನು ಮಾರುವವರ ಅಂಗಡಿಯಲ್ಲಿ ಈ ಚಿತ್ರದ ಬೆಲೆ ಎಷ್ಟಿರಬಹುದು ಎಂದು ಕೇಳುತ್ತಾಳೆ. ಅವರು ಕಲೆಗಳ ರವಿವರ್ಮ ಹೇಳಿದ್ದ ಮಾತನ್ನೇ ಹೇಳುತ್ತಾರೆ. ಚಿತ್ರ ಕೋಟಿಗೂ ಅಧಿಕ ಬೆಲೆ ಬಾಳುತ್ತದೆ ಎನ್ನುತ್ತಾರೆ. ಅದನ್ನು ಕೇಳಿ ಯುವತಿಗೆ ಆಶ್ಚರ್ಯವಾಗುತ್ತದೆ. ಆಕೆ ಕೂಡಲೇ ರವಿವರ್ಮರನ್ನು ಭೇಟಿಯಾಗಲು ತೆರಳುತ್ತಾಳೆ. ಅವರ ಭೇಟಿಯಾಗಿ, 'ನೀವು ಕೇವಲ ಹತ್ತು ನಿಮಿಷದಲ್ಲಿ, ಅದೂ ರಸ್ತೆಯಲ್ಲಿ ಚಿತ್ರಿಸಿದ ಚಿತ್ರಕ್ಕೆ ಇಷ್ಟೊಂದು ಬೆಲೆ ಇದೆ ಎಂದು ನನಗೆ ಗೊತ್ತಿರಲಿಲ್ಲ. ನನಗೂ ಚಿತ್ರ ಬರೆಯುವುದನ್ನು ಹೇಳಿಕೊಡಿ ಎಂದು ಕೋರುತ್ತಾಳೆ. ಆಗ ರವಿವರ್ಮ ನಗುತ್ತಾ, 'ನಾನು ನಿನಗಾಗಿ ಹತ್ತೇ ನಿಮಿಷದಲ್ಲಿ ಈ ಚಿತ್ರ ಬರೆದುಕೊಟ್ಟೆ ನಿಜ. ಆದರೆ ಅದರ ಹಿಂದೆ ನನ್ನ ಮೂವತ್ತು ವರ್ಷಗಳ ಪರಿಶ್ರಮವಿದೆ. ನೀನೂ ಸಹಾ ನಿನ್ನ ಮೂವತ್ತು ವರ್ಷಗಳನ್ನು ಈ ಕಲೆಗಾಗಿ ತ್ಯಾಗ ಮಾಡಿದರೆ ನನಗಿಂತ ಎತ್ತರಕ್ಕೆ ಬೆಳೆಯಬಲ್ಲೆ ಎಂದು ಹೇಳುತ್ತಾರೆ. ಅದನ್ನು ಕೇಳಿ ಆಕೆ ಗರಬಡಿದವಳಂತೆ ನಿಲ್ಲುತ್ತಾಳೆ.

ಇದು ಸಾಧನೆಯ ಹಂತ. ಒಮ್ಮೆಲೇ ಯಾರು ಚಿತ್ರ ರಚಿಸಿದರೂ ಅದರಲ್ಲಿ ಪಕ್ವತೆ ಇರುವುದಿಲ್ಲ. ತನ್ನ ಲೋಪಗಳನ್ನು ತಿದ್ದಿಕೊಳ್ಳುತ್ತಾ ಹೋದಂತೆ ಈ ಪಕ್ವತೆ ಬರುತ್ತದೆ. ಒಂದು ಗಂಟೆ ಪಾಠ ಮಾಡುವ ಶಿಕ್ಷಕ, ಒಂದು ಗಂಟೆ ಮಾತನಾಡುವ ಉಪನ್ಯಾಸಕ ಅದಕ್ಕಾಗಿ ಎಷ್ಟೋ ವರ್ಷದ ಕಠಿಣ ಸಾಧನೆ ಮಾಡಿರುತ್ತಾರೆ. ಅದನ್ನು ಗಮನಿಸಬೇಕು. ಅವರಂತೆ ನಾನೂ ತಕ್ಷಣವೇ ಆಗಬೇಕೆಂದರೆ ಅದು ಸಾಧ್ಯವಾಗದ ಮಾತು. ಅದಕ್ಕೇ ಹೇಳುವುದು ಸಾಧನೆಗೆ ಯಾವುದೇ ಅಡ್ಡದಾರಿಗಳು, ಅಂದರೆ ಶಾರ್ಟ್‌ಕಟ್‌ಗಳು ಇರುವುದಿಲ್ಲ ಎಂದು.

ಇಂದು ನಮ್ಮ ಯುವಜನತೆ ಹೀಗೆ ಸಾಧನೆ ಮಾಡಿರುವವರ ಕಡೆಗೆ ಗಮನಹರಿಸುವುದಿಲ್ಲ. ಅವರಿಗೆ ಎಲ್ಲವನ್ನೂ ಮೊಬೈಲ್ ತಿಳಿಸಿ ಕೊಡುತ್ತದೆ ಎಂಬ ಭಾವನೆ ಇದೆ. ಹಾಗಾಗಿ ಅವರು ಸಾಧಕರ ಹಿಂದಿನ ಪರಿಶ್ರಮವನ್ನು ಕಂಡುಕೊಳ್ಳುವುದೇ ಇಲ್ಲ. ಈ ಹಿಂದೆ ಬರುತ್ತಿದ್ದ ಚಲನಚಿತ್ರಗಳಲ್ಲಿ (ಕನ್ನಡವೂ ಸೇರಿದಂತೆ) ಇಂತಹ ಸಾಧಕರ ಜೀವನವನ್ನು ಕಥೆಯಾಗಿ ಇರಿಸಿಕೊಳ್ಳಲಾಗುತ್ತಿತ್ತು. ಕನ್ನಡದಲ್ಲಿ ಬಂದ ಅನಕೃ ಅವರ ಕಾದಂಬರಿ 'ಸಂಧ್ಯಾರಾಗ' ಚಿತ್ರದಲ್ಲಿ (ಪುಸ್ತಕ ಪ್ರಕಟವಾಗಿದ್ದು 1935 ರಲ್ಲಿ ಹಾಗೂ ಚಲನಚಿತ್ರ ಬಿಡುಗಡೆಯಾದದ್ದು 1966 ರಲ್ಲಿ) ಬರುವ ಲಕ್ಷ್ಮಣ ಎಂಬ ಪಾತ್ರದಲ್ಲಿ ಸಂಗೀತ ಕಲಿಯಲು ಪಡಬೇಕಾದ ಬವಣೆಗಳನ್ನು ಚಿತ್ರಿಸಲಾಗಿದೆ. ಇದು ಎಂತಹವರ ಮನಸ್ಸನ್ನೂ ಸೆಳೆಯುವಂತಿತ್ತು. ಆ ಚಿತ್ರವನ್ನು ನೋಡಿದ ಹಲವರು ತಮ್ಮ ಜೀವನಕ್ರಮವನ್ನು ಬದಲಿಸಿಕೊಂಡಿದ್ದೂ ಇದೆ. ಅಂತಹ ಸೆಳೆತ ಆ ಚಲನಚಿತ್ರಕ್ಕಿತ್ತು. ಇಂತಹ ಹಲವು ಚಿತ್ರಗಳು ಕನ್ನಡದಲ್ಲಿ ಬಂದಿವೆ, ಆದರೆ ಬಹಳ ಹಿಂದೆ. ಇಂದು ಮಕ್ಕಳು ಇಂತಹ ಚಿತ್ರವನ್ನು ವೀಕ್ಷಿಸಲು ಮನಸ್ಸೇ ಮಾಡುವುದಿಲ್ಲ. ಮೊಬೈಲ್‌ನಲ್ಲಿ ಇದು ಕಾಣುವುದೂ ಇಲ್ಲ. ಈಗೆಲ್ಲಾ ಧಾವಂತದ ಯುಗ. ಏನಾದರೂ ಸಾಧನೆ ಮಾಡಬೇಕೆಂದರೆ ಅದು ತಕ್ಷಣವೇ ಆಗಿಬಿಡಬೇಕು ಎಂಬ ಮನೋಭಾವವಿದೆ. ಈ ಮನೋಭಾವ ಎಂತಹ ಸಾಧಕರನ್ನು ಹುಟ್ಟುಹಾಕಲು ಸಾಧ್ಯ ಹೇಳಿ?

ಅದೃಷ್ಟಕ್ಕೆ ನಮ್ಮ ನಡುವೆ ಇಂದಿಗೂ ಸಾಧನೆ ಮಾಡುತ್ತಿರುವವರು ಕಂಡುಬರುತ್ತಿದ್ದಾರೆ. ಇಂದಿಗೂ ಕಷ್ಟಪಟ್ಟು ಸಂಗೀತ ಕಲಿಯುವವರು, ಸಂಶೋಧನೆ ಮಾಡುವವರು, ಹಗಲು ಇರುಳೆನ್ನದೆ ಚಿತ್ರಕಲೆಯನ್ನು ಮೈಗೂಡಿಸಿಕೊಂಡವರು, ಹೀಗೆ ವಿವಿಧ ಕೇತ್ರದ ಸಾಧಕರು ಕಂಡು ಬರುತ್ತಾರೆ. ಅಂತಹವರ ಸಾಧನಾಗಾಥೆಯನ್ನು ಇಂದಿನ ಯುವ ಪೀಳಿಗೆಗೆ ಗೊತ್ತುಪಡಿಸಬೇಕು, ಹಾಗೂ ಸಾಧನೆಗೆ ಯಾವುದೇ ಅಡ್ಡದಾರಿಗಳಿಲ್ಲ, ಅದು ದೀರ್ಘ ಕಾಲದ ತಪಸ್ಸು. ಅದನ್ನು ಸಿದ್ಧಿಸಿಕೊಳ್ಳಬೇಕು ಎಂದು ತಿಳಿಯಪಡಿಸಬೇಕಾಗಿದೆ.

ರಿಂಗ್ ರಸ್ತೆಯಲ್ಲಿ ಕಳಚಿ ಬಿದ್ದ ಕೇಬಲ್; ವಾಹನ ಸವಾರರಿಗೆ ಅಪಾಯದ ಆತಂಕ




ಮೈಸೂರು, ಜೂ.29 (ಸಿಐಎನ್)– ಮೈಸೂರಿನ ಹೊರವರ್ತುಲ ರಸ್ತೆಯಲ್ಲಿ ಯರಗನಹಳ್ಳಿ ಬಳಿ ಅಪಾಯಕಾರಿ ಪರಿಸ್ಥಿತಿ ಎದುರಾಗಿದೆ. ದೂರವಾಣಿ ಸಂಪರ್ಕದ ಕೇಬಲ್ ಕಳಚಿ ಬಿದ್ದಿದ್ದು, ವಾಹನ ಚಾಲಕರು ಅದರಲ್ಲೂ ದ್ವಿಚಕ್ರ ವಾಹನ ಸವಾರರು ಆತಂಕದಲ್ಲಿ ಸಂಚರಿಸುವ ಸ್ಥಿತಿ ನಿರ್ಮಾಣವಾಗಿದೆ.

ರಸ್ತೆಯ ಒಂದು ಬದಿಯಲ್ಲಿ ಬಿದ್ದಿರುವ ಈ ಕೇಬಲ್ ದ್ವಿಚಕ್ರ ವಾಹನಗಳ ಚಕ್ರಕ್ಕೆ ಸುತ್ತಿಕೊಂಡರೆ ಅಪಾಯ ಸಂಭವಿಸುವ ಸಾಧ್ಯತೆ ಹೆಚ್ಚಿದೆ. ಅದರಲ್ಲೂ ರಾತ್ರಿ ವೇಳೆ ಇದರ ಅರಿವಿಲ್ಲದೆ ಚಲಿಸುವ ದ್ವಿಚಕ್ರ ವಾಹನ ಸವಾರರು ತಮ್ಮದಲ್ಲದ ತಪ್ಪಿಗೆ ಅಪಾಯ ತಂದುಕೊಳ್ಳುವ ಆತಂಕವಿದೆ.

ಸಾಮಾನ್ಯವಾಗಿ ರಿಂಗ್ ರಸ್ತೆಯಲ್ಲಿ ವಾಹನಗಳು ವೇಗವಾಗಿ ಚಲಿಸುವುದರಿಂದ ಇಂತಹ ಅವಘಡಗಳು ಸಂಭವಿಸುವ ಸಾಧ್ಯತೆಗಳು ಹೆಚ್ಚಾಗಿದ್ದು, ಅಪಾಯಕ್ಕೂ ಮುನ್ನವೇ ಸಂಬಂಧಪಟ್ಟ ಅಧಿಕಾರಿಗಳು, ಸಿಬ್ಬಂದಿ ಕೇಬಲ್ ವೈರ್ ತೆರವು ಕಾರ್ಯಕ್ಕೆ ಮುಂದಾಗಬೇಕಿದೆ.

ಹೆದ್ದಾರಿಗಳ ಪೆಟ್ರೋಲಿಂಗ್‌ಗೆ ಈಗ ಹೆಚ್ಚುವರಿಯಾಗಿ ನಾಲ್ಕು ವಾಹನಗಳನ್ನು ಸೇರ್ಪಡೆಗೊಳಿಸಲಾಗಿದೆ. ಇವುಗಳನ್ನು ಸಿಬ್ಬಂದಿ ಇಂತಹ ಅಪಾಯಕಾರಿ ಸನ್ನಿವೇಶಗಳನ್ನು ನಿವಾರಿಸುವ ಕಾರ್ಯ ಮಾಡಬೇಕಿದೆ.

ಗೃಹಜ್ಯೋತಿ ಅರ್ಜಿ ಸಲ್ಲಿಕೆಗೆ ಹಣ ವಸೂಲಿ; ಕ್ರಮಕ್ಕೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹ



ಮೈಸೂರು, ಜೂ.29– ಗೃಹ ಜ್ಯೋತಿ ಯೋಜನೆಗೆ ಅರ್ಜಿ ಸಲ್ಲಿಸುವ ಸಾರ್ವಜನಿಕರಿಂದ ಹಣ ಸುಲಿಗೆ ಮಾಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಗ್ರಹಿಸಿದ್ದಾರೆ.

ಗೃಹ ಜ್ಯೋತಿ ಯೋಜನೆಗೆ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಲು 20 ರೂ. ಸೇವಾ ಶುಲ್ಕ ನಿಗದಿಗೊಳಿಸಲಾಗಿದೆ. ಆದರೆ ಸರ್ಕಾರದಿಂದ ಅನುಮತಿ ಪಡೆದಿರುವ ಸೇವಾ ಕೇಂದ್ರಗಳು ಹಾಗೂ ಸೈಬರ್ ಸೆಂಟರ್‌ಗಳಲ್ಲಿ 50ರಿಂದ 150 ರೂ. ವಸೂಲಿ ಮಾಡಲಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಹೆಚ್ಚು ಹಣವನ್ನು ದೋಚುತ್ತಿದ್ದಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ದೂರಿದ್ದಾರೆ.

ಕೂಡಲೇ ಸೇವಾ ಕೇಂದ್ರಗಳ ನಿರ್ವಹಣೆ ಮಾಡುವವರ ಸಭೆ ಕರೆದು ಕಟ್ಟು ನಿಟ್ಟಿನ ಸೂಚನೆ ನೀಡಬೇಕು. ಖಾಸಗಿ ಸೈಬರ್ ಸೆಂಟರ್‌ನವರಿಗೂ ಎಚ್ಚರಿಕೆ ನೀಡಬೇಕು. ಚೆಸ್ಕಾಂ ಮೂಲಕವೇ ವಿದ್ಯುತ್ ಗ್ರಾಹಕರಿಗೆ ಉಚಿತವಾಗಿ ಅರ್ಜಿ ಸ್ವೀಕಾರ ಮಾಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.


ಪ್ರತ್ಯೇಕ ಬಸ್ ಬೇಕು: ಶಕ್ತಿ ಯೋಜನೆ ಮೂಲಕ ಮಹಿಳೆಯರಿಗೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಉಚಿತ ಬಸ್ ಸೇವೆ ಕಲ್ಪಿಸಿರುವುದರಿಂದ ಎಲ್ಲಾ ಬಸ್‌ಗಳೂ ರಶ್ ಆಗಿರುತ್ತವೆ. ಪರಿಣಾಮ ವಿದ್ಯಾರ್ಥಿಗಳು ಸಕಾಲದಲ್ಲಿ ಶಾಲಾ–ಕಾಲೇಜಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಶಕ್ತಿ ಯೋಜನೆಯಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗುವುದು ಯಾವ ನ್ಯಾಯ. ಹಾಗಾಗಿ ಹೆಚ್ಚು ವಿದ್ಯಾರ್ಥಿಗಳು ಸಂಚರಿಸುವ ಮಾರ್ಗದಲ್ಲಿ ಅವರಿಗಾಗಿಯೇ ಪ್ರತ್ಯೇಕ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಒತ್ತಾಯಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ನಿರಂತರ ಅಪಘಾತ

ರಸ್ತೆ ಸುರಕ್ಷತೆಗಾಗಿ ಹೆದ್ದಾರಿ ಪ್ರಾಧಿಕಾರಕ್ಕೆ 58 ಅಂಶಗಳ ವರದಿ ಸಲ್ಲಿಕೆ

ಸೂಚನಾ ಫಲಕ, ಕಳವಾಗಿರುವೆಡೆ ಕಬ್ಬಿಣದ ಬ್ಯಾರಿಕೇಡ್ ಅಳವಡಿಸುವ ಕಾರ್ಯ ಆರಂಭ, ಸಿಸಿ ಟಿವಿ ಸರ್ವಲನ್ಸ್ ಕ್ಯಾಮರಾ, ಹೈವೇ ಪೆಟ್ರೋಲಿಂಗ್ ವಾಹನ ಸೌಲಭ್ಯಕ್ಕೂ ಮುಂದಾಗಿರುವ ಎನ್‌ಹೆಚ್‌ಎಐ



ಕುಂಬಳಗೋಡು, ಬಿಡದಿ, ರಾಮನಗರ, ಚನ್ನಪಟ್ಟಣ ಸಂಚಾರ ಕೇಂದ್ರಗಳಲ್ಲಿ ಅಪಘಾತಗಳು

ತಿಂಗಳು	ಮಾರಣಾಂತಿಕ ಅಪಘಾತಗಳು	ಸಾವು	ಮಾರಣಾಂತಿಕವಲ್ಲದ ಅಪಘಾತಗಳು	ಗಾಯಗೊಂಡವರು
ಜನವರಿ 2023	13	13	50	63
ಫೆಬ್ರವರಿ 2023	13	13	30	51
ಮಾರ್ಚ್ 2023	16	16	48	76
ಏಪ್ರಿಲ್ 2023	14	18	52	100
ಮೇ 2023	29	31	56	75
ಒಟ್ಟು	85	91	236	365

ಟಿಪ್ಪಣಿ : ಕಳೆದ 9 ತಿಂಗಳಲ್ಲಿ, 595 ಅಪಘಾತಗಳು, 158 ಸಾವು ಮತ್ತು 538 ಮಂದಿಗೆ ಗಾಯ

ಮೈಸೂರು, ಜೂ.29(ಆರ್‌ಕೆ)–ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಅಪಘಾತಗಳನ್ನು ತಪ್ಪಿಸಲು ರಾಮನಗರ ಜಿಲ್ಲಾ ಪೊಲೀಸರು 54 ಅಂಶಗಳ ಸಮಗ್ರ ವರದಿಯನ್ನು ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (NHAI)ಕ್ಕೆ ಸಲ್ಲಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಈ ಹೆದ್ದಾರಿಯಲ್ಲಿ ಅಪಘಾತಗಳು ಹೆಚ್ಚಾಗಿ, ಭಾರೀ ಸಾವು–ನೋವುಗಳಾಗುತ್ತಿರುವುದರಿಂದ ಅಧ್ಯಯನ ನಡೆಸಿರುವ ಪೊಲೀಸರು, ಅಪಘಾತಕ್ಕೆ ಕಾರಣಗಳೇನು, ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ 54 ಅಂಶಗಳ ಸಲಹೆಯೊಂದಿಗೆ ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಎನ್‌ಹೆಚ್‌ಎಐಗೆ ಜೂನ್ 12ರಂದು ಸಮಗ್ರ ವರದಿ ಸಲ್ಲಿಸಿದ್ದಾರೆ.

ವಾಹನಗಳ ಅತೀ ವೇಗ, ಅಜಾಗರೂಕ ಚಾಲನೆ, ರಸ್ತೆ ಸುರಕ್ಷತಾ ಕೊರತೆ ಸೇರಿದಂತೆ ಹಲವು ಅಂಶಗಳು ಅಪಘಾತಕ್ಕೆ ಪ್ರಮುಖ ಕಾರಣವಾಗಿದ್ದು, ಮುಂದೆ ವೇಗವಾಗಿ ಚಲಿಸುತ್ತಿರುವ ವಾಹನಗಳು ಹಠಾತ್ ನಿಧಾನ ಮಾಡುವುದು, ಸೂಚನೆ ನೀಡದೇ ಎಡ ಮತ್ತು ಬಲ ಪಥಕ್ಕೆ ಸಾಗುತ್ತಿರುವುದೂ ಸಹ ಹಿಂಬದಿಯಿಂದ ವಾಹನ ಡಿಕ್ಕಿ ಹೊಡೆಯಲು ಕಾರಣ ಎಂಬುದನ್ನು ವರದಿಯಲ್ಲಿ ತಿಳಿಸಲಾಗಿದೆ.

ರಸ್ತೆಯಲ್ಲಿ ದೀಪಗಳು, ಸಂಚಾರ ಸೂಚನಾ ಫಲಕಗಳ ಕೊರತೆ, ಮಳೆ ನೀರು ಸರಾಗವಾಗಿ ಹರಿದು ಹೋಗಲು ಅವಕಾಶವಿಲ್ಲದೇ ರಸ್ತೆಯಲ್ಲಿ ನಿಲ್ಲುವುದರಿಂದ ವೇಗವಾಗಿ ಬರುವ ವಾಹನಗಳು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಅಪ್ಪಳಿಸುತ್ತಿರುವುದರಲ್ಲದೇ, ವಾಹನಗಳ ವೇಗದ ರಭಸಕ್ಕೆ ಮಳೆ ನೀರು ಎಡ ಮತ್ತು ಬಲ ಬದಿಯಲ್ಲಿ ಚಲಿಸುವ ವಾಹನಗಳಿಗೆ ಬಲವಾಗಿ ತಾಕುವುದರಿಂದ ಅಪಘಾತಗಳು ಸಂಭವಿಸುತ್ತಿವೆ ಎಂದು ವರದಿಯಲ್ಲಿ ನಮೂದಿಸಲಾಗಿದೆ.

'ನಿಧಾನವಾಗಿ ಚಲಿಸಿ', 'ತಿರುವು ಇದೆ' ಎಂಬಿತ್ಯಾದಿ ಸೂಚನಾ ಫಲಕ ಅಳವಡಿಸಿ ಅಪಘಾತ ವಲಯಗಳ ಬಗ್ಗೆ ಕರಪತ್ರ, ಧ್ವನಿವರ್ಧಕಗಳ ಮೂಲಕ ವಾಹನ ಚಾಲಕರು, ಸವಾರರಲ್ಲಿ ಜಾಗೃತಿ ಮೂಡಿಸಬೇಕು. ಫ್ಲೈ ಓವರ್‌ಗಳ ಕಂಬಗಳ ಮೇಲೆ ದಪ್ಪ ಅಕ್ಷರಗಳಲ್ಲಿ ಎಚ್ಚರಿಕೆಯ ಸಂದೇಶಗಳನ್ನು ಬರೆಯಬೇಕು ಎಂದು ಪೊಲೀಸರು ಸಲಹೆ ನೀಡಿದ್ದಾರೆ.

ಈ ಎಕ್ಸ್‌ಪ್ರೆಸ್ ವೇಯಲ್ಲಿ ನಿತ್ಯ 56,000ಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತಿದ್ದು, ಕೆಲವರು ಆರಂಭದಿಂದ ಅಂತ್ಯದವರೆಗೂ ಬ್ರೇಕ್ ಹಾಕದೇ ಬರೀ ಆಗ್ಸಲೇಟರ್ ತುಳಿಯುತ್ತಲೇ ಚಾಲನೆ ಮಾಡುತ್ತಿರುತ್ತಾರೆ. ಗಂಟೆಗೆ 100 ಕಿ.ಮೀ. ವೇಗದ ಸಾಮರ್ಥ್ಯಕ್ಕೆ ಈ ಹೆದ್ದಾರಿ ನಿರ್ಮಿಸಲಾಗಿದೆಯಾದರೂ ಬಹುತೇಕ ವಾಹನಗಳು ಗಂಟೆಗೆ 140 ರಿಂದ 150 ಕಿ.ಮೀ. ವೇಗದಲ್ಲಿ ಸಂಚರಿಸುತ್ತಿರುವುದು ಕಂಡು ಬಂದಿದೆ ಎಂದು ಪೊಲೀಸರು ಹೆದ್ದಾರಿ ಪ್ರಾಧಿಕಾರಕ್ಕೆ ತಿಳಿಸಿದ್ದಾರೆ.

ಒಂದು ವೇಳೆ ಅಪಘಾತವಾದರೆ ವಾಹನಗಳನ್ನು ಎಳೆದೊಯ್ಯುವ ಟೋಯಿಂಗ್ ವಾಹನಗಳಿಲ್ಲದಿರುವುದು ಕಂಡುಬಂದಿದ್ದು, ಅದರಿಂದಾಗಿ ಅಪಘಾತಕ್ಕೀಡಾಗಿ ಜಖಂಗೊಂಡ ವಾಹನಗಳು ಗಂಟೆಗಟ್ಟಲೆ ನಿಂತಿರುವ ಕಾರಣ ಎಕ್ಸ್‌ಪ್ರೆಸ್ ವೇಯಲ್ಲಿ ಟ್ರಾಫಿಕ್ ಜಾಮ್ ಆಗುತ್ತಿವೆ ಎಂಬುದನ್ನು ವರದಿ ಮೂಲಕ ಪ್ರಾಧಿಕಾರದ ಅಧಿಕಾರಿಗಳ ಗಮನಕ್ಕೆ ತರಲಾಗಿದೆ.

ಸ್ಪೀಡ್ ಕ್ಯಾಮರಾಗಳು: ರಸ್ತೆಯುದ್ದಕ್ಕೂ ಅಲ್ಲಲ್ಲಿ ಉತ್ತಮ ಗುಣಮಟ್ಟದ ಕ್ಯಾಮರಾಗಳನ್ನು ಅಳವಡಿಸಿ ವಾಹನಗಳ ವೇಗದ ಮೇಲೆ ನಿಗಾ ಇಟ್ಟು ನಿಯಂತ್ರಿಸಬೇಕು. ಪ್ರತೀ 500 ಮೀಟರ್‌ಗೊಂದರಂತೆ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಹೊಂದಿರುವ ಕ್ಯಾಮರಾ ಅಳವಡಿಸಿ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ ಅನ್ನು ಜಾರಿಗೆ ತರಬೇಕು. ಟೋಲ್ ಪ್ಲಾಜಾಗಳಲ್ಲಿ ಅತ್ಯಾಧುನಿಕ ಕ್ಯಾಮರಾ ಅಳವಡಿಸಿ, ಹಿಟ್ ಅಂಡ್ ರನ್ ವಾಹನಗಳ ಪತ್ತೆಗೆ ಅನುಕೂಲ ಮಾಡಬೇಕೆಂದು ಪೊಲೀಸರು ಸಲಹೆ ನೀಡಿದ್ದಾರೆ.

ಸೈನ್ ಬೋರ್ಡ್‌ಗಳು: ಮೇನ್ ಕ್ಯಾರಿಯೇಜ್ ವೇಯಿಂದ ಸರ್ವೀಸ್ ರೋಡ್‌ಗೆ ಸಂಪರ್ಕ ಕಲ್ಪಿಸಿರುವ 14 ಸ್ಥಳಗಳು, ಅಂಡರ್‌ಬ್ರಿಡ್ಜ್, ಓವರ್‌ಬ್ರಿಡ್ಜ್, ಡೀವಿಯೇಷನ್ ಇರುವಲ್ಲಿ ವಾಹನ ಚಾಲಕರಿಗೆ ಕಾಣುವ ಹಾಗೆ ದಪ್ಪ ಅಕ್ಷರಗಳಲ್ಲಿ ಸೂಚನಾ ಫಲಕ, ಆ್ಯರೋ ಮಾರ್ಕ್ ಫಲಕ ಹಾಕಬೇಕು. ಗ್ರಾಮಗಳಿರುವೆಡೆ, ಅಪಘಾತ ವಲಯಗಳಲ್ಲಿಯೂ ಅಗತ್ಯ ಎಚ್ಚರಿಕಾ ಫಲಕ ಅಳವಡಿಸಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಅಗತ್ಯವನ್ನು ಪೊಲೀಸರು ಪ್ರಾಧಿಕಾರದ ಗಮನಕ್ಕೆ ತಂದಿದ್ದಾರೆ.

ಸಬ್ ವೇಗಳಲ್ಲಿ ಸ್ಕೈವಾಕ್: ಕಣಿಮಿಣಿಕೆಯಂತಹ ಸ್ಥಳಗಳಲ್ಲಿ ಸ್ಕೈವಾಕ್ ಇಲ್ಲದಿರುವುದರಿಂದ ಗ್ರಾಮಸ್ಥರು ರಸ್ತೆ ದಾಟಲು ಪರದಾಡುತ್ತಿದ್ದಾರೆ. ಬಾಬುಸ್ ಪಾಳ್ಯ (ಕೆಂಗೇರಿ ಚೆಕ್‌ಪೋಸ್ಟ್), ಕಣಿಮಿಣಿಕೆ, ಹನುಮಂತ ನಗರ, ಎಸ್.ಬಿ.ದೊಡ್ಡಿ, ಸಂಕಲಗೆರೆ ಕ್ರಾಸ್ ಮತ್ತು ಬೆಳಕೆರೆ ಗೇಟ್‌ಗಳಲ್ಲಿ ಸ್ಕೈವಾಕ್‌ಗಳನ್ನು ನಿರ್ಮಿಸಬೇಕೆಂದೂ ವರದಿಯಲ್ಲಿ ಸಲಹೆ ನೀಡಲಾಗಿದೆ.

ಡಿಬಿ ಕುಪ್ಪೆ ಬಳಿ ಅಕ್ರಮ ವಿದ್ಯುತ್ ಬೇಲಿ ಸ್ಪರ್ಶಿಸಿ ಆನೆ ಸಾವು



ಮೈಸೂರು,ಜೂ.29(ಎಂಟಿವೈ)– ಅಕ್ರಮವಾಗಿ ವಿದ್ಯುತ್ ಸಂಪರ್ಕ ನೀಡಿದ್ದ ಸೋಲಾರ್ ಬೇಲಿ ಸ್ಪರ್ಶಿಸಿ ಗಂಡಾನೆಯೊಂದು ಮೃತಪಟ್ಟಿರುವ ಘಟನೆ ಹೆಚ್.ಡಿ.ಕೋಟೆ ತಾಲೂಕಿನ ಮೈಸೂರು–ಮಾನಂದವಾಡಿ ಮುಖ್ಯ ರಸ್ತೆಯ ಡಿ.ಬಿ.ಕುಪ್ಪೆ ಸಮೀಪ ನಡೆದಿದೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಡಿ.ಬಿ.ಕುಪ್ಪೆ ಗ್ರಾಮದ ಹಳೇ ಮೈಸೂರು–ಮಾನಂದವಾಡಿ ರಸ್ತೆಯ ಪಕ್ಕದಲ್ಲಿ ಡಿ.ಬಿ.ಕುಪ್ಪೆ ಗ್ರಾಮದ ಉದಯ ಬಿನ್ ಥಾಮಸ್ ಎಂಬಾತ ಜಮೀನಿಗೆ ಅಳವಡಿಸಿದ್ದ ಸೋಲಾರ್ ತಂತಿ ಬೇಲಿಗೆ ತನ್ನ ಮನೆಯಿಂದ ಅಕ್ರಮವಾಗಿ ವಿದ್ಯುತ್ ಸಂಪರ್ಕ ನೀಡಿದ್ದ ಕಾರಣ ವಿದ್ಯುತ್ ಸ್ಪರ್ಶದಿಂದ ಆನೆ ಮೃತಪಟ್ಟಿದೆ.

ನಾಗರಹೊಳೆ ಅಭಯಾರಣ್ಯಕ್ಕೆ ಹೊಂದಿಕೊಂಡಂತೆ ಈ ಭೂಮಿ ಇದ್ದು, ವನ್ಯಜೀವಿಗಳ ಹಾವಳಿ ನಿಯಂತ್ರಣಕ್ಕೆ ಸೋಲಾರ್ ಬೇಲಿ ಅಳವಡಿಸಿಕೊಂಡಿದ್ದ ಉದಯ್ (65) ಕಳೆದ ರಾತ್ರಿ ತನ್ನ ಮನೆಯಿಂದ ಸೋಲಾರ್ ಬೇಲಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ನೀಡಿದ್ದ. ಆ ಭೂಮಿ ಸಮೀಪದ ಮುಖ್ಯ ರಸ್ತೆಯಲ್ಲಿ ಸಾಗುತ್ತಿದ್ದ 35 ವರ್ಷದ ಗಂಡಾನೆ ಆಕಸ್ಮಿಕವಾಗಿ ಬೇಲಿ ಮೇಲೆ ಬೆಳೆದಿದ್ದ ಹಸಿರು ಸೊಪ್ಪನ್ನು ತಿನ್ನಲು ಸೊಂಡಿಲು ಹಾಕಿದೆ. ಕೂಡಲೇ ವಿದ್ಯುತ್ ಸ್ಪರ್ಶಕ್ಕೀಡಾಗಿ ಸ್ಥಳದಲ್ಲೇ ಮೃತಪಟ್ಟಿದೆ.

ಬೆಳಗ್ಗೆ 6 ಗಂಟೆಗೆ ಅರಣ್ಯದ ರಸ್ತೆಯಲ್ಲಿ ವಾಹನ ಸಂಚಾರ ಆರಂಭವಾದ ಬಳಿಕ ಆ ರಸ್ತೆಯಲ್ಲಿ ಸಾಗುತ್ತಿದ್ದ ಸಾರ್ವಜನಿಕರು ಆನೆ ಮೃತದೇಹ ಗಮನಿಸಿ, ಅರಣ್ಯ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಆಗಮಿಸಿದ ಅರಣ್ಯ ಸಿಬ್ಬಂದಿಗಳ ತಂಡ ಆನೆ ಮೃತಪಟ್ಟಿರುವ ಪ್ರದೇಶ ರಸ್ತೆ ಮತ್ತು ಕಂದಾಯ ಜಮೀನಾಗಿರುವುದರಿಂದ ಆನೆಯ ಮರಣೋತ್ತರ ಪರೀಕ್ಷೆ ನಡೆಸಲು ಅರಣ್ಯ ಪ್ರದೇಶಕ್ಕೆ ಸಾಗಿಸಿದರು. ಪಶು ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷೆ ನಡೆಸಿದರು.

ಆನೆ ಮೃತಪಟ್ಟ ವಿಷಯ ತಿಳಿದು ಆರೋಪಿ ಉದಯ್ ತಲೆಮರೆಸಿಕೊಂಡಿದ್ದಾನೆ. ವನ್ಯಜೀವಿ ಕಾಯಿದೆ ಅನುಸಾರ ಅಂತರಸಂತೆ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ. ಚೆಸ್ಕಾಂ ಅಧಿಕಾರಿಗಳಿಗೆ ಅಕ್ರಮವಾಗಿ ವಿದ್ಯುತ್ ಸಂಪರ್ಕ ಅಳವಡಿಸಿಕೊಂಡಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಆರೋಪಿ ಉದಯ್ ಕುಟುಂಬದವರನ್ನು ಬಂಧಿಸುವಂತೆ ದೂರಿನಲ್ಲಿ ಮನವಿ ಮಾಡಿದ್ದಾರೆ.

ಸ್ಥಳಕ್ಕೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ಮೇಟಿಕುಪ್ಪೆ ವನ್ಯಜೀವಿ ಉಪ ವಿಭಾಗದ ಎಸಿಎಫ್ ಕೆ.ಎನ್.ರಂಗಸ್ವಾಮಿ, ಪಶು ವೈದ್ಯಾಧಿಕಾರಿ ಡಾ.ಹೆಚ್.ರಮೇಶ್, ಸರಗೂರು ವೃತ್ತ ನಿರೀಕ್ಷಕ ಲಕ್ಷ್ಮೀಕಾಂತ, ವಲಯ ಅರಣ್ಯಾಧಿಕಾರಿ ಮಧು ಕೆ.ಎಲ್., ಅಂತರಸಂತೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಿರಿಯ ಅಭಿಯಂತರ ದೀಪಕ್, ಅಂತರಸಂತೆ ಪೊಲೀಸರು ಭೇಟಿ ನೀಡಿ, ಪರಿಶೀಲಿಸಿದರು.

ತಾತ್ಕಾಲಿಕವಾಗಿ ಪರಿಷ್ಕೃತ ಪೂರ್ವ ಬಾಡಿಗೆಯಲ್ಲೇ ಯೂರಿಯಾ ಸಾಗಾಣಿಕೆ

ರೈತರ ಹಿತದೃಷ್ಟಿಯಿಂದ ನಿರ್ಧಾರ; ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘ



ಮೈಸೂರು,ಜೂ.29(ಪಿಎಂ)– ಯೂರಿಯಾ ರಸಗೊಬ್ಬರ ಸಾಗಾಣಿಕೆಗೆ ಮಾತ್ರ ಅನ್ವಯಿಸುವಂತೆ ಪರಿಷ್ಕೃತ ಪೂರ್ವ ಲಾರಿ ಬಾಡಿಗೆ ದರವನ್ನೇ ಪಡೆಯಲು ಎಂಎನ್‌ಜಿಟಿ ರೈಲ್ವೆ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘ ನಿರ್ಧರಿಸಿದ್ದು, ಇದು 7 ರಿಂದ 10 ದಿನಗಳಿಗೆ ಮಾತ್ರ ಸೀಮಿತವಾಗಿರಲಿದೆ ಎಂದು ಸಂಘದ ಕಾರ್ಯದರ್ಶಿ ಅಬ್ದುಲ್ ಖಾದರ್ (ಶಾಹಿದ್) ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗೊಬ್ಬರ ಸೇರಿದಂತೆ ಎಲ್ಲಾ ಸರಕು ಸಾಗಾಣಿಕೆಯ ಬಾಡಿಗೆ ದರವನ್ನು ಹೆಚ್ಚಳ ಮಾಡಿದ್ದೆವು. ಇದರಿಂದ ಯೂರಿಯಾ ರಸಗೊಬ್ಬರವನ್ನು ಸಬ್ಸಿಡಿ ದರದಲ್ಲಿ ಕೊಡಲು ಸಾಧ್ಯವಿಲ್ಲವೆಂದು ಗೊಬ್ಬರ ಮಳಿಗೆಗಳ ಮಾಲೀಕರು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದರು. ಈ ಹಿನ್ನೆಲೆಯಲ್ಲಿ ಜೂ.26ರಂದು ಜಿಲ್ಲಾಧಿಕಾರಿಗಳು ಸಭೆ ಕರೆದು, ಯೂರಿಯಾ ರಸಗೊಬ್ಬರಕ್ಕೆ ಅನ್ವಯವಾಗುವಂತೆ ಹಳೇ ಬಾಡಿಗೆ ದರ ಪಡೆಯಲು ಮನವಿ ಮಾಡಿದ್ದರು. ಹೀಗಾಗಿ ತಾತ್ಕಾಲಿಕ ವ್ಯವಸ್ಥೆಯಾಗಿ 7ರಿಂದ 10 ದಿನಗಳವರೆಗೆ ಮಾತ್ರ ಹಳೇ ಬಾಡಿಗೆ ಪಡೆಯಲು ನಿರ್ಧರಿಸಲಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿಗಳು ಮತ್ತು ರೈತರ ಮೇಲಿನ ಗೌರವದಿಂದ ಈಗಾಗಲೇ ತಾತ್ಕಾಲಿಕವಾಗಿ ಹಳೇ ಬಾಡಿಗೆ ದರದಲ್ಲಿ ಪೂರೈಕೆ ಮಾಡುತ್ತಿದ್ದೇವೆ. ನಮಗೆ ನಷ್ಟವಾಗುತ್ತಿದೆ ಎಂದು ರಸಗೊಬ್ಬರ ಮಳಿಗೆದಾರರು ಪರಿಷ್ಕೃತ ಬಾಡಿಗೆ ಪಾವತಿಸಲು ನಿರಾಕರಿಸುತ್ತಿದ್ದಾರೆ. ಬಾಡಿಗೆ ಹೆಚ್ಚಳದ ಹಿನ್ನೆಲೆಯಲ್ಲಿ ಸಬ್ಸಿಡಿಯಡಿ ರಸಗೊಬ್ಬರ ಮಾರಾಟ ಸಾಧ್ಯವಿಲ್ಲ ಎಂದು ಪ್ರತಿಪಾದಿಸುತ್ತಿದ್ದಾರೆ. ಕಂಪನಿ ಮೂಲಕ ಗುತ್ತಿಗೆದಾರರು ಬಾಡಿಗೆ (ರಿಟರ್ನ್ ಬಾಡಿಗೆ) ಪಾವತಿ ಮಾಡುವುದರಲ್ಲಿ ನಮಗೆ ಪರಿಷ್ಕೃತ ಬಾಡಿಗೆಯೇ ದೊರೆಯುತ್ತಿದೆ. ಆದರೆ ಮಳಿಗೆದಾರರೇ ಬಾಡಿಗೆ ನೀಡಬೇಕಿರುವ ಸಂದರ್ಭದಲ್ಲಿ ಮಳಿಗೆದಾರರು ಪರಿಷ್ಕೃತ ಬಾಡಿಗೆ ನೀಡಲು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಲಾರಿ ಬಾಡಿಗೆ ದರ ಹೆಚ್ಚಳಕ್ಕೆ ಗುತ್ತಿಗೆದಾರರು ಸಮ್ಮತಿಸಿ ಸಹಿ ಹಾಕಿದ್ದಾರೆ. ಏಕಪಕ್ಷೀಯವಾಗಿ ದರ ಹೆಚ್ಚಳ ಮಾಡಿಲ್ಲ. ಮಳಿಗೆದಾರರು ಕಂಪನಿ ಮತ್ತು ಗುತ್ತಿಗೆದಾರರ ಮೂಲಕ ನಷ್ಟಕ್ಕೆ ಪರಿಹಾರ ಕಂಡುಕೊಳ್ಳಬಹುದು. ಆದರೆ ಇಲ್ಲಿ ಲಾರಿ ಮಾಲೀಕರನ್ನು ಹೊಣೆ ಮಾಡಲಾಗುತ್ತಿದ್ದು, ಇದು ಸರಿಯಲ್ಲ. 7ರಿಂದ 10 ದಿನಗಳ ಒಳಗೆ ಸಮಸ್ಯೆ ಬಗೆಹರಿಸಬೇಕು. ಇಲ್ಲವಾದರೆ ಪರಿಷ್ಕೃತ ಬಾಡಿಗೆ ದರದಲ್ಲೇ ಸಾಗಾಣಿಕೆ ಮಾಡುವುದು ಅನಿವಾರ್ಯವಾಗಲಿದೆ ಎಂದು ಹೇಳಿದರು.

ಅಕ್ಕಿ, ಗೋಧಿ, ಸಿಮೆಂಟ್ ಸೇರಿದಂತೆ ಇನ್ನಿತರ ಸಾಮಗ್ರಿಗಳ ಸಾಗಾಣಿಕೆಗೆ ಪರಿಷ್ಕೃತ ಬಾಡಿಗೆ ದರ ಪಡೆಯುವಲ್ಲಿ ಯಾವುದೇ ಸಮಸ್ಯೆಯಾಗಿಲ್ಲ. ಆದರೆ ಯೂರಿಯಾದಲ್ಲಿ ಮಾತ್ರ ಈ ಸಮಸ್ಯೆ ಉದ್ಭವಿಸಿದೆ. ಕಳೆದ 2 ವರ್ಷಗಳಿಂದ ಲಾರಿಯ ಬಿಡಿಭಾಗಗಳ ದರವು ಶೇ.40ರಿಂದ ಶೇ.50ರಷ್ಟು ಹೆಚ್ಚಳವಾಗಿದೆ. 2021ರಲ್ಲಿ 35 ಸಾವಿರ ರೂ. ಇದ್ದ ಲಾರಿಗಳ ಟೈರ್ ಬೆಲೆ ಈಗ 51 ಸಾವಿರ ರೂ. ಆಗಿದೆ. ಲಾರಿಗಳಲ್ಲಿ ಪ್ರತಿದಿನ ಬಳಸುವ ಟಾರ್ಪಲ್ ಬೆಲೆ 2020–21ರಲ್ಲಿ 7 ಸಾವಿರ ರೂ. ಇತ್ತು. ಆದರೆ ಈಗ 26 ಸಾವಿರ ರೂ.ಗೆ ಹೆಚ್ಚಳವಾಗಿದೆ. ಹೀಗೆ ಲಾರಿ ನಿರ್ವಹಣೆ ಹಲವು ವಿಧದಲ್ಲಿ ದುಬಾರಿಯಾಗಿ ಪರಿಣಮಿಸಿದೆ. ಹೀಗಾಗಿ ಬಾಡಿಗೆ ಪರಿಷ್ಕರಣೆ ನಮಗೆ ಅನಿವಾರ್ಯವಾಯಿತು ಎಂದು ವಿವರಿಸಿದರು.

ಮೈಸೂರು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟದ ಅಧ್ಯಕ್ಷ ಬಿ.ಕೋದಂಡರಾಮು, ಕಾರ್ಯದರ್ಶಿ ಅಭಿಷೇಕ್, ರೈಲ್ವೆ ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಜಂಟಿ ಕಾರ್ಯದರ್ಶಿ ಮುರುಗೇಶ್, ಖಜಾಂಚಿ ಎಸ್.ಅವಿನಾಶ್ ಗೋಷ್ಠಿಯಲ್ಲಿದ್ದರು.

ನೀರಿನ ಘಟಕದ ಬಳಿ ಮತ್ತೆ ಅಶುದ್ಧ ಪರಿಸ್ಥಿತಿ!



ಮೈಸೂರು, ಜೂ.29(ಎಂಕೆ)– ಮೈಸೂರು ನಗರಪಾಲಿಕೆ ಮುಖ್ಯ ಕಚೇರಿ ಹಿಂಭಾಗದಲ್ಲಿನ ಕೆಂಪನಂಜಾಂಭ ಅಗ್ರಹಾರದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ ಮತ್ತೆ ಅನೈರ್ಮಲ್ಯತೆಯತ್ತ ಸಾಗುತ್ತಿದೆ.

ಜೂ.15ರ 'ಮೈಸೂರು ಮಿತ್ರ'ನಲ್ಲಿ 'ಶುದ್ಧ ಕುಡಿಯುವ ನೀರಿನ ಘಟಕದ ಸುತ್ತ 'ಅಶುದ್ಧ ಪರಿಸ್ಥಿತಿ' ಶೀರ್ಷಿಕೆಯಡಿ ಶುದ್ಧ ಕುಡಿಯುವ ನೀರಿನ ಘಟಕದ ದುಸ್ಥಿತಿ ಕುರಿತು ವರದಿ ಮಾಡಿದ ಬಳಿಕ ಸ್ಥಳಕ್ಕೆ ಭೇಟಿ ನೀಡಿದ್ದ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಹಾಗೂ ಪಾಲಿಕೆ ಸಿಬ್ಬಂದಿ ಘಟಕ ಸುತ್ತಲೂ ಶುಚಿಗೊಳಿಸಿ, ನೀರಿನ ಘಟಕದ ಬಳಿ ಇದ್ದ ಟೀ ಅಂಗಡಿಯನ್ನು ತೆರವುಗೊಳಿಸಿದ್ದರು. ಆದರೆ ಮತ್ತೆ ಅದೇ ಸ್ಥಳದಲ್ಲಿ ಟೀ ಅಂಗಡಿ ತೆರೆದಿದ್ದು, ಮತ್ತೆ ಬೀಡಿ–ಸಿಗರೇಟ್ ಸೇದುವವರ ಅಡ್ಡೆಯಾಗಿದೆ.

ಅಲ್ಲದೆ ನೀರಿನ ಘಟಕದ ಸುತ್ತಲೂ ದ್ವಿಚಕ್ರ ವಾಹನಗಳು, ಕಾರುಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸುವುದು ಆರಂಭವಾಗಿದ್ದು, ನೀರು ಹಿಡಿದುಕೊಳ್ಳಲು ಬರುವವರಿಗೆ ದಾರಿಯೇ ಇಲ್ಲದಂತಾಗಿದೆ. ಪಾಲಿಕೆಯ ಕಸ ಸಂಗ್ರಹಣೆ ಮಾಡುವ ವಾಹನ ಬೆಳಗ್ಗೆ–ಸಂಜೆ ಕಸ ತೆಗೆದುಕೊಂಡು ಹೋಗುತ್ತಿದ್ದರೂ ಟೀ ಲೋಟ, ಸೇದಿ ಬಿಸಾಡಿದ ಬೀಡಿ–ಸಿಗರೇಟ್ ಚೂರುಗಳು ರಸ್ತೆಯಲ್ಲಿ ಬಿದ್ದಿವೆ. ಕೆಲವರು ಎದುರುಗಡೆ ಇರುವ ಬಾರ್‌ನಿಂದ ಮದ್ಯ ತಂದು ನೀರಿನ ಘಟಕ ಬಳಿಯೇ ಕುಳಿತು ಕುಡಿಯುವುದು ಸಾಮಾನ್ಯವಾಗಿದೆ.

ಬಂದಿಲ್ಲ: ನೀರಿನ ಘಟಕದ ಸುತ್ತಲೂ ಶುಚಿಗೊಳಿಸುವ ದಿನದಂದು ಸ್ಥಳದಲ್ಲಿದ್ದ ಪಾಲಿಕೆ ಸದಸ್ಯರು ಮತ್ತೆ ಈ ಕಡೆ ಸುಳಿದಿಲ್ಲ. ಒಮ್ಮೆ ಸ್ವಚ್ಛತೆ ಮಾಡಿದರೆ, ಮತ್ತೆ ಹಾಳು ಮಾಡುವವರು, ಕಸ ಹಾಕುವವರು ಇದ್ದೇ ಇರುತ್ತಾರೆ. ಆದ್ದರಿಂದ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದು ಅಗತ್ಯವಾಗಿದೆ ಎಂದು ಸ್ಥಳೀಯ ನಿವಾಸಿಗಳು 'ಮೈಸೂರು ಮಿತ್ರ'ನಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ನಿವೃತ್ತ ಪೊಲೀಸರಿಗೂ ನೆಮ್ಮದಿ ಇಲ್ಲ; ನಿತ್ಯವೂ ಪುಂಡ ಪೋಕರಿಗಳು, ಖದೀಮರ ಕಾಟ

ವೀರಪ್ಪನ್ ಬೇಟೆಯಾಡಿದ ಪೊಲೀಸರ ನೆಲೆಗಿಲ್ಲ ಭದ್ರತೆ, ಭರವಸೆ



ಮೈಸೂರು, ಜೂ.29(ಎಂಕೆ)– ಕಾಡುಗಳ್ಳ ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಆರಕ್ಷಕರಿಗೆ ಕಾಡು, ಪೊದೆಗಳ ನಿತ್ಯ ದರ್ಶನ... ಕಳ್ಳರ ಕೈಚಳಕ ಕಂಡು ಬೇಸತ್ತು ಹೋಗಿದ್ದಾರೆ ಈ ನಿವೃತ್ತ ಪೊಲೀಸರು...!

> "ಜನರ ರಕ್ಷಣೆ ಮಾಡುವ ಜವಾಬ್ದಾರಿ ನಿರ್ವಹಿಸಿ, ನಿವೃತ್ತಿ ಪಡೆದು ವಿಶ್ರಾಂತಿ ಪಡೆಯುವ ವಯಸ್ಸಿನಲ್ಲಿ ನೆಮ್ಮದಿ ಇಲ್ಲದಂತಾಗಿದೆ. ಕಳ್ಳರ ಭಯದಲ್ಲಿ ದಿನ ದೂಡುವಂತಾಗಿದೆ. ಪೊದೆಗಳಿಂದಾಗಿ ಇನ್ನಷ್ಟು ಭಯ ಹೆಚ್ಚಾಗಿದ್ದು, ಯಾರು ಬಂದು ಏನು ಮಾಡಿಬಿಡುತ್ತಾರೋ ಎಂಬ ಆತಂಕದಲ್ಲಿದ್ದೇವೆ. ಅರಣ್ಯ ಇಲಾಖೆಯ ಸಿಸಿಎಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ರಕ್ಷಣೆ ನೀಡುವಂತೆ ಹಾಗೂ ಪೊದೆಗಳನ್ನು ತೆರವುಗೊಳಿಸುವಂತೆ ಮನವಿ ಮಾಡಿದ್ದೇವೆ. ಮುಡಾ ಇಂಜಿನಿಯರ್‌ಗಳ ಜೊತೆ ನಿತ್ಯ ಸಂಪರ್ಕದಲ್ಲಿದ್ದರೂ ನಮ್ಮ ಮನವಿಗೆ ಕ್ಯಾರೆ ಎನ್ನುತ್ತಿಲ್ಲ.
> - ಜಯಸ್ವಾಮಿ, ನಿವೃತ್ತ ಪೊಲೀಸ್ ಅಧಿಕಾರಿ

ಮೈಸೂರು ಹೊರವಲಯದಲ್ಲಿರುವ ಹಾಗೂ ಕಾಡುಗಳ್ಳ ವೀರಪ್ಪನ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ನೂರಾರು ಮಂದಿ ನಿವೃತ್ತ ಪೊಲೀಸರು ವಾಸವಿರುವ ಹಂಚ್ಯಾ ಸಾತಗಳ್ಳಿ ಬಿ–ವಲಯದಲ್ಲಿ ಕಳ್ಳರ ಹಾವಳಿ, ಪುಂಡ ಪೋಕರಿಗಳ ಪುಂಡಾಟಿಕೆ ಮಿತಿ ಮೀರಿದ್ದು, ನಿವಾಸಿಗಳನ್ನು ಬೆಚ್ಚಿ ಬೀಳುವಂತೆ ಮಾಡಿದೆ.

ರಿಂಗ್ ರಸ್ತೆಯಲ್ಲಿರುವ ವಿಟಿಯು ಕಾಲೇಜು ಹಿಂಭಾಗದಲ್ಲಿರುವ ಹಂಚ್ಯಾ ಸಾತಗಳ್ಳಿ ಬಿ–ವಲಯದ ಪಕ್ಕದಲ್ಲಿ ಮುಡಾ(ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ)ಕ್ಕೆ ಸೇರಿದ ಸುಮಾರು 19.5 ಎಕರೆ ಜಾಗದಲ್ಲಿ ಮುಳ್ಳಿನ ಗಿಡಗಳು, ಪೊದೆಗಳು ಬೆಳೆದು ನಿಂತಿದ್ದು, ಕಳ್ಳರ ಮತ್ತು ಜೂಜುಕೋರರ ಅಡ್ಡೆಯಾಗಿದೆ.

ಸಂಪೂರ್ಣ ಪಾಳು ಬಿದ್ದು, ಕಾಡಿನಂತಿರುವ ಪ್ರದೇಶವು ಅನೈತಿಕ ಚಟುವಟಿಕೆಗಳು, ಜೂಜು, ಗಾಂಜಾ ಸೇವನೆಯ ತಾಣವಾಗಿದೆ ಅಲ್ಲದೆ ಬೈಕ್, ಕಾರುಗಳ ಬಿಡಿಭಾಗಗಳನ್ನು ಕದ್ದು ತರುವ ಕೆಲ ಖದೀಮರು, ಈ ಪಾಳು ಬಿದ್ದ ಜಾಗವನ್ನು ಉಗ್ರಾಣವನ್ನಾಗಿ ಮಾಡಿಕೊಂಡಿರುವುದಲ್ಲದೆ ಇಲ್ಲಿಂದ ಬೇರೆ ಬೇರೆ ಕಡೆಗೆ ಸಾಗಿಸುತ್ತಿದ್ದಾರೆ ಎಂದು ಹಂಚ್ಯಾ ಸಾತಗಳ್ಳಿ ಬಿ–ಜೋನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಪದಾಧಿಕಾರಿಗಳು 'ಮೈಸೂರು ಮಿತ್ರ'ನಲ್ಲಿ ದೂರಿದ್ದಾರೆ.

ಸಂಜೆ ಹಾಗೂ ರಾತ್ರಿ ವೇಳೆ ಈ ಭಾಗದಲ್ಲಿ ತಿರುಗಾಡುವುದಕ್ಕೆ ಭಯವಾಗುತ್ತದೆ. ದೂರದ ಊರುಗಳಿಂದ ಹೆಣ್ಣು ಮಕ್ಕಳನ್ನು ಕರೆದುಕೊಂಡು ಬರುವ ಪುಂಡರು ಯಾರ ಭಯವೂ ಇಲ್ಲದೆ ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಕೂಗಾಟ–ಚೀರಾಟ ಮಾಮೂಲಿಯಾಗಿದ್ದು, ಕುಡುಕರ ಬಯಲು ರೆಸ್ಟೋರೆಂಟ್ ಆಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಮನವಿ: ಬಡಾವಣೆಗೆ ಸಂಬಂಧಪಟ್ಟ ಮುಡಾ ಇಂಜಿನಿಯರ್‌ಗಳು, ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ನೀಡಿದ್ದೂ ಇದುವರೆಗೆ ಯಾವುದೇ ಪ್ರಯೋಜನವಾಗಿಲ್ಲ. ಮುಳ್ಳಿನ ಮರಗಳು, ಪೊದೆಗಳನ್ನು ತೆರವುಗೊಳಿಸಿ, ಕಳ್ಳರಿಂದ ರಕ್ಷಣೆ ನೀಡಿ ಎಂದು ಬೇಡಿಕೊಂಡರೂ ಯಾವೊಬ್ಬ ಅಧಿಕಾರಿಯೂ ತಿರುಗಿ ನೋಡಿಲ್ಲ ಎಂದು ವಿಷಾದಿಸಿದ್ದಾರೆ.

ಪಾಂಡವಪುರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ



ಪಾಂಡವಪುರ, ಜೂ.29– ಬೆಂಗಳೂರು ನಗರ ನಿರ್ಮಾಣ ಮಾಡಿದ ನಾಡಪ್ರಭು ಕೆಂಪೇಗೌಡರ ಸಾಧನೆ ಮತ್ತು ಅವರ ದೂರದೃಷ್ಟಿ ಅಭಿವೃದ್ಧಿಯನ್ನು ಮರೆಯಲು ಸಾಧ್ಯವಿಲ್ಲ ಎಂದು ಪಾಂಡವಪರ ತಾಲೂಕು ಆರೋಗ್ಯಾಧಿಕಾರಿ ಡಾ|| ಸಿ. ಅರವಿಂದ್ ಹೇಳಿದರು.

ಪಟ್ಟಣದ ವೆಂಕಟೇಶ್ವರ ಕಾಂಪ್ಲೆಕ್ಸ್‌ನಲ್ಲಿ ನೇಗಿಲಯೋಗಿ ಸಮಾಜದ ಸೇವಾ ಟ್ರಸ್ಟ್‌ನ ಕಚೇರಿಯಲ್ಲಿ ನಾಡಪ್ರಭು ಕೆಂಪೇಗೌಡರ 514ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದ ಅವರು, ಕೆಂಪೇಗೌಡರ ದೂರ ದೃಷ್ಟಿ ಫಲದಿಂದ ಬೆಂಗಳೂರು ನಗರ ರಾಜ್ಯದ ರಾಜಧಾನಿಯಾಗಿರುವುದು ನಮ್ಮ ನಾಡಿನ ಜನತೆಗೆ ಹೆಮ್ಮೆಯ ವಿಚಾರವಾಗಿದೆ ಎಂದರು. ಕೆಂಪೇಗೌಡರ ಅದರ್ಶ ತತ್ವ ಸಿದ್ಧಾಂತ ಸಮಾನತೆ ಬದುಕನ್ನು ಇಂದಿನ ಯುವ ಜನತೆ ತಮ್ಮ ಜೀವನದಲ್ಲಿ ರೂಡಿಸಿಕೊಂಡು ಅವರ ಹಾದಿಯಲ್ಲಿ ಸಾಗಬೇಕೆಂದರು.

ಪಟ್ಟಣದಲ್ಲಿ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಉತ್ತಮವಾಗಿ ಕೆಲಸ ಮಾಡುವ ಮೂಲಕ ಸಮುದಾಯದ ಅಭಿವೃದ್ಧಿಗೆ ಮುಂದಾಗಿದೆ. ಒಕ್ಕಲಿಗ ವಧು–ವರರ ಮಾಹಿತಿ ವೇದಿಕೆ, ವ್ಯಾಪಾರಸ್ಥರ ಮತ್ತು ವೃತ್ತಿ ಪರ ಅಭಿವೃದ್ಧಿ ವೇದಿಕೆ, ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾಕೇಂದ್ರ ಕೌಶಲ್ಯಾಭಿವೃದ್ಧಿ ತರಬೇತಿ ಕೇಂದ್ರ ಹೀಗೆ ಹಲವು ಯೋಜನೆಗಳನ್ನು ಹಮ್ಮಿಕೊಂಡು ಸಾಗುತ್ತಿದೆ. ಇದರ ಪ್ರಯೋಜನವನ್ನು ಪ್ರತಿಯೊಬ್ಬರು ಸದುಪಯೋಗಪಡಿಸಿಕೊಂಡು ಪ್ರಗತಿ ಕಾಣಬೇಕೆಂದು ಡಾ. ಸಿ. ಅರವಿಂದ್ ಹೇಳಿದರು.

ಇದೇ ಸಂದರ್ಭದಲ್ಲಿ ನಾಡದೊರೆ ಕೆಂಪೇಗೌಡರ ಜೀವನದ ಬಗ್ಗೆ ಸಾಹಿತಿ, ನಿವೃತ್ತ ಶಿಕ್ಷಕ ಚಂದ್ರಶೇಖರಯ್ಯ ಮಾತನಾಡುತ್ತಾ, ಬೆಂಗಳೂರು ನಗರವನ್ನು ವಿಶ್ವವೇ ನೋಡುವಂತೆ ನಿರ್ಮಾಣ ಮಾಡಿದ ಮಹಾನ್ ವ್ಯಕ್ತಿ ನಾಡಪ್ರಭು ಕೆಂಪೇಗೌಡರು ಎಂದರು.

ಶಿಕ್ಷಣ, ಕೃಷಿ, ವಾಣಿಜ್ಯ, ಆರೋಗ್ಯದ ಬಗ್ಗೆ ಅಂದೇ ಸಮಾಜದಲ್ಲಿ ಸಮಾನತೆ ಬದುಕು ಕಾಣಬೇಕೆಂದು ತಮ್ಮ ಆಡಳಿತಾವಧಿಯಲ್ಲಿ ಒತ್ತು ನೀಡಿದರು. ಕೆರೆ–ಕಟ್ಟೆ ನಿರ್ಮಾಣ, ದೇವಸ್ಥಾನಗಳ ನಿರ್ಮಾಣ, ಬೆಂಗಳೂರು ನಗರದ ಹೆಬ್ಬಾಗಿಲುಗಳ ನಿರ್ಮಾಣ, ವ್ಯಾಪಾರಸ್ಥರಿಗೆ ಪೇಟೆಗಳ ನಿರ್ಮಾಣ ಸೇರಿದಂತೆ ಹತ್ತು ಹಲವು ಯೋಜನೆಗಳನ್ನು ರೂಪಿಸಿ ಕಾರ್ಯರೂಪಕ್ಕೆ ತಂದು ನಾಡಿನ ಜನತೆಗೆ ಸಾರ್ಥಕ ಬದುಕನ್ನು ನಿರ್ಮಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್ ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ಗೌಡ ವಹಿಸಿದರು. ಮುಖ್ಯ ಅತಿಥಿಗಳಾಗಿ ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಪ್ರಿಯದರ್ಶಿನಿ, ತೋಟಗಾರಿಕೆ ಸಹಾಯಕ ನಿರ್ದೇಶಕಿ ಸೌಮ್ಯ, ಪುರಸಭೆ ಮುಖ್ಯಾಧಿಕಾರಿ ವೀಣಾ ಹಾಗೂ ಟ್ರಸ್ಟ್ ಎಲ್ಲಾ ಪದಾಧಿಕಾರಿಗಳು ಮತ್ತು ಸಮುದಾಯದ ಎಲ್ಲರೂ ಭಾಗವಹಿಸಿದ್ದರು. ಟ್ರಸ್ಟ್‌ನ ಕಾರ್ಯದರ್ಶಿ ಕೆ.ಕುಬೇರ್ ನಡೆಸಿಕೊಟ್ಟರೆ, ಕಾರ್ಯಧ್ಯಕ್ಷರಾದ ಧನ್ಯಕುಮಾರ್ ನಿರೂಪಿಸಿದರು. ಕೋ.ಪು ಗುಣಶೇಖರ್ ವಂದಿಸಿದರು.

ವಿಠಲಾಪುರ ಗ್ರಾಪಂ ಅಧ್ಯಕ್ಷೆಯಾಗಿ ಸವಿತಾ



ಕೆ.ಆರ್.ಪೇಟೆ, ಜೂ.29– ತಾಲೂಕಿನ ವಿಠಲಾಪುರ ಗ್ರಾಮ ಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಸವಿತಾ ಸಂತೋಷ್ ಕುಮಾರ್ ಅವಿರೋಧ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷರಾಗಿದ್ದ ರೂಪ ಪರಮೇಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸವಿತಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರವನ್ನು ಸಲ್ಲಿಸದೇ ಇರುವ ಕಾರಣ ಚುನಾವಣಾಧಿಕಾರಿ ತಾಪಂ ಇಓ ಸತೀಶ್, ಸವಿತಾ ಅವರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ಸಹ ಚುನಾವಣಾಧಿಕಾರಿಯಾಗಿ ತಾಪಂ ವ್ಯವಸ್ಥಾಪಕ ಅನಿಲ್ ಬಾಬು, ಪಿಡಿಓ ಗೀತಾ ಕಾರ್ಯನಿರ್ವಹಿಸಿದರು. ನೂತನ ಅಧ್ಯಕ್ಷರಾದ ಸವಿತಾ ಅವರನ್ನು ಮುಖಂಡರಾದ ದೊಡ್ಡನಕಟ್ಟೆ ಕಿರಣ್, ಕಾಪನಹಳ್ಳಿ ಹರೀಶ್, ವಿಠಲಾಪುರ ದೇವರಾಜು, ರೇವಣ್ಣ, ತೋಟದಮನೆ ವೆಂಕಟೇಶ್, ಚಿಕ್ಕಗಾಡಿಗನಹಳ್ಳಿ ಬಸವೇಶ್, ತಾಪಂ ಮಾಜಿ ಸದಸ್ಯ ಸೋಮ ಶೇಖರ್, ಯಗಚಗುಪ್ಪೆ ಶಿವಲಿಂಗಪ್ಪ, ತೆಂಡೇಕೆರೆ ನಿಂಗಯ್ಯ, ಗ್ರಾಪಂ ಸದಸ್ಯರಾದ ರವೀಂದ್ರ, ಗೀತಾ, ವನಿತಾ, ಪಿ.ಕೆ. ಕುಮಾರ್, ಸಾಕಮ್ಮ ಸೋಮಶೇಖರ್, ರೂಪಪರಮೇಶ್, ಸಂತೋಷ್, ಕಾಳೇನಹಳ್ಳಿ ಕುಮಾರ್ ಇತರರು ಉಪಸ್ಥಿತರಿದ್ದು ಅಭಿನಂದಿಸಿದರು.

ಸವಿತಾ ಸಂತೋಷ್ ಕುಮಾರ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗುತ್ತಿದ್ದಂತೆ ಚಿಕ್ಕಗಾಡಿಗನಹಳ್ಳಿ ಗ್ರಾಮಸ್ಥರು ಹಾಗೂ ಸವಿತಾ ಅವರ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಿಸಿದರು.

ನೂತನ ಅಧ್ಯಕ್ಷೆ ಸವಿತಾ ಮಾತನಾಡಿ, ನಮ್ಮ ಪಂಚಾಯ್ತಿ ವ್ಯಾಪ್ತಿಗೆ 12 ಗ್ರಾಮಗಳು ಸೇರುತ್ತವೆ. ಈ ಎಲ್ಲ ಗ್ರಾಮಗಳಿಗೆ ಅಗತ್ಯವಾಗಿಬೇಕಾಗಿರುವ ಕುಡಿಯುವ ನೀರು, ಬೀದಿ ದೀಪಗಳು ಸೇರಿದಂತೆ ಅತಿ ಅವಶ್ಯಕತೆಯಿರುವ ಕೆಲಸ ಕಾರ್ಯಗಳಿಗೆ ಆದ್ಯತೆ ನೀಡುತ್ತೇನೆ. ಸರ್ಕಾರದ ವಿವಿಧ ಯೋಜನೆಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪ್ರಾಮಾಣಿಕವಾಗಿ ದುಡಿಯುತ್ತೇನೆ ಎಂದು ಭರವಸೆ ನೀಡಿದರು.

ಜಮೀನು ವಿವಾದ: ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಯತ್ನಿಸಿದ ರೈತ

ನಾಗಮಂಗಲ, ಜೂ.29– ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ತನ್ನಿಂದ ಬಲವಂತವಾಗಿ ಸಹಿ ಪಡೆದಿದ್ದರಿಂದ ಮನನೊಂದು ರೈತನೋರ್ವ ಡೆತ್‌ನೋಟ್ ಬರೆದಿಟ್ಟು ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ಘಟನೆ ತಾಲೂಕಿನ ಸಿಂಗ್ರಿಗೌಡನಕೊಪ್ಪಲು ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಮೂಡ್ಲಿಗಿರೀಗೌಡ ಎಂಬ ರೈತನೇ ಆತ್ಮಹತ್ಯೆಗೆ ಪ್ರಯತ್ನಿಸಿದವನಾಗಿದ್ದು, ಕುಟುಂಬಸ್ಥರು ಸಕಾಲದಲ್ಲಿ ಆಸ್ಪತ್ರೆಗೆ ದಾಖಲಿಸಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ಘಟನೆಯ ವಿವರ: ಮೂಡ್ಲಿಗಿರೀಗೌಡರ ಜಮೀನಿನಲ್ಲಿ ಓಡಾಡಲು ದಾರಿ ಬಿಡಬೇಕೆಂದು ಜಯರಾಮ ಎಂಬುವರು ಕೇಳಿದ್ದರೆನ್ನಲಾಗಿದ್ದು, ಅದಕ್ಕೆ ಮೂಡ್ಲಿಗಿರೀಗೌಡರು ಒಪ್ಪದ ಕಾರಣ ವ್ಯಾಜ್ಯ ನ್ಯಾಯಾಲಯದ ಮೆಟ್ಟಿಲೇರಿತು ಎನ್ನಲಾಗಿದೆ. ಈ ಮಧ್ಯೆ ಗ್ರಾಮದಲ್ಲಿ ನಡೆದ ರಾಜಿ ಪಂಚಾಯಿತಿಯಲ್ಲಿ ಮಾತಿನ ಚಕಮಕಿ ನಡೆದಿದ್ದು, ಮೂಡ್ಲಿಗಿರೀಗೌಡನಿಂದ ಜಮೀನಿಗೆ ಸಂಬಂಧಪಟ್ಟಂತೆ ಬಲವಂತವಾಗಿ ಸಹಿ ಪಡೆದು ಬುಧವಾರ ನ್ಯಾಯಾಲಯಕ್ಕೆ ಆ ಪತ್ರವನ್ನು ನೀಡಿದ್ದಾರೆ. ಈ ವಿಷಯವನ್ನು ವಕೀಲರಿಂದ ತಿಳಿದು ಬೇಸತ್ತ ಮೂಡ್ಲಿಗಿರೀಗೌಡ ಡೆತ್‌ನೋಟ್ ಬರೆದಿಟ್ಟು, ಕೀಟನಾಶಕ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ. ತಕ್ಷಣವೇ ವಿಷಯ ತಿಳಿದ ಕುಟುಂಬದವರು ಆತನನ್ನು ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಳ್ಳೂರು ಕ್ರಾಸ್‌ನಲ್ಲಿರುವ ಶ್ರೀ ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ನಮ್ಮ ತಂದೆ ಮೂಡ್ಲಿಗಿರೀಗೌಡ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಯತ್ನಕ್ಕೆ ಸಣ್ಣಮರೀಗೌಡ, ಕೆ. ಕುಮಾರ, ಜಯರಾಮ, ಶ್ರೀಧರ ಎಂಬವರೇ ಕಾರಣರೆಂದು ಅವರ ಮಗ ಕಾರ್ತಿಕ್ ಆರೋಪಿಸಿದ್ದಾನೆ.

ರೈತರ ಕಬ್ಬಿನ ಬೆಳೆಗೆ ಎಫ್‌ಆರ್‌ಪಿ ದರ ನಿಗದಿ ಪಡಿಸಬೇಕು

ರಾಜ್ಯ ಸರ್ಕಾರಕ್ಕೆ ಎನ್.ಎಲ್.ಭರತ್‌ರಾಜು ಒತ್ತಾಯ



ಭಾರತೀನಗರ, ಜೂ.29– ರೈತರ ಕಬ್ಬಿನ ಬೆಳೆಗೆ ರಾಜ್ಯಸರ್ಕಾರ ಎಫ್‌ಆರ್‌ಪಿ ದರ ನಿಗದಿ ಪಡಿಸಬೇಕು. ಇಲ್ಲವೇ ತಮಿಳು ನಾಡು ಮಾದರಿಯಲ್ಲಿ ಟನ್ ಕಬ್ಬಿಗೆ 200 ರೂಗಳ ಪ್ರೋತ್ಸಾಹ ಧನ ನೀಡಬೇಕೆಂದು ಕರ್ನಾಟಕ ಕಬ್ಬುಬೆಳೆಗಾರರ ಸಂಘದ ರಾಜ್ಯಸಂಚಾಲಕ ಎನ್.ಎಲ್. ಭರತ್‌ರಾಜು ಒತ್ತಾಯಿಸಿದರು.

ಕೆ.ಎಂ.ದೊಡ್ಡಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, 9.5 ಇಳುವರಿ ಆಧಾರದ ಮೇಲೆ ಟನ್ ಕಬ್ಬಿಗೆ 5 ಸಾವಿರ ರೂ ನೀಡಬೇಕು. ತೂಕದಲ್ಲಿ ನಡೆಯುತ್ತಿರುವ ಮೋಸವನ್ನು ತಡೆಗಟ್ಟಬೇಕು. ಕಬ್ಬು ಬೆಳೆಗಾರರಿಗೆ ಕಾಂಪೋಸ್ಟ್ ಗೊಬ್ಬರವನ್ನು ಉಚಿತವಾಗಿ ನೀಡಬೇಕು. ಎಥಾನಲ್, ಡೀಸೆಲ್, ಕಾಕಂಬಿ, ಸಹವಿದ್ಯುತ್ ಮುಂತಾದ ಉತ್ಪನ್ನಗಳಿಂದ ಬರುತ್ತಿರುವ ಲಾಭಾಂಶದಲ್ಲಿ ರೈತರಿಗೆ ಪಾಲು ನೀಡಬೇಕೆಂದು ಒತ್ತಾಯಿಸಿದರು.

ಕಬ್ಬು ಕಟಾವಾದ 14 ದಿನದೊಳಗೆ ಹಣ ಪಾವತಿ ಮಾಡಬೇಕು. ವಿಳಂಬವಾದರೆ ಶೇ 16 ರಷ್ಟು ಬಡ್ಡಿ ನೀಡಬೇಕು. 12 ತಿಂಗಳಿಗೆ ಕಬ್ಬು ಕಟಾವು ಮಾಡಿಕೊಳ್ಳಬೇಕು. ವಿಳಂಬವಾಗಿ ನಷ್ಟವಾದರೆ ಕಾರ್ಖಾನೆ ಮಾಲೀಕರು ಭರಿಸಬೇಕು. ಕಬ್ಬುಕಟಾವಿಗೆ ನ್ಯಾಯಯುತ ದರ ನಿಗದಿಪಡಿಸಬೇಕೆಂದು ಒತ್ತಾಯಿಸಿ ಜು.1 ರಂದು ಬೆಳಿಗ್ಗೆ 10.30 ಗಂಟೆಗೆ ಅಂಬೇಡ್ಕರ್ ಭವನದಲ್ಲಿ ಕಬ್ಬುಬೆಳೆಗಾರರ ಸಮಾವೇಶವನ್ನು ಮಾಡಲಾಗುತ್ತಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕಬ್ಬುಬೆಳೆಗಾರರು, ರೈತರು ಭಾಗವಹಿಸಿ ಬೆಂಬಲ ನೀಡಬೇಕೆಂದು ಭರತ್‌ರಾಜು ಕೋರಿದರು.

ಇದೇ ವೇಳೆ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷ ವಿಶ್ವಾನಾಥ್, ಕಾರ್ಯದರ್ಶಿ ಸಿದ್ದೇಗೌಡ, ಕುಳ್ಳೇಗೌಡ, ನಾಗೇಂದ್ರ, ಬೋರೇಗೌಡ, ಪುಟ್ಟಸ್ವಾಮಿ, ಸುಂದರ್, ಲಕ್ಷ್ಮಣ್, ಸದಾಶಿವ, ಎಚ್.ಪಿ.ಬೋರೇಗೌಡ, ರಘು ಸೇರಿದಂತೆ ಇತರರು ಗೋಷ್ಠಿಯಲ್ಲಿದ್ದರು.

ಪಾಂಡವಪುರ ಪಟ್ಟಣದ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಬಕ್ರೀದ್ ಹಬ್ಬದ ವಿಶೇಷ ಪ್ರಾರ್ಥನೆ ಸಲ್ಲಿಸಿದರು.



ರೈತರಿಗೆ ಸವಲತ್ತು ವಿತರಣೆ



ನಾಗಮಂಗಲ, ಜೂ.29– ತಾಲೂಕಿನ ಬಿಂಡಿಗನವಿಲೆ ಹೋಬಳಿ ತಿಟ್ಟೆನ ಹೊಸಹಳ್ಳಿ ಗ್ರಾಮದಲ್ಲಿ ಕೃಷಿ ಸಚಿವರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ ರೈತರಿಗೆ ಸವಲತ್ತು ವಿತರಣಾ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ನಂತರ 26 ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಯೋಜನೆಯಾಡಿ ರಸ ಮೇವು ಘಟಕ ಹಾಗೂ ಮಿಶ್ರತಳಿ ಹಸುಗಳಿಗೆ ಸಹಾಯಧನ, ಮೇವು ಕತ್ತರಿಸುವ ಯಂತ್ರ, ನೂರು ಕೆ.ಜಿ ಸಾಮರ್ಥ್ಯದ ತೂಕದ ಯಂತ್ರ ಹಾಗೂ ಮಾವಿನ ಗಿಡ, ಸಪೋಟ, ಸೇರಿದಂತೆ ಶೇಕಡ 100 ರ ಸಹಾಯಧನದಲ್ಲಿ ರೈತರಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ 2023–24ನೇ ಸಾಲಿನ ಬೆಳೆ ವಿಮಾ ಕಂತು ಕರಪತ್ರಗಳು ಹಾಗೂ ಪೋಸ್ಟರ್‌ಗಳನ್ನು, ಬೆಳೆ ಕುರಿತ ಪ್ರಚಾರ ವಾಹನಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ನಿರ್ದೇಶಕ ಜಯರಾಮ ಬಿ.ಡಿ, ಕೃಷಿ ಅಧಿಕಾರಿ ಯುವರಾಜ್ ಹಾಗು ರೈತ ಮುಖಂಡರು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಜೂ.29– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮಂಡ್ಯ ತಾಲೂಕಿನ ಮೆಟ್ರಿಕ್ ನಂತರದ (ಪಿಯುಸಿ ಮತ್ತು ಪಿಯುಸಿ ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳು) ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ಜುಲೈ 15 ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಸರ್ಪ ಸಂಸ್ಕಾರ, ಆಶ್ಲೇಷ ಬಲಿ ಪೂಜೆ

ಮೈಸೂರು, ಜೂ.29–ಮೈಸೂರಿನ ದೇವರಾಜ ಮೊಹಲ್ಲಾದ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜುಲೈ 1ರ ಶನಿವಾರದಂದು ಸರ್ಪ ಸಂಸ್ಕಾರ ಹಾಗೂ ಜುಲೈ 2ರಂದು ಭಾನುವಾರ ಸರ್ಪ ಸಂಸ್ಕಾರಾಂಗ ಹೋಮ, ಕಾಲಸರ್ಪ ಶಾಂತಿ ಮತ್ತು ಆಶ್ಲೇಷ ಬಲಿ ಪೂಜೆ ಏರ್ಪಡಿಸಲಾಗಿದೆ. ಬೆಳಗ್ಗೆ 7.30ಕ್ಕೆ ಪ್ರಾರಂಭವಾಗಿ 9.45ಕ್ಕೆ ಪೂರ್ಣಾಹುತಿ ನೆರವೇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೈಕುಮಾರ್, ಜಾತಕ ವಿಮರ್ಶಕರು, ಮೊ.ನಂ.9845183399, 9342183392 ಸಂಪರ್ಕಿಸುವುದು.

ಮದ್ಯದಂಗಡಿ ತೆರೆಯುವುದಕ್ಕೆ ಮಹಿಳಾ ವಸತಿ ನಿಲಯದ ವಾಸಿಗಳು, ಸ್ಥಳೀಯರ ಆಕ್ಷೇಪ: ಜಿಲ್ಲಾಧಿಕಾರಿಗೆ ಮನವಿ

ಮೈಸೂರು, ಜೂ.29– ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ಅಂಬರೀಷ್ ರಸ್ತೆಯಲ್ಲಿ ಹೊಸದಾಗಿ ಮದ್ಯದಂಗಡಿ ತೆರೆಯಲು ಅವಕಾಶ ನೀಡಬಾರದು ಎಂದು ಅಲ್ಲಿನ ಶ್ರೀ ಸಾಯಿ ಸಂಪ್ರದ ಮಹಿಳಾ ವಸತಿ ನಿಲಯದ ಮಹಿಳೆಯರು ಹಾಗೂ ಸ್ಥಳೀಯರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ.

ಈ ರಸ್ತೆಯ ನಂಬರ್ 748/11, 229/4ರ ಗ್ರೌಂಡ್ ಫ್ಲೋರ್‌ಗೆ ಶ್ರೀಮತಿ ಆರ್. ಮೀನಾಕ್ಷಿ ಎಂಬುವರು ತಮ್ಮ ಕೆ.ಎನ್. ಪುರದಲ್ಲಿರುವ ಮದ್ಯದಂಗಡಿಯನ್ನು ಸ್ಥಳಾಂತರಿಸಲು ಅಬಕಾರಿ ಇಲಾಖೆಗೆ ಅರ್ಜಿ ನೀಡಿದ್ದು, ಅವರ ಅರ್ಜಿಗೆ ಅಬಕಾರಿ ಇಲಾಖೆ ಅಧಿಕಾರಿಗಳು ಸ್ಪಂದಿಸಿ, ಅಕ್ಕಪಕ್ಕದವರ ಗಮನಕ್ಕೆ ಬಾರದೆ ಮದ್ಯದಂಗಡಿ ತೆರೆಯಲು ಅವಕಾಶ ನೀಡುತ್ತಿದ್ದಾರೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಈ ರಸ್ತೆಯಲ್ಲಿ ಈಗಾಗಲೇ ಸಾಕಷ್ಟು ಮದ್ಯದಂಗಡಿಗಳಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗುತ್ತಿದೆ. ಅಕ್ಕಪಕ್ಕದ ವಸತಿ ಗೃಹಗಳವರೂ ಕೂಡ ತೊಂದರೆ ಅನುಭವಿಸುತ್ತಿದ್ದಾರೆ. ಮದ್ಯ ಸೇವನೆ ಮಾಡಿದವರು ಬಾಟಲಿಗಳನ್ನು ರಸ್ತೆಯಲ್ಲೇ ಎಸೆದು ಕಂಡ ಕಂಡಲ್ಲಿ ಮೂತ್ರ ವಿಸರ್ಜನೆ ಮಾಡುವುದರಿಂದ ಮಹಿಳೆಯರು ಮುಜುಗರಕ್ಕೊಳಗಾಗಿದ್ದಾರೆ ಎಂದು ಮನವಿಯಲ್ಲಿ ಹೇಳಲಾಗಿದೆ.

ತೆರೆಯಲುದ್ದೇಶಿಸಿರುವ ಮದ್ಯ ದಂಗಡಿಯ ಪಕ್ಕದಲ್ಲೇ ಮಹಿಳಾ ಪಿಜಿ ಇರುವುದರಿಂದ ಮದ್ಯದಂಗಡಿ ತೆರೆಯದಂತೆ ಪಿಜಿ ಮಾಲೀಕ ಶ್ರೀನಿವಾಸ್ ಹಾಗೂ ನೆರೆಹೊರೆಯವರಾದ ಚಂದ್ರಕಾಂತ್ ಮತ್ತು ವಿಶ್ವಾಥ್ ಅವರು ಮನವಿ ಮಾಡಿದ್ದರು. ಆದರೆ ಈ ಮನವಿಗೆ ಅಬಕಾರಿ ಇಲಾಖೆ ಅಧಿಕಾರಿಗಳು ಸ್ಪಂದಿಸಿಲ್ಲ. ಹೀಗಾಗಿ ಈ ಸ್ಥಳದಲ್ಲಿ ಮದ್ಯದಂಗಡಿ ತೆರೆಯಲು ಅವಕಾಶ ನೀಡಬಾರದು ಎಂದು ಮನವಿಯಲ್ಲಿ ಕೋರಿದ್ದಾರೆ.

ದುಬಾರಿ ಟೋಲ್... ಅಪಘಾತಗಳಿಂದ ಆಘಾತ...

ಎಕ್ಸ್‌ಪ್ರೆಸ್ ವೇ ಸಹವಾಸವೇ ನಮಗೆ ಬೇಡ; ಸರ್ವೀಸ್ ರಸ್ತೆಗಿಳಿದ ವಾಹನಗಳು

ಟೋಲ್ ಪ್ಲಾಜಾ ಖಾಲಿ ಖಾಲಿ; ಭಣಗುಟ್ಟುತ್ತಿರುವ ಎಕ್ಸ್‌ಪ್ರೆಸ್ ವೇ



ಮೈಸೂರು, ಜೂ.29(ಬಿಎಲ್‌ಯು)– ಸಾವಿರಾರು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣ ಮಾಡಿರುವ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಯಲ್ಲಿ ದುಬಾರಿ ಟೋಲ್ ದರದ ಬರೆ ಹಾಗೂ ಸರಣಿ ಅಪಘಾತಗಳಿಂದ ಆಘಾತಕ್ಕೊಳಗಾಗಿ ಸಾಕಷ್ಟು ವಾಹನ ಮಾಲೀಕರು ಹಾಗೂ ಚಾಲಕರು, ವಾಹನ ಸವಾರರು ಟೋಲ್ ರಸ್ತೆ ಬಿಟ್ಟು ಸರ್ವೀಸ್ ರೋಡ್‌ನಲ್ಲಿ ಸಂಚರಿಸುತ್ತಿದ್ದಾರೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇಯಲ್ಲಿ ಸದ್ಯ ಬಿಡದಿ ಬಳಿ ಟೋಲ್ ದರ ಪಾವತಿಸಬೇಕಿತ್ತು. ಫಾಸ್ಟ್ ಟ್ಯಾಗ್ ನಲ್ಲಾದರೆ 165 ರೂಪಾಯಿ ಭರಿಸಬೇಕು. ಇಲ್ಲವೆಂದರೆ 330 ರೂಪಾಯಿ ಪಾವತಿ ಮಾಡಲೇಬೇಕು. ಹಣ ಇಲ್ಲವೆಂದರೆ ಮುಂದೆ ಹೋಗಲು ಬಿಡುವುದೇ ಇಲ್ಲ.

ಇದು ಕಾರು, ಜೀಪ್, ವ್ಯಾನ್‌ಗಳ ಟೋಲ್ ದರವಾದರೆ, ಬಸ್, ಟ್ರಕ್‌ಗಳ ಟೋಲ್ ದರ ಸಾವಿರ ಮೀರುತ್ತದೆ. ದುಬಾರಿ ಟೋಲ್ ದರ ಹೊರೆಯಿಂದ ವಾಹನ ಸವಾರರು ಕಂಗಾಲಾಗಿದ್ದಾರೆ. ಇದರಿಂದ ಟೋಲ್ ರಸ್ತೆ ಸಹವಾಸವೇ ಬೇಡವೆಂದು ಸಾಕಷ್ಟು ವಾಹನ ಸವಾರರು ಸರ್ವೀಸ್ ರಸ್ತೆಯಲ್ಲೆ ಸಂಚರಿಸುತ್ತಿದ್ದಾರೆ.

ಇದರಿಂದ ಬಿಡದಿ ಟೋಲ್ ಬಳಿ ಬಿಕೋ ಎನ್ನುವ ವಾತಾವರಣವಿದೆ. ಕೆಲವೇ ಕೆಲವು ವಾಹನಗಳು ಟೋಲ್ ಹಾದು ಹೋಗುತ್ತಿವೆ. ಈ ಕಾರಣದಿಂದ ಟೋಲ್ ರಸ್ತೆ ಖಾಲಿ ಖಾಲಿಯಾಗಿದೆ. ಉಳ್ಳವರು ದುಬಾರಿ ಶುಲ್ಕ ಪಾವತಿಸಿ, ಎಕ್ಸ್‌ಪ್ರೆಸ್ ಹೈವೇಯಲ್ಲಿ ಸಂಚರಿಸುತ್ತಾರೆ. ಆದರೆ ದುಬಾರಿ ಟೋಲ್ ದರ ಪಾವತಿಸಲು ಶಕ್ತರಿಲ್ಲದ ವಾಹನ ಸವಾರರು ಟೋಲ್ ಎಂಟ್ರಿ ಸಹವಾಸವೇ ಬೇಡವೆಂದು ಸರ್ವೀಸ್ ರಸ್ತೆಯಲ್ಲಿ ಹೋಗುತ್ತಿದ್ದಾರೆ. ಇದರಿಂದ ಎಕ್ಸ್‌ಪ್ರೆಸ್ ಹೈವೇಗಿಂತ ಟೋಲ್ ರಸ್ತೆಯಲ್ಲಿ ಹೆಚ್ಚು ವಾಹನ ದಟ್ಟಣೆ ಇದೆ.

ಜುಲೈ 1 ರಿಂದ ಶ್ರೀರಂಗಪಟ್ಟಣ ಬಳಿ ಟೋಲ್ ಸಂಗ್ರಹಿಸಲಾಗುತ್ತದೆ. ಆಗ ಬೆಂಗಳೂರಿಗೆ ಹೋಗಲು ಈಗ ಇನ್ನು ಅಧಿಕ 155 ರೂಪಾಯಿ ಪಾವತಿ ಮಾಡಬೇಕು. ಅದೇ ದಿನ ಬೆಂಗಳೂರು– ಮೈಸೂರಿಗೆ ಹೋಗಿ ಬರುತ್ತೇವೆ ಅಂದರೆ 235 ರೂಪಾಯಿ ತೆರಬೇಕು.

ಈಗ ಸರ್ವೀಸ್ ರಸ್ತೆಯಿಂದ ಟೋಲ್ ರಸ್ತೆಗೆ ಹೋಗಲು ಕೆಲವು ಕಡೆ ಎಂಟ್ರಿ ನೀಡಲಾಗಿದೆ. ಶ್ರೀರಂಗಪಟ್ಟಣದ ಟೋಲ್ ಸಂಗ್ರಹ ಆರಂಭವಾದರೆ ಸರ್ವೀಸ್ ರಸ್ತೆಯಿಂದ ಎಕ್ಸ್‌ಪ್ರೆಸ್ ಹೈವೇಗೆ ಹೋಗುವ ಎಲ್ಲಾ ಮಾರ್ಗಗಳನ್ನು ಮುಚ್ಚಲಾಗುತ್ತದೆ. ಆಗ ಹಣ ಕೊಟ್ಟು ಎಕ್ಸ್‌ಪ್ರೆಸ್ ಹೈವೇನಲ್ಲೇ ಹೋಗಬೇಕು. ಹಣ ಕೊಡಲು ಶಕ್ತರಿಲ್ಲದ ವಾಹನ ಸವಾರರು ಸರ್ವೀಸ್ ರಸ್ತೆಯಲ್ಲಿ ಸಾಗಬೇಕು.

ಈಗ ಬಿಡದಿ ಬಳಿಯ ಒಂದು ಕಡೆಯ ಟೋಲ್ ಅನ್ನೇ ಭರಿಸಲಾಗದೆ ಬಹಳಷ್ಟು ವಾಹನ ಸವಾರರು ಸರ್ವೀಸ್ ರಸ್ತೆಯಲ್ಲಿ ಹೋಗುತ್ತಿದ್ದಾರೆ. ಇನ್ನು ಶ್ರೀರಂಗಪಟ್ಟಣದ ಬಳಿಯ ಟೋಲ್ ಸಂಗ್ರಹ ಆರಂಭವಾದರೆ ಎಕ್ಸ್‌ಪ್ರೆಸ್ ಹೈವೇ ಸಹವಾಸವೇ ಬೇಡವೆಂದು ಸರ್ವೀಸ್ ರಸ್ತೆಯಲ್ಲೇ ತೆರಳುತ್ತಾರೆ.

ಸರ್ವೀಸ್ ರಸ್ತೆ ಬಹಳಷ್ಟು ಕಿರಿದಾಗಿದೆ. ಅಲ್ಲದೆ ಅಂಡರ್‌ಪಾಸ್ ಇರುವ ಕಡೆ ಸರ್ವೀಸ್ ರಸ್ತೆಯಲ್ಲಿ ಸುರಕ್ಷತೆ ದೃಷ್ಟಿಯಿಂದ ಹಂಪ್ಸ್ ನಿರ್ಮಿಸಲಾಗಿದೆ. ದುಬಾರಿ ಟೋಲ್ ಶುಲ್ಕ ಪಾವತಿಸದೆ ಹೆಚ್ಚಿನ ವಾಹನ ಸವಾರರು ಸರ್ವೀಸ್ ರಸ್ತೆಯಲ್ಲಿ ಸಾಗಿದರೆ ಹೆಚ್ಚು ಅಪಘಾತಗಳಾಗುವ ಸಾಧ್ಯತೆಗಳಿವೆ. ಅಲ್ಲದೆ ಪ್ರತಿದಿನ ಎಕ್ಸ್‌ಪ್ರೆಸ್ ಹೈವೇಯಲ್ಲಿ ಸರಣಿ ಅಪಘಾತವಾಗುತ್ತಿರುವುದು ವಾಹನ ಸವಾರರಲ್ಲಿ ಭಯ, ಹೆದರಿಕೆ ಹುಟ್ಟಿಸಿದೆ. ಅಪಘಾತದ ಭಯದಿಂದ ಎಕ್ಸ್‌ಪ್ರೆಸ್ ಹೈವೇಗಿಂತ ಸರ್ವೀಸ್ ರಸ್ತೆಯೇ ಲೇಸು ಎಂದು ಸಾಮಾನ್ಯ ರಸ್ತೆಯಲ್ಲೆ ಸಾಗುತ್ತಿದ್ದಾರೆ. ಬಿಡದಿ ಟೋಲ್ ಸಂಗ್ರಹದ ಜೊತೆಗೆ ಶ್ರೀರಂಗಪಟ್ಟಣದ ಟೋಲ್ ಸಂಗ್ರಹ ಆರಂಭವಾದರೆ ಸರ್ವೀಸ್ ರಸ್ತೆಯಲ್ಲಿ ಹೋಗುವವರ ಸಂಖ್ಯೆ ದುಪ್ಪಟ್ಟಾಗುತ್ತದೆ.

ಮೈಸೂರು–ಬೆಂಗಳೂರಿಗೆ ನೇರವಾಗಿ ಹೋಗುವವರು ಮಾತ್ರ ಎಕ್ಸ್‌ಪ್ರೆಸ್ ಹೈವೇನಲ್ಲಿ ಸಾಗಬೇಕು. ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ, ಬಿಡದಿಗೆ ಹೋಗುವವರು ಸರ್ವೀಸ್ ರಸ್ತೆಯಲ್ಲೆ ಅನಿವಾರ್ಯವಾಗಿ ಹೋಗಬೇಕಿದೆ. ಇದರಿಂದ ಸರ್ವೀಸ್ ರಸ್ತೆಯ ವಾಹನ ದಟ್ಟಣೆ ಮತ್ತಷ್ಟು ಹೆಚ್ಚಾಗಲಿದೆ. ಒಟ್ಟಾರೆ ದುಬಾರಿ ಟೋಲ್ ಶುಲ್ಕ ಹಾಗೂ ಅಪಘಾತ ಕಾರಣದಿಂದ ಎಕ್ಸ್‌ಪ್ರೆಸ್ ಹೈವೆಯಿಂದ ಜನರು ವಿಮುಖರಾಗುತ್ತಿದ್ದಾರೆ. ಈ ಪರಿಸ್ಥಿತಿ ಹೀಗೆ ಮುಂದುವರೆದರೆ ಸಾವಿರಾರು ಕೋಟಿ ರೂಪಾಯಿ ವೆಚ್ಚದ ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ಯೋಜನೆ ನಿಷ್ಪ್ರಯೋಜಕವಾಗುತ್ತದೆ. ಟೋಲ್ ದರ ಕಡಿಮೆ ಮಾಡಿ, ಅಪಘಾತ ನಿಯಂತ್ರಣಕ್ಕೆ ಕ್ರಮ ಕೈಗೊಂಡರೆ ಎಕ್ಸ್‌ಪ್ರೆಸ್ ವೇನಲ್ಲಿ ವಾಹನ ಸಂಚಾರ ಹೆಚ್ಚಾಗಬಹುದು. ಇಲ್ಲವೆಂದರೆ ಈ ಯೋಜನೆ ಹೆಸರಿಗೆ ಮಾತ್ರ ಇರುತ್ತದೆ ಎಂಬುದು ಬಹುತೇಕ ಜನರ ಅಭಿಪ್ರಾಯ.

ಕೆವೈಸಿ ಅಪ್‌ಡೇಟ್ ನೆಪದಲ್ಲಿ 50 ಸಾವಿರ ರೂ. ವಂಚನೆ

ಗೋಣಿಕೊಪ್ಪ, ಜೂ.29–ಬ್ಯಾಂಕ್ ಖಾತೆಗೆ ಕೆವೈಸಿ ಅಪ್‌ಡೇಟ್ ಮಾಡುವಂತೆ ಮೆಸೇಜ್ ರವಾನಿಸಿ 50 ಸಾವಿರ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ. ಪೊನ್ನಂಪೇಟೆ ತಾಲೂಕು ಕೈಕೇರಿ ಗ್ರಾಮದ ಬಿ.ಟಿ. ಹನುಮಯ್ಯ(75) ಹಣ ಕಳೆದುಕೊಂಡವರಾಗಿದ್ದು, 24 ಗಂಟೆ ಯೊಳಗೆ ಕೆವೈಸಿ ಅಪ್‌ಡೇಟ್ ಮಾಡದಿದ್ದಲ್ಲಿ ಕೆನರಾ ಬ್ಯಾಂಕ್ ಖಾತೆ ಬ್ಲಾಕ್ ಆಗುತ್ತದೆ ಎಂದು ಇವರ ಮೊಬೈಲ್‌ಗೆ ಮೆಸೇಜ್ ರವಾನೆಯಾಗಿದೆ. ಮೆಸೇಜ್ ಬಂದ ನಂಬರ್ ಅನ್ನು ಇವರು ಸಂಪರ್ಕಿಸಿದಾಗ ಮಾತನಾಡಿದ ಖದೀಮ 'ನಿಮ್ಮ ಮೊಬೈಲ್‌ಗೆ ಬರುವ ಓಟಿಪಿ ತಿಳಿಸಿ' ಎಂದು ಹೇಳಿದ್ದಾನೆ. ಅದರಂತೆ ಹನುಮಯ್ಯ ಅವರು ಓಟಿಪಿ ತಿಳಿಸಿದ ನಂತರ ಮತ್ತೆ ಕರೆ ಮಾಡಿದ ಆತ, ಪುನಃ ಓಟಿಪಿ ಬರುತ್ತದೆ, ಹೇಳಿ ಎಂದು ತಿಳಿಸಿದ್ದಾನೆ. ಇದರಿಂದ ಸಂಶಯಗೊಂಡ ಹನುಮಯ್ಯ ಅವರು, ಬ್ಯಾಂಕ್‌ಗೆ ತೆರಳಿ ವಿಚಾರಿಸಿದಾಗ ಅವರ ಖಾತೆಯಿಂದ 50 ಸಾವಿರ ರೂ. ಅಕ್ರಮವಾಗಿ ವರ್ಗಾವಣೆ ಆಗಿರುವುದು ಗೊತ್ತಾಗಿದೆ. ಈ ಸಂಬಂಧ ಗೋಣಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶ್ರೀ ಸಿದ್ಧಿ ವಿನಾಯಕ ಗ್ರೂಪ್ ವತಿಯಿಂದ ಬೋಗಾದಿ 2ನೇ ಹಂತದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಅದ್ದೂರಿಯಾಗಿ ಪೈ.ಶ್ರೀನಿವಾಸ ಗೌಡರವರ ನೇತೃತ್ವದಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಿದ್ಧಿ ವಿನಾಯಕ ಗ್ರೂಪ್‌ನ ತಿಮ್ಮೇಗೌಡರು, ರಮೇಶ್ ಕುಪ್ಪೆಗಾಲ, ರಾಜೇಶ್, ವಾರ್ಡ್ ಅಧ್ಯಕ್ಷ ಕುಮಾರ್, ಸತ್ಯನಾರಾಯಣ, ಕೃಷ್ಣಮೂರ್ತಿ, ಡಾ. ಕೆ.ಎನ್. ಇಂಗಳಗಿ, ಮರಿಗೌಡ್ರು, ವೆಂಕಟೇಶ್, ಲೋಕೇಶ್, ಸಂಜಯ್, ವಿಘ್ನೇಶ್, ರಮೇಶ್ ಹಾಗೂ ಎಲ್ಲಾ ಸದಸ್ಯರನ್ನು ಅಭಿನಂದಿಸಲಾಯಿತು.

ಲೋಕಾಯುಕ್ತ ದಾಳಿ: ಕೆಆರ್ ಪುರ ತಹಶೀಲ್ದಾರ್ ಅಜಿತ್ ರೈ ಬಂಧನ

ಬೆಂಗಳೂರು: ಆದಾಯಕ್ಕೂ ಮೀರಿದ ಆಸ್ತಿಗಳಿಕೆ ಆರೋಪದ ಹಿನ್ನಲೆಯಲ್ಲಿ ನಿನ್ನೆ ಹಲವೆಡೆ ದಾಳಿ ಮಾಡಿದ್ದ ಲೋಕಾಯುಕ್ತ ಪೊಲೀಸರು ಕೆಆರ್‌ಪುರ ತಹಶೀಲ್ದಾರ್ ಅಜಿತ್ ರೈ ಅವರನ್ನು ಬಂಧಿಸಿದ್ದಾರೆ ಎಂದು ತಿಳಿದುಬಂದಿದೆ.

ಬೆಂಗಳೂರು ಸೇರಿ ಅಜಿತ್‌ಗೆ ಸೇರಿದ 12 ಕಡೆ ಲೋಕಾಯುಕ್ತ ಪೊಲೀಸರು ನಿನ್ನೆ ದಾಳಿ ನಡೆಸಿದ್ದರು. ಸತತ 30 ಗಂಟೆಗಳ ಶೋಧ ನಡೆಸಿ ಲಭ್ಯವಾದ ದಾಖಲೆ ಪತ್ರಗಳನ್ನು ಪರಿಶೀಲನೆ ನಡೆಸಿದ್ದರು. ಈ ವೇಳೆ ಆದಾಯಕ್ಕೂ ಮೀರಿದ ಆಸ್ತಿಗಳಿಕೆ ಮಾಡಿರುವುದು ಕಂಡು ಬಂದ ಹಿನ್ನೆಲೆ ಅಜಿತ್ ರೈ ಅವರನ್ನು ಬಂಧಿಸಲಾಗಿದೆ. ಅಜಿತ್ ರೈ ಅವರಿಗೆ ಸಂಬಂಧಿಸಿದ 10 ಸ್ಥಳಗಳಿಗೆ ದಾಳಿ ನಡೆಸಿದ್ದ ಲೋಕಾಯುಕ್ತ ಪೊಲೀಸರು 40 ಲಕ್ಷ ನಗದು, 700 ಗ್ರಾಂ ಚಿನ್ನ, 1.90 ಕೋಟಿ ಮೌಲ್ಯದ ವಸ್ತುಗಳನ್ನು, ಐಷಾರಾಮಿ ಕಾರು ಮತ್ತು ಬೈಕ್‌ಗಳನ್ನು ವಶಕ್ಕೆ ಪಡೆದಿದ್ದರು. ದಾಳಿ ವೇಳೆ ಅಜಿತ್ ರೈಗೆ ಸೇರಿದ 100 ಎಕರೆಗೂ ಅಧಿಕ ವಿವಿಧ ಆಸ್ತಿ ಪತ್ರಗಳು ಲಭ್ಯವಾಗಿದ್ದು, ಅಜಿತ್ ರೈ ಸಂಬಂಧಿಕರು, ಸ್ನೇಹಿತರ ಹೆಸರಲ್ಲೂ ಆಸ್ತಿ ಪತ್ರಗಳು ಪತ್ತೆಯಾಗಿವೆ. ಬೇನಾಮಿ ಹೆಸರಿನಲ್ಲಿ ಅಜಿತ್ ರೈ ಆಸ್ತಿ ಮಾಡಿರುವ ಶಂಕೆ ವ್ಯಕ್ತವಾಗಿದೆ.

ತಮಿಳುನಾಡಲ್ಲಿ ಅಪಘಾತ; ತಿ.ನರಸೀಪುರ ವ್ಯಕ್ತಿ ಸಾವು



ಮೈಸೂರು, ಜೂ.29(ಎಸ್‌ಬಿಡಿ)– ತಮಿಳು ನಾಡಿನಲ್ಲಿ ಕಾರು ಹತ್ತುವಾಗ ಮತ್ತೊಂದು ಕಾರು ಡಿಕ್ಕಿ ಹೊಡೆದು ಮೈಸೂರು ಜಿಲ್ಲೆಯ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಗುರುವಾರ ಸಂಜೆ ಸಂಭವಿಸಿದೆ. ಮೈಸೂರು ಜಿಲ್ಲೆ, ತಿ.ನರಸೀಪುರ ತಾಲೂಕು, ಗಾಣಿಗನಹಳ್ಳಿಯ ಬನ್ನಯ್ಯ ಅವರ ಪುತ್ರ ಸಿದ್ದರಾಜು(31), ಅಪಘಾತದಲ್ಲಿ ಸಾವನ್ನಪ್ಪಿದವರು. ಇವರು ಬುಧವಾರ ಸಂಜೆ ಸಂಬಂಧಿಕರೊಂದಿಗೆ ತಮಿಳುನಾಡಿನ ಬನ್ನಾರಿ ಅಮ್ಮನ ದೇವಾಲಯಕ್ಕೆಂದು ತೆರಳಿದ್ದಾಗ ಈ ದುರ್ಘಟನೆ ಸಂಭವಿಸಿದೆ.

ಘಟನೆ ವಿವರ: ಸಿದ್ದರಾಜು, ಇವರ ತಮ್ಮ ರಾಜೇಶ್, ಸ್ನೇಹಿತ ರವಿ, ಚಿಕ್ಕಪ್ಪ–ಚಿಕ್ಕಮ್ಮ, ಸೋದರ ಸಂಬಂಧಿ ಶರತ್ ಮತ್ತಿತರರು ಸ್ಕಾರ್ಪಿಯೋ ಕಾರಿನಲ್ಲಿ ಬುಧವಾರ ಸಂಜೆ 6 ಗಂಟೆ ವೇಳೆಗೆ ತಮಿಳುನಾಡಿನ ಬನ್ನಾರಿ ಅಮ್ಮನ ದೇವಾಲಯಕ್ಕೆ ತೆರಳಿದ್ದರು. ದರ್ಶನಕ್ಕೆ ತಡವಾಗಿದ್ದರಿಂದ ಸಮೀಪದ ಹಳ್ಳಿಯಲ್ಲಿರುವ ಸಂಬಂಧಿಕರ ಮನೆಯಲ್ಲಿ ಉಳಿದುಕೊಳ್ಳಲು ತೆರಳುತ್ತಿದ್ದರು. ಮಾರ್ಗಮಧ್ಯೆ ಮೂತ್ರ ವಿಸರ್ಜನೆಗೆಂದು ಕಾರು ನಿಲ್ಲಿಸಿದ್ದರು. ಬಳಿಕ ಹೊರಡಲೆಂದು ಸಿದ್ಧರಾಗಿ ಸಿದ್ದರಾಜು ಮತ್ತು ಸ್ನೇಹಿತ ರವಿ ಕಾರು ಹತ್ತುವಾಗ ವೇಗವಾಗಿ ಬಂದ ಕಾರು ಇಬ್ಬರಿಗೂ ಡಿಕ್ಕಿ ಹೊಡೆಯಿತು. ಗಾಯಗೊಂಡಿದ್ದ ಇಬ್ಬರನ್ನೂ ಕೂಡಲೇ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಿದ್ದರಾಜು ಮೃತಪಟ್ಟಿದ್ದು, ಪ್ರಾಣಾಪಾಯದಿಂದ ಪಾರಾಗಿರುವ ರವಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಸಿದ್ದರಾಜು ಸೋದರ ರಾಜೇಶ್ ತಿಳಿಸಿದ್ದಾರೆ. ಸಿದ್ದರಾಜು, ಪತ್ನಿ, ಇಬ್ಬರು ಮಕ್ಕಳು, ಪೋಷಕರು, ಸಹೋದರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಿದ್ದರಾಜು ಪಾರ್ಥೀವ ಶರೀರವನ್ನು ಗುರುವಾರ ಸಂಜೆ ಗ್ರಾಮಕ್ಕೆ ತರಲಾಗಿದ್ದು, ಶುಕ್ರವಾರ ಬೆಳಗ್ಗೆ 11 ಗಂಟೆಗೆ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಬೋಗಾದಿ ರಸ್ತೆ ಸೇತುವೆ ಅಗಲೀಕರಣ: ಸ್ಥಳ ಪರಿಶೀಲನೆ



ಮೈಸೂರು, ಜೂ.29(ಜಿಎ)– ಮೈಸೂರಿನ ಬೋಗಾದಿ ರಸ್ತೆಯಲ್ಲಿರುವ ಸೇತುವೆ ಅಗಲೀಕರಣಕ್ಕೆ ಮುಹೂರ್ತ ಕೂಡಿ ಬಂದಿದೆ. ಈ ಸಂಬಂಧ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಅವರು ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿದರು.

ನಗರದ 44ನೇ ವಾರ್ಡ್ ವ್ಯಾಪ್ತಿಯಲ್ಲಿರುವ ಬೋಗಾದಿ ರಸ್ತೆಯ ಸೇತುವೆಯು ಸಾಕಷ್ಟು ಕಿರಿದಾಗಿದ್ದು, ಅದನ್ನು ಅಗಲ ಮಾಡಬೇಕು ಎಂದು ಶಾಸಕ ಜಿ.ಟಿ.ದೇವೇಗೌಡರಿಗೆ ಸ್ಥಳೀಯರು ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳ ಜತೆ ಚರ್ಚಿಸಿ ಶಾಸಕರು ಸೇತುವೆ ಅಗಲೀಕರಣಕ್ಕೆ ಸೂಚಿಸಿದ್ದಾರೆ.

ಸ್ಟೀಲ್ ಅಂಡ್ ಇಂಡಿಯಂಗ್ ವೃತ್ತದಿಂದ ಬೋಗಾದಿ ಜಂಕ್ಷನ್‌ವರೆಗೂ ಸುಸಜ್ಜಿತ ರಸ್ತೆ ಇದ್ದು, ಇದರಿಂದ ಇಲ್ಲಿ ನಿತ್ಯವೂ ಸಾಕಷ್ಟು ವಾಹನಗಳು ಸಂಚರಿಸುತ್ತವೆ. ಈ ರಸ್ತೆಯ ಸುತ್ತಮುತ್ತಲೂ ವಿವಿಧ ಖಾಸಗಿ ಕಾಲೇಜು ಇದ್ದು, ಇಲ್ಲಿನ ವಿದ್ಯಾರ್ಥಿಗಳು ವೇಗವಾಗಿ ಬೈಕ್ ಚಾಲನೆ ಮಾಡುವುದು ಸ್ಥಳೀಯರಿಗೆ ಕಿರಿಕಿರಿ ಉಂಟಾಗಿದೆ. ಮತ್ತೊಂದೆಡೆ ಇಲ್ಲಿ ಸುತ್ತ ಮುತ್ತ ಬಾರ್‌ಗಳು ಹೆಚ್ಚಿರುವುದರಿಂದ ಕುಡಿದು ವಾಹನ ಚಾಲನೆ ಮಾಡುವವರ ಸಂಖ್ಯೆ ಹೆಚ್ಚಾಗಿ, ಅಪಘಾತಗಳು ಸಂಭವಿಸಿ ಪರಿಣಾಮ ಸ್ಥಳೀಯ ನಿವಾಸಿಗಳು ಶಾಸಕರಿಗೆ ಇಲ್ಲಿನ ಸೇತುವೆ ಅಗಲೀಕರಣ ಮಾಡುವಂತೆ ಮತ್ತು ರಸ್ತೆ ವಿಭಜಕ ಅಳವಡಿಸುವಂತೆ ಮನವಿ ಮಾಡಿದ್ದರು.

ಈ ರಸ್ತೆಯಲ್ಲಿ ವಾಹನಗಳ ಸಂಖ್ಯೆ ಹೆಚ್ಚಿದ್ದು, ಪ್ರತಿನಿತ್ಯ ಒಂದೆರಡು ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಿವೆ. ಇದನ್ನು ತಡೆಗಟ್ಟಲು ಶಾಸಕರಾದ ಜಿ.ಟಿ.ದೇವೇಗೌಡರ ಗಮನಕ್ಕೆ ತರಲಾಗಿತ್ತು. ಸಮಸ್ಯೆಯನ್ನು ಮನಗಂಡ ಶಾಸಕರು ತಕ್ಷಣ ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಿದ್ದಾರೆ. ಆಯುಕ್ತರು ಸ್ಥಳ ಪರಿಶೀಲನೆ ಮಾಡಿದ್ದು, ಸದ್ಯದಲ್ಲಿಯೇ ಸೇತುವೆ ಅಗಲೀಕರಣವಾಗಲಿದೆ ಮತ್ತು ರಸ್ತೆ ವಿಭಜಕ ಅಳವಡಿಸಲಿದ್ದಾರೆ.



-ಸವಿತಾ ಸುರೇಶ್, ಪಾಲಿಕೆ ಸದಸ್ಯೆ

ಈ ಸಂಬಂಧ ವಾರ್ಡ್44ರ ಪಾಲಿಕೆ ಸದಸ್ಯೆ ಸವಿತಾ ಸುರೇಶ್ ಅವರು ಈ ರಸ್ತೆಯ ಸಮಸ್ಯೆಗಳ ಬಗ್ಗೆ ಶಾಸಕರ ಗಮನಕ್ಕೆ ತಂದಿದ್ದ ಪರಿಣಾಮ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಮತ್ತು ವಲಯ ಕಚೇರಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರಸ್ತೆ ಮತ್ತು ಸೇತುವೆಯನ್ನು ಪರಿಶೀಲನೆ ಮಾಡಿದ್ದಾರೆ.

ಸೇತುವೆ ಅಗಲೀಕರಣ ಮತ್ತು ರಸ್ತೆ ವಿಭಜಕ ಅಳವಡಿಸುವುದಕ್ಕೆ ಸೂಚನೆ ನೀಡಿದ್ದು, ವಲಯ ಕಚೇರಿ ಅಭಿವೃದ್ಧಿ ಅಧಿಕಾರಿ ಕಾಮಗಾರಿಗೆ ತಗಲುವ ಅಂದಾಜು ವೆಚ್ಚದ ತಯಾರಿಯಲ್ಲಿದ್ದು, ಸದ್ಯದಲ್ಲಿಯೇ ಕಾಮಗಾರಿ ಆರಂಭವಾಗಲಿದೆ.

ನಿವೃತ್ತಿ ನಂತರವೂ ನೌಕರರು ಕ್ರಿಯಾಶೀಲರಾಗಿರಬೇಕು

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿಮತ



ಮೈಸೂರು,ಜೂ.29(ಎಂಟಿವೈ)– ಸರ್ಕಾರಿ ಸೇವೆಯಿಂದ ನಿವೃತ್ತಿಯಾದ ನಂತರವೂ ನೌಕರರು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಕ್ರಿಯಾಶೀಲರಾಗುವುದರೊಂದಿಗೆ ಆರೋಗ್ಯ ಕಾಪಾಡಿಕೊಳ್ಳುವತ್ತ ಗಮನ ಹರಿಸಬೇಕು ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ತಿಳಿಸಿದ್ದಾರೆ.

ಮೈಸೂರಿನ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಹಾಗೂ ವಿಶ್ರಾಂತ ಉದ್ಯೋಗಿಗಳ ಸಂಘದ 2021–22 ಹಾಗೂ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಕೆಲವರು ಸರ್ಕಾರಿ ಸೇವೆಯಲ್ಲಿದ್ದರೂ ಕ್ರಿಯಾಶೀಲರಾಗಿರದೆ ನಿವೃತ್ತಿ ನಂತರದ ಮನಸ್ಥಿತಿ ಹೊಂದಿರುತ್ತಾರೆ. ಅಂತಹ ಸ್ಥಿತಿಗೆ ಯಾರೂ ತಲುಪಬಾರದು. ನಿವೃತ್ತಿಯ ನಂತರ ಕುಗ್ಗದೆ, ನಿರಾಶರಾಗದೆ, ಉತ್ತಮ ಆರೋಗ್ಯ ಕಾಪಾಡಿಕೊಂಡು ಪ್ರತೀ ನಿತ್ಯವೂ ಕ್ರಿಯಾಶೀಲರಾಗಿರಬೇಕು. ಸಮಾಜಕ್ಕೆ ಕೊಡುಗೆ ನೀಡಬೇಕು. ಆಗ ಮಾತ್ರ ನಿವೃತ್ತಿಯ ಬದುಕಿನಲ್ಲಿ ನೆಮ್ಮದಿಯನ್ನು ಕಾಣಬಹುದು.

ಸೇವೆಯಲ್ಲಿದ್ದಾಗ ಪ್ರಾಮಾಣಿಕ ಸೇವೆ ಸಲ್ಲಿಸಿ ಸರ್ಕಾರಕ್ಕೆ ಗೌರವ, ಹಿರಿಮೆ ತಂದುಕೊಟ್ಟಿರುವ ಅನೇಕರನ್ನು ನಿವೃತ್ತಿಯ ನಂತರವೂ ಸೇವೆ ಮುಂದುವರೆಸಲು ಅವಕಾಶ ನೀಡಲಾಗುತ್ತದೆ ವೃತ್ತಿ ಗೌರವ, ನಿಷ್ಠೆ ಬಹಳ ಮುಖ್ಯ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನಿವೃತ್ತ ನೌಕರರ ಹಿತಕಾಯಲು ಬದ್ಧವಾಗಿದೆ. ನಿಮ್ಮ ಬೇಡಿಕೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅದನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಹಾಗೂ ವಿಶ್ರಾಂತ ಉದ್ಯೋಗಿಗಳ ಸಂಘದ ಬಿ.ಆರ್.ಉಮಾಕಾಂತ್ ಮಾತನಾಡಿ, ನಮ್ಮ ಸಂಘದ ವತಿಯಿಂದ ನಿವೃತ್ತರಿಗೆ ಸಿಗಬೇಕಾದ ಪಿಂಚಣಿ ಮತ್ತಿತರ ಸೌಲಭ್ಯಗಳಿಂದ ವಂಚಿತರಾಗಿರುವವ ನಿವೃತ್ತರ ಮನೆಗಳಿಗೆ ಭೇಟಿ ನೀಡಿ ಅವರ ಸಂಕಷ್ಟಗಳನ್ನು ಆಲಿಸಲಾಗುತ್ತಿದೆ. ಸಂಬಂಧಿಸಿದ ಇಲಾಖೆಯ ಗಮನಕ್ಕೆ ತಂದು ಪರಿಹರಿಸುವ ಕೆಲಸ ನಿರಂತರವಾಗಿ ಮಾಡುತ್ತಿದ್ದೇವೆ. ಹತ್ತು ವರ್ಷಗಳ ಹಿಂದೆ ನಿವೃತ್ತಿ ವೇತನವನ್ನು 75 ವರ್ಷಕ್ಕೆ ಕೊನೆಗೊಳಿಸಬೇಕೆಂಬ ನಿರ್ಧಾರಕ್ಕೆ ಸರ್ಕಾರ ಚಿಂತನೆ ನಡೆಸಿತ್ತು. ಆ ವೇಳೆ ನಮ್ಮ ಸಂಘಟನೆಗಳು ನಿರಂತರವಾಗಿ ಹೋರಾಟಗಳ ಮೂಲಕ ರಾಷ್ಟ್ರಪತಿ ಗಮನಕ್ಕೆ ತರಲಾಗಿತ್ತು. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಹಿಡಿದಿಟ್ಟಿರುವ ವೇತನದಿಂದ ನಿವೃತ್ತರ ಕೊನೆಯುಸಿರಿನವರೆಗೂ ವೇತನ ನೀಡಬೇಕೆಂದು ಆಗ್ರಹಿಸಿ ಸಫಲರಾಗಿದ್ದೆವು. ನಿವೃತ್ತರ ಆರೋಗ್ಯದ ದೃಷ್ಟಿಯಿಂದ ಆಗಾಗ ಉಚಿತ ಆರೋಗ್ಯ ತಪಾಸಣೆಗಳನ್ನು ನಡೆಸಿಕೊಂಡು ನಿವೃತ್ತರ ಹಿತ ಕಾದಿದ್ದೇವೆ ಎಂದು ತಿಳಿಸಿದರು.

ಸಭೆಯಲ್ಲಿ ಸಂಘದ ಅಧ್ಯಕ್ಷ ಎನ್.ಓಬಯ್ಯ, ಪ್ರಧಾನ ಕಾರ್ಯದರ್ಶಿ ಚಿಕ್ಕಲಿಂಗಸ್ವಾಮಿ, ಖಜಾಂಚಿ ಕೆ.ಎಂ.ನಾಗರಾಜು, ಉಪಾಧ್ಯಕ್ಷರಾದ ಮರಿಯಾದಾಸ್, ಕೆ.ಟಿ. ವೀರಪ್ಪ, ಕೆ.ಎಂ.ಪುಟ್ಟು, ಆರ್.ನಾಗೇಶ್, ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜು, ನಿರ್ದೇಶಕ ಶ್ರೀಕಂಠೇಶ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಸರ್ಕಾರಿ ಉದ್ಯೋಗ ಪವಿತ್ರವಾದದ್ದಾಗಿದೆ. ಸರ್ಕಾರಿ ನೌಕರರು ತಮ್ಮ ಸೇವಾ ಅವಧಿಯಲ್ಲಿ ವಿವಿಧ ಹುದ್ದೆಗಳನ್ನು ಯಶಸ್ವಿಯಾಗಿ ನಿಭಾಯಿಸುವ ಮೂಲಕ ರಾಜ್ಯ, ರಾಷ್ಟ್ರದ ಅಭಿವೃದ್ಧಿಗೆ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. ಸೇವಾ ನಿವೃತ್ತಿ ನಂತರವೂ ಸಮಾಜದ ಉತ್ತಮ ಭವಿಷ್ಯಕ್ಕಾಗಿ ಸಲಹೆ, ಮಾರ್ಗದರ್ಶನ ನೀಡಬೇಕು. ವೃತ್ತಿಗಷ್ಟೇ ನಿವೃತ್ತಿ ಇರುತ್ತದೆ. ಆದರೆ ಉತ್ತಮ ವ್ಯಕ್ತಿತ್ವ ಹಾಗೂ ಬದುಕಿಗೆ ನಿವೃತ್ತಿ ಎಂಬುದು ಇರುವುದಿಲ್ಲ. ವ್ಯಕ್ತಿಗೆ ನಿವೃತ್ತಿ ಎಂಬುದು ಮನಸ್ಥಿತಿ ಅಷ್ಟೇ.

- ಎಂ.ಕೆ.ಸೋಮಶೇಖರ್, ಮಾಜಿ ಶಾಸಕ

ರಾಜಕೀಯ ಲಾಭಕ್ಕಾಗಿ ಎಂ.ಕೆ.ಸೋಮಶೇಖರ್ ಸುಳ್ಳು ಆರೋಪ ಮಾಡ್ತಿದ್ದಾರೆ: ಪ್ರದೀಪ್ ಕುಮಾರ್



ಮೈಸೂರು,ಜೂ.29(ಪಿಎಂ)– ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಎಂ.ಕೆ.ಸೋಮಶೇಖರ್ ಸೋಲಿಗೆ ನಾನೇ ಕಾರಣ ಎಂದು ಆರೋಪಿಸಿರುವುದು ಸರಿಯಲ್ಲ. ಯಾವುದೋ ರಾಜಕೀಯ ಲಾಭ ಪಡೆಯಲು ತಮ್ಮ ಸೋಲಿನ ಹೊಣೆಯನ್ನು ಬೇರೆಯವರ ತಲೆ ಮೇಲೆ ಹಾಕುತ್ತಿದ್ದಾರೆ ಎಂದು ಪಾಲಿಕೆ ಮಾಜಿ ಸದಸ್ಯ, ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್ ಪ್ರತ್ಯಾರೋಪ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊನ್ನೆ ಕೆಲ ಮಾಧ್ಯಮಗಳ ಮೂಲಕ ತಮ್ಮ ಸೋಲಿಗೆ ಪ್ರದೀಪ್‌ಕುಮಾರ್ ಸೇರಿದಂತೆ ಕೆಲ ಮುಖಂಡರು ಕಾರಣವೆಂದು ಎಂ.ಕೆ.ಸೋಮಶೇಖರ್ ಆರೋಪಿಸಿದ್ದಾರೆ. ಹೀಗೆ ಆರೋಪಿಸುವುದು ಕೆಟ್ಟ ಸಂಪ್ರದಾಯ. ಕಳೆದ ಚುನಾವಣೆಯಲ್ಲಿ ಅವರು 28 ಸಾವಿರ ಮತಗಳ ಅಂತರದಿಂದ ಸೋತಿದ್ದರು. ನಾವೆಲ್ಲಾ ಈ ಬಾರಿ ಕೆಲಸ ಮಾಡದಿದ್ದರೆ 30 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಸೋಲುತ್ತಿದ್ದರು ಎಂದು ತಿಳಿಸಿದರು.

ನಾವು ಕೆಲಸ ಮಾಡಿದ ಕಾರಣ 7 ಸಾವಿರ ಮತಗಳ ಅಂತರದಲ್ಲಿ ಅವರು ಸೋತಿದ್ದಾರೆ. ನಾನು ಗೆದ್ದೇ ಬಿಟ್ಟೆ ಎಂಬ ಅತಿಯಾದ ಆತ್ಮವಿಶ್ವಾಸದಿಂದ ಸೋತಿದ್ದಾರೆ ಎಂಬುದು ಇಡೀ ಕ್ಷೇತ್ರಕ್ಕೆ ಗೊತ್ತಿದೆ. ಕ್ಷೇತ್ರದಲ್ಲಿ ಕಳೆದ ಎರಡು ವರ್ಷಗಳಿಂದ ಕೆಲಸ ಮಾಡಿ ಕಾಂಗ್ರೆಸ್ ಪರವಾದ ಅಲೆ ಸೃಷ್ಟಿಸಿದ್ದೆವು. ಅಂದಿನ ಶಾಸಕ ರಾಮದಾಸ್ ಅವರ ಆಡಳಿತ ವೈಫಲ್ಯಗಳನ್ನು ಎತ್ತಿಹಿಡಿಯುವ ಮೂಲಕ ಕಾಂಗ್ರೆಸ್ ಅನ್ನು ಗೆಲುವಿನ ಹಾದಿಗೆ ತಂದು ನಿಲ್ಲಿಸಿದ್ದೆವು. ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರತಿಯೊಂದು ವಾರ್ಡ್‌ಗಳಲ್ಲಿ ಪ್ರಚಾರ ಮಾಡಿದ್ದೆವು ಎಂದರು.

ಸೋಮಶೇಖರ್ ತಮ್ಮ ಈ ಆರೋಪ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಮೇಲೆ ಒತ್ತಡ ಹಾಕಿ ಪರಿಶೀಲಿಸಿ ಕ್ರಮ ವಹಿಸಲು ಕೆಪಿಸಿಸಿ ಅಧ್ಯಕ್ಷರಿಗೆ ಪತ್ರ ಬರೆಯಿಸಿದ್ದಾರೆ. ಇದಾದ ಬಳಿಕ ಜೂ.13ರಂದು ಸಿದ್ದರಾಮಯ್ಯನವರನ್ನು ನಾನು ಭೇಟಿ ಮಾಡಿ, ಈ ಆರೋಪ ಸುಳ್ಳೆಂದು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇನೆ. ಜೊತೆಗೆ ಮೈಸೂರು ಕಾಂಗ್ರೆಸ್ ಸಮಿತಿಯಿಂದಲೂ ಮಾಹಿತಿ ಪಡೆಯಲು ಕೋರಿದ್ದೇನೆ ಎಂದು ತಿಳಿಸಿದರು. ಮುಖಂಡರಾದ ನಾಚನಹಳ್ಳಿಪಾಳ್ಯ ಶಿವಶಂಕರ್, ಸೋಮಶೇಖರ್, ಮಹೇಶ್, ಶಶಿಕುಮಾರ್, ವಕೀಲ ಶಶಿಕುಮಾರ್ ಗೋಷ್ಠಿಯಲ್ಲಿದ್ದರು.

ಬಹುಶಃ ಯಾವುದಾದರೂ ಬೋರ್ಡ್ (ನಿಗಮ–ಮಂಡಳಿ) ಅಧ್ಯಕ್ಷ ಸ್ಥಾನ ಪಡೆಯಲು ಈ ರೀತಿ ಆರೋಪ ಮಾಡುತ್ತಿದ್ದಾರೆ. ಈ ಸ್ಥಾನ ನನಗೆ ದೊರೆಯುವ ಆತಂಕ ಅವರಲ್ಲಿ ಇರಬೇಕು. ಆದರೆ ನಾನು ಯಾವುದೇ ಬೋರ್ಡ್ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಲ್ಲ. ಮುಂದಿನ ಚುನಾವಣೆಗೆ ನಾನು ಕೆಆರ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಬೇಕೆಂಬ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇನೆ.

-ಎಂ.ಪ್ರದೀಪ್‌ಕುಮಾರ್

ದೇಶದ ಆರ್ಥಿಕ ಬೆಳವಣಿಗೆ ಸಂಖ್ಯಾಶಾಸ್ತ್ರದ ಮೇಲೆ ನಿಂತಿದೆ



ಮೈಸೂರು, ಜೂ.29(ಬಿಎಲ್‌ಯು)– ಭಾರತ ಸೇರಿದಂತೆ ವಿಶ್ವದ ಪ್ರತಿಯೊಂದು ದೇಶದ ಆರ್ಥಿಕ ಬೆಳವಣಿಗೆ ಸಂಖ್ಯಾಶಾಸ್ತ್ರದ ಮೇಲೆ ನಿಂತಿದೆ ಎಂದು ಮೈಸೂರು ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಧನುಷ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿ ಇಂದು ಪ್ರೊ.ಪ್ರಶಾಂತ್ ಚಂದ್ರ ಮಹಾಲನೋಬಿಸ್ ಅವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಸಾಂಖ್ಯಿಕ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪ್ರತಿಯೊಂದು ವಿಚಾರಕ್ಕೂ ಸಂಖ್ಯಾಶಾಸ್ತ್ರ ಬಹಳ ಮುಖ್ಯ. ಅಂಕಿ ಅಂಶಗಳು ದೇಶದ ಅಭಿವೃದ್ಧಿ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂದು ತೋರಿಸುತ್ತದೆ ಎಂದರು.

ದೇಶದ ಆರ್ಥಿಕ ಬದಲಾವಣೆಗೆ ಸಂಖ್ಯಾಶಾಸ್ತ್ರ ಹೇಗೆ ಪರಿಣಾಮ ಬೀರುತ್ತದೆ ಎಂದು ಇದೇ ವೇಳೆ ಧನುಷ್ ವಿವರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಜೆ.ಮಹೇಂದ್ರ ಅವರು, ಸರ್ಕಾರಿ ಇಲಾಖೆಗಳಲ್ಲಿ ಯಾವುದೇ ಕಾರ್ಯ ನಡೆಯಬೇಕಾದರೆ ಸಾಂಖ್ಯಿಕ ಅಂಶಗಳು ಪ್ರಮುಖವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಹೇಳಿದರು. ಎಲ್ಲಾ ಸರ್ಕಾರಿ ಇಲಾಖೆಗಳಿಗೆ ಸಾಂಖ್ಯಿಕ ಇಲಾಖೆ ತಾಯಿ ಬೇರು ಇದ್ದಂತೆ. ಯಾವುದೇ ಇಲಾಖೆ ತನ್ನ ಕಾರ್ಯ ನಿರ್ವಹಿಸಬೇಕಾದರೆ ಸಾಂಖ್ಯಿಕ ಇಲಾಖೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಸಹಾಯಕ ನಿರ್ದೇಶಕಿ ದಿವ್ಯ ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಜು.1ರಿಂದ 7ರವರೆಗೆ ವನಮಹೋತ್ಸವ: 1.43 ಲಕ್ಷ ಗಿಡ ನೆಡಲು ಕ್ರಮ



ಮೈಸೂರು,ಜೂ.29(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಜು.1ರಿಂದ 7ರವರೆಗೆ ನಡೆಯಲಿರುವ ವನಮಹೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧೆಡೆ 1.43 ಲಕ್ಷ ಗಿಡ ನೆಡಲು ಉದ್ದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಜಿಲ್ಲಾ ವನಮಹೋತ್ಸವ ಸಮಿತಿಯ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಆನ್‌ಲೈನ್ ಮೂಲಕ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಭೆ ನಡೆಸಿದರು.

ಜಿಲ್ಲೆಯಾದ್ಯಂತ ವನಮಹೋತ್ಸವದಲ್ಲಿ 1.43 ಲಕ್ಷ ಗಿಡ ನೆಡಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಅಭಿಯಾನವನ್ನು ಯಶಸ್ವಿಗೊಳಿಸಲು ಎಲ್ಲಾ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಗಳ ಸಹಕಾರ ಅಗತ್ಯ. ವನಮಹೋತ್ಸವ ಸಪ್ತಾಹಕ್ಕೆ ಜಿಲ್ಲೆಯಾದ್ಯಂತ ವಿವಿಧ ಸಂಘ–ಸಂಸ್ಥೆಗಳು ಸಹಕಾರ ನೀಡುತ್ತಿವೆ. ಈ ಅಭಿಯಾನವನ್ನು ಯಶಸ್ವಿಗೊಳಿಸುವ ಮೂಲಕ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ಸಲಹೆ ನೀಡಿದರು.

ವನಮಹೋತ್ಸವ ಸಪ್ತಾಹಕ್ಕೆ ಜಿ.ಪಂ ವತಿಯಿಂದ 1.28 ಲಕ್ಷ, ಪೊಲೀಸ್ ಅಧೀಕ್ಷರ ಕಚೇರಿ ವತಿಯಿಂದ 803, ಪಿರಿಯಾಪಟ್ಟಣದ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಚೇರಿಯಿಂದ 697, ಮೈಸೂರು ಗ್ರಾಮಾಂತರ ಶಿಶು ಯೋಜನಾಭಿವೃದ್ಧಿ ಕಚೇರಿ ವತಿಯಿಂದ 923, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 3000, ಮೈಸೂರು ಮಹಾನಗರ ಪಾಲಿಕೆಯಿಂದ 5000 ಗಿಡ ನೆಡಲು ಉದ್ದೇಶಿಸಲಾಗಿದ್ದು, ಇದರೊಂದಿಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಗಿಡಗಳ ನೆಡಲು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದರು.

ಡಿಸಿಎಫ್ ಡಾ.ಬಸವರಾಜು ಮಾತನಾಡಿ, ಜಿಲ್ಲೆಯ ವಿವಿಧೆಡೆಯಿರುವ ಅರಣ್ಯ ಇಲಾಖೆಯ ಎಲ್ಲಾ ಸಸ್ಯ ಕ್ಷೇತ್ರಗಳಲ್ಲಿ ವಿವಿಧ ಅಳತೆಯ ಬ್ಯಾಗ್‌ಗಳಲ್ಲಿ ಗಿಡ ಬೆಳೆಯಲಾಗಿದೆ. ಎಲ್ಲಾ ತಾಲೂಕುಗಳ ನರ್ಸರಿಗಳಲ್ಲೂ ವಿವಿಧ ಬಗೆಯ ಸಸಿಗಳು ಲಭ್ಯವಿದೆ. ರೈತರು, ಸಾರ್ವಜನಿಕರು ರಿಯಾಯಿತಿ ದರದಲ್ಲಿ ಪಡೆದುಕೊಳ್ಳಬಹುದಾಗಿದೆ. ರೈತರು ತಮ್ಮ ಜಮೀನಿನಲ್ಲಿ ನೆಡುವ ಸಸಿಗಳಿಗೆ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದು ವಿವರಿಸಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

ಕಾಮಾಕ್ಷಿ ಆಸ್ಪತ್ರೆಯ 50ನೇ ವಾರ್ಷಿಕೋತ್ಸವ ಸಂಭ್ರಮ

ವೃದ್ಧಾಶ್ರಮ, ಅನಾಥಾಶ್ರಮ ಸ್ಥಾಪನೆ ಉದ್ದೇಶ



ಮೈಸೂರು, ಜೂ.29(ಬಿಎಲ್‌ಯು)– ಮೈಸೂರಿನ ಪ್ರತಿಷ್ಠಿತ ಹಾಗೂ ಹೆಸರಾಂತ ಕಾಮಾಕ್ಷಿ ಆಸ್ಪತ್ರೆಯ ಸಂಸ್ಥಾಪಕರ ದಿನ ಹಾಗೂ 50ನೇ ವಾರ್ಷಿಕೋತ್ಸವ ಸಮಾರಂಭ ಅದ್ಧೂರಿಯಾಗಿ ನಡೆಯಿತು.

ನಗರದ ಸರಸ್ವತಿಪುರಂನ ಮೂಲ ಆಸ್ಪತ್ರೆ ಆವರಣದ ಗಣಪತಿ ದೇವಸ್ಥಾನದಲ್ಲಿ ಬೆಳಗ್ಗೆ ಗಣ ಹೋಮ ಸೇರಿದಂತೆ ಹಲವು ಪೂಜಾ ಕೈಂಕರ್ಯವನ್ನು ನೆರವೇರಿಸಲಾಯಿತು.

ತರುವಾಯ ಆಸ್ಪತ್ರೆಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಸಂಸ್ಥಾಪಕರಾದ ದಿವಂಗತ ಬಿ.ಮಾಧವ ಶೆಣೈ ಹಾಗೂ ಸುಲೋಚನಾ ಮಾಧವ ಶೆಣೈ ಅವರ ಭಾವಚಿತ್ರಕ್ಕೆ ಆಸ್ಪತ್ರೆಯ ಮ್ಯಾನೇಜಿಂಗ್ ಟ್ರಸ್ಟಿ ಮಹೇಶ್ ಶೆಣೈ ಪುಷ್ಪಾರ್ಚನೆ ಮಾಡಿದರು.

ಆಸ್ಪತ್ರೆಯಲ್ಲಿ 25 ವರ್ಷ ಸೇವೆ ಸಲ್ಲಿಸಿದ ಸಿಬ್ಬಂದಿಗಳಾದ ನರೇಂದ್ರ ಶೆಣೈ, ಕೆ.ಎಸ್.ಬೇಬಿ, ಸುನಂದ ಹಾಗೂ ಶೋಭಾ ಅವರನ್ನು ಸನ್ಮಾನಿಸಲಾಯಿತು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿರುವ ಸಿಬ್ಬಂದಿ ಮಕ್ಕಳಾದ ವಿನಿತ್ ಹಾಗೂ ಮೋನಿಕಾ ಅವರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

1973 ರಲ್ಲಿ ಮಾಧವ ಶೆಣೈ ಹಾಗೂ ಸುಲೋಚನಾ ಶೆಣೈ ಅವರು ಈ ಆಸ್ಪತ್ರೆ ನಿರ್ಮಾಣ ಮಾಡಿದ್ದು, ಅಂದಿನಿಂದ ರೋಗಿಗಳಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಚಿಕಿತ್ಸೆ ನೀಡಲಾಗುತ್ತಿದೆ. ಈಗ 50 ನೇ ವರ್ಷದ ಸಂಭ್ರಮಾಚರಣೆ ಅಂಗವಾಗಿ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ವೃದ್ಧಾಶ್ರಮ ನಿರ್ಮಾಣ ಮಾಡಲಾಗುತ್ತಿದೆ. ಮುಂದೆ ಅನಾಥಾಶ್ರಮ ಕೂಡ ಸ್ಥಾಪನೆ ಮಾಡುವ ಚಿಂತನೆ ಇದೆ ಎಂದು ಮಹೇಶ್ ಶೆಣೈ ತಿಳಿಸಿದರು.

ಆಸ್ಪತ್ರೆಯ ಜಾಯಿಂಟ್ ಮ್ಯಾನೇಜಿಂಗ್ ಟ್ರಸ್ಟಿ ಅಶೋಕ್ ಶೆಣೈ, ಆಡಳಿತಾಧಿಕಾರಿ ಡಾ.ಕೆ.ಆರ್.ಕಾಮತ್, ಅಧೀಕ್ಷಕ ಡಾ.ಉಮೇಶ್, ಜನರಲ್ ಮ್ಯಾನೇಜರ್ ಎಸ್.ವಿ.ಪ್ರಸನ್ನ ಕುಮಾರ್, ಡೆಪ್ಯೂಟಿ ಮೆಡಿಕಲ್ ಸೂಪರಿಂಡೆಂಟೆಂಟ್ ಡಾ.ಅನುರಾಧ ಪ್ರಭು, ಅಧಿಕಾರಿಗಳಾದ ಶ್ರುತಿ ಅಶೋಕ್, ಸುಮನಾ ಭಟ್ ಸೇರಿದಂತೆ ಹಲವು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಜು.2ರಂದು ಪುಸ್ತಕ ಬಿಡುಗಡೆ ಸಮಾರಂಭ

ಮೈಸೂರು, ಜೂ. 29– ಜಾನಪದ ಕಲಾವಿದೆ ಪದ್ಮಶ್ರೀ ಶ್ರೀ ಮಾತಾ ಬಿ.ಮಂಜಮ್ಮ ಜೋಗತಿ ಅವರ ಸ್ಫೂರ್ತಿದಾಯಕ ಜೀವನ ಕತೆ ಫ್ರಮ್ ಮಂಜುನಾಥ ಟು ಮಂಜಮ್ಮ ಪುಸ್ತಕ ಬಿಡುಗಡೆ ಸಮಾರಂಭ ನಗರದ ಝಾನ್ಸಿ ಲಕ್ಷ್ಮಿಬಾಯಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಜುಲೈ 2ರಂದು ಸಂಜೆ 5.30ಕ್ಕೆ ನಡೆಯಲಿದೆ. ನಗರದ ಶ್ರೀ ಜನಜಾಗರಣ ಟ್ರಸ್ಟ್ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಕಲಾವಿದೆ ಮಂಜಮ್ಮ ಜೋಗತಿ, ಹಿರಿಯ ಪತ್ರಕರ್ತ ಎ.ಶಿವಕುಮಾರ್, ಪುಸ್ತಕದ ಲೇಖಕ ಹರ್ಷಭಟ್ ಪಾಲ್ಗೊಳ್ಳಲಿದ್ದಾರೆ.

ಮಣಿಪುರ: ಬೆಂಗಾವಲು ಪಡೆಗೆ ತಡೆ; ಹೆಲಿಕಾಪ್ಟರ್‌ನಲ್ಲಿ ನಿರಾಶ್ರಿತರ ಶಿಬಿರಕ್ಕೆ ತೆರಳಿದ ರಾಹುಲ್



ಇಂಫಾಲ್: ಬೆಂಗಾವಲು ಪಡೆ ವಾಹನವನ್ನು ಪೊಲೀಸರು ತಡೆದ ಕಾರಣ ಗಂಟೆಗಳ ಕಾಲ ಬಿಷ್ಣುಪುರದಲ್ಲಿ ಸಿಲುಕಿದ ನಂತರ ಎಐಸಿಸಿ ನಾಯಕ ರಾಹುಲ್ ಗಾಂಧಿ ಹೆಲಿ ಕಾಪ್ಟರ್ ನಲ್ಲಿ ಚುರಾಚಂದ್ ಪುರದ ನಿರಾಶ್ರಿತರ ಶಿಬಿರಕ್ಕೆ ತೆರಳಿದರು. ಬೆಂಗಾವಲು ಪಡೆ ವಾಹನದ ಮೇಲೆ ದಾಳಿ ಭೀತಿಯಿಂದ ಇಂಫಾಲ್ ನಿಂದ ಸುಮಾರು 20 ಕಿಲೋ ಮೀಟರ್ ದೂರದಲ್ಲಿರುವ ಬಿಷ್ಣುಪುರದಲ್ಲಿ ರಾಹುಲ್ ಗಾಂಧಿಯವರನ್ನು ಪೊಲೀಸರು ತಡೆದರು. ತದನಂತರ ರಾಜ್ಯಸರ್ಕಾರದ ಹೆಲಿಕಾಪ್ಟರ್‌ನಲ್ಲಿ ಚುರಚಂದಪುರಕ್ಕೆ ರಾಹುಲ್ ಗಾಂಧಿ ತೆರಳಿದ್ದಾರೆ. ಅವರೊಂದಿಗೆ ಪೊಲೀಸ್ ಮತ್ತು ಆಡಳಿತದ ಉನ್ನತಾಧಿಕಾರಿಗಳು ಕೂಡಾ ಹೆಲಿಕಾಪ್ಟರ್‌ನಲ್ಲಿದ್ದರು ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ. ಜನಾಂಗೀಯ ಕಲಹ ಪೀಡಿತ ಈಶಾನ್ಯ ರಾಜ್ಯಕ್ಕೆ ಎರಡು ದಿನ ಭೇಟಿ ಕೈಗೊಂಡಿರುವ ಕಾಂಗ್ರೆಸ್ ನಾಯಕ, ಬಿಷ್ಣುಪುರದಿಂದ ಇಂಫಾಲ್ ವಿಮಾನ ನಿಲ್ದಾಣಕ್ಕೆ ಹಿಂತಿರುಗಿ ಹೆಲಿ ಕಾಪ್ಟರ್ ಹತ್ತಿದರು ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಶಿಸ್ತು ಸಮಿತಿಯಿಂದ ಯತ್ನಾಳ್, ರೇಣುಕಾಚಾರ್ಯಗೆ ನೋಟಿಸ್

ಬೆಂಗಳೂರು: ಬಹಿರಂಗವಾಗಿ ಪಕ್ಷಕ್ಕೆ ಧಕ್ಕೆ ತರುವಂತಹ ಹೇಳಿಕೆ ನೀಡುತ್ತಿರುವ ಹಿನ್ನೆಲೆಯಲ್ಲಿ ಬಿಜೆಪಿ ರಾಜ್ಯ ಶಿಸ್ತು ಸಮಿತಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಾಜಿ ಶಾಸಕ ರೇಣುಕಾಚಾರ್ಯ ಸೇರಿ ಕೆಲವರಿಗೆ ಬಹಿರಂಗ ಹೇಳಿಕೆ ನೀಡದಂತೆ ನೋಟಿಸ್ ಜಾರಿ ಮಾಡಿದೆ. ವಿಧಾನಸಭಾ ಚುನಾವಣೆ ಪಕ್ಷದ



ಸೋಲಿಗೆ ಸಂಬಂಧಿಸಿದಂತೆ ಯತ್ನಾಳ್ ಮತ್ತು ರೇಣುಕಾಚಾರ್ಯ ಅವರುಗಳು ಬಹಿರಂಗವಾಗಿ ಪಕ್ಷದ ಕೆಲ ನಾಯಕರ ವಿರುದ್ಧ ಆರೋಪ ಮಾಡಿದ್ದರು. ರೇಣುಕಾಚಾರ್ಯ ಯಾವುದೇ ನಾಯಕರ ಹೆಸರೇಳದೆ ಪರೋಕ್ಷವಾಗಿ ವಾಗ್ದಾಳಿ ನಡೆಸಿದ್ದರೆ, ಯತ್ನಾಳ್ ಕೆಲ ನಾಯಕರ ಹೆಸರನ್ನು ಉಲ್ಲೇಖಿಸಿ ಟೀಕಿಸಿದ್ದರು.

ಎನ್.ಎಂ.ನವೀನ್‌ಕುಮಾರ್‌ಗೆ ಮುಡಾ ಅಧ್ಯಕ್ಷ ಸ್ಥಾನ ನೀಡುವಂತೆ ಸಚಿವ ದಿನೇಶ್ ಗುಂಡೂರಾವ್‌ಗೆ ಮನವಿ



ಮೈಸೂರು, ಜೂ. 29– ಆರೋಗ್ಯ ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಮೈಸೂರು ಬ್ರಾಹ್ಮಣ ಸಂಘದ ಮುಖಂಡರು ಜಲದರ್ಶಿನಿ ಅತಿಥಿ ಗೃಹದಲ್ಲಿ ಅಭಿನಂದಿಸಿದರು. ಇದೇ ವೇಳೆ ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್ ಕುಮಾರ್ ಅವರಿಗೆ ಮುಡಾ ಅಧ್ಯಕ್ಷ ಸ್ಥಾನ ನೀಡುವಂತೆ ವಿಪ್ರ ಮುಖಂಡರು ಮನವಿ ಮಾಡಿದರು.

ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ಬ್ರಾಹ್ಮಣರು ಸರ್ಕಾರಿ ಸವಲತ್ತನ್ನು ಬಳಸಿಕೊಳ್ಳಲು ಮುಂದಾಗಬೇಕು. ನಮ್ಮ ತಂದೆ, ಮಾಜಿ ಮುಖ್ಯಮಂತ್ರಿ ದಿ. ಗುಂಡೂರಾಯರ ಕಾಲದಲ್ಲಿ ಅರ್ಚಕರು ಪುರೋಹಿತರಿಗೆ ತಸ್ತಿಕ್ ಯೋಜನೆ ಸೇರಿದಂತೆ ಶಿಕ್ಷಕರ ನೇಮಕಾತಿ, ಸಾಂಸ್ಕೃತಿಕ ರಂಗಮಂದಿರಗಳ ನಿರ್ಮಾಣ ಮಾಡಿದ್ದರು. ಇದನ್ನು ಇಂದಿಗೂ ವಿಪ್ರ ಸಮಾಜ ಸ್ಮರಿಸುತ್ತದೆ. ನಾನಂತೂ ಅವರು ಹಾಕಿಕೊಟ್ಟ ಮಾರ್ಗದಲ್ಲೇ ಸಂಘಟನಾತ್ಮಕವಾಗಿ ನಡೆಯುತ್ತಿದ್ದೇನೆ. ವಿಪ್ರ ಸಂಘ ಸಂಸ್ಥೆಗಳು ಸರ್ಕಾರಿ ಸವಲತ್ತನ್ನು ಅರ್ಹ ಬಡ ಸ್ವಾಭಿಮಾನಿ ಕುಟುಂಬಗಳಿಗೆ ತಲುಪಿಸಲು ಶ್ರಮಿಸಬೇಕು ಎಂದರು.

ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಯೋಜನೆಗಳು ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣರಿಗೆ ತಲುಪಲು ಇ.ಡಬ್ಲ್ಯು.ಎಸ್ ಸರ್ಟಿಫಿಕೇಟ್ ಮಾನದಂಡ ಸಡಿಲಗೊಳಿಸಬೇಕು ಮತ್ತು ಅರ್ಚಕ ಪುರೋಹಿತರಿಗೆ ತಸ್ತಿಕ್ ಗೌರವಧನ ಹೆಚ್ಚಿಸಲು ಕ್ರಮಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಮೈಸೂರು ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಹೆಚ್.ಎನ್ ಶ್ರೀಧರಮೂರ್ತಿ ಮಾತನಾಡಿ, ಬ್ರಾಹ್ಮಣರು ಕೃಷ್ಣರಾಜ ಕ್ಷೇತ್ರದಲ್ಲಿ 60 ಸಾವಿರಕ್ಕೂ ಹೆಚ್ಚು ಮಂದಿಯಿದ್ದು, ಮೈಸೂರು ಜಿಲ್ಲೆಯಲ್ಲಿ 2ಲಕ್ಷಕ್ಕೂ ಹೆಚ್ಚು ಬ್ರಾಹ್ಮಣರಿದ್ದಾರೆ. ಕಾಂಗ್ರೆಸ್ ಯುವ ಮುಖಂಡ ಎನ್.ಎಂ. ನವೀನ್‌ಕುಮಾರ್ ಅವರು ಅತೀ ಹೆಚ್ಚಿನ ಸದಸ್ಯತ್ವ ಮಾಡಿದ್ದು ಸಂಘಟನಾತ್ಮಕವಾಗಿ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದಿದ್ದಾರೆ. ಅವರಿಗೆ ಮುಡಾ ಅಧ್ಯಕ್ಷ ಸ್ಥಾನ ಕಲ್ಪಿಸುವಂತೆ ಮನವಿ ಮಾಡಿದರು. ವೆಂಗೀಪುರಮಠದ ಇಳೈ ಆಳ್ವಾರ್ ಸ್ವಾಮೀಜಿ, ಅರ್ಚಕ ಪುರೋಹಿತ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ, ಮೈಸೂರು ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಹೆಚ್.ಎನ್ ಶ್ರೀಧರಮೂರ್ತಿ, ಕುಶಾಲನಗರ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷ ಮಂಜುನಾಥ್ ಗುಂಡೂರಾವ್, ಸೋಸಲೆ ಬ್ರಾಹ್ಮಣ ಸಂಘದ ಶ್ರೀಕಾಂತ್ ಕಶ್ಯಪ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಮಿರ್ಲೆ ಫಣೀಶ್, ವಿಘ್ನೇಶ್ವರ ಭಟ್, ಚಕ್ರಪಾಣಿ, ಸುಚೀಂದ್ರ, ಶ್ರೀನಿವಾಸ್, ಸುದರ್ಶನ್, ಗೋಪಾಲ ರಾವ್, ಸತ್ಯನಾರಾಯಣ್, ರಂಗನಾಥ್, ಬಾಲಕೃಷ್ಣ ಇನ್ನಿತರರು ಹಾಜರಿದ್ದರು.

ಬ್ಯೂಟಿಷಿಯನ್ ಉದ್ಯಮದಲ್ಲಿ ಪ್ರಗತಿ ಸಾಧಿಸಲು ನೈಪುಣ್ಯತೆ ಮುಖ್ಯ



ಮೈಸೂರು,ಜೂ.29(ಎಂಟಿವೈ)– ಮಹಿಳಾ ಉದ್ಯಮಿಗಳ ಸಂಘವು ಬ್ಯೂಟಿಷಿಯನ್‌ಗಳಿಗಾಗಿ ಆಯೋಜಿಸಿದ್ದ ಒಂದು ದಿನದ ತರಬೇತಿ ಕಾರ್ಯಾಗಾರದಲ್ಲಿ ಮೈಸೂರು, ಬೆಂಗಳೂರು ಸೇರಿದಂತೆ ವಿವಿಧೆಡೆಯಿಂದ ನೂರಕ್ಕೂ ಹೆಚ್ಚು ಬ್ಯೂಟಿಷಿಯನ್‌ಗಳು ಪಾಲ್ಗೊಂಡು ಮೇಕಪ್ ಮಾಡುವಲ್ಲಿ ನೈಪುಣ್ಯತೆ ಕುರಿತಂತೆ ಮಾಹಿತಿ ಪಡೆದರು.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಾಗಾರವನ್ನು ಮೈಸೂರು ಛೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಕೆ.ಬಿ.ಲಿಂಗರಾಜು ಉದ್ಘಾಟಿಸಿ, ಬ್ಯೂಟಿಷಿಯನ್ ಉದ್ಯಮದಲ್ಲೂ ಏಳಿಗೆ ಸಾಧಿಸಬಹುದಾದ ಅವಕಾಶವಿದೆ. ಈ ಉದ್ಯಮದಲ್ಲಿ ಪ್ರಗತಿ ಸಾಧಿಸಬೇಕಾದರೆ, ನೈಪುಣ್ಯತೆ ಕರಗತ ಮಾಡಿಕೊಳ್ಳುವ ಅವಶ್ಯಕತೆ ಇದೆ. ತರಬೇತಿ ಕಾರ್ಯಾಗಾರಗಳು ಬ್ಯೂಟಿಷಿಯನ್‌ಗಳಲ್ಲಿ ವೃತ್ತಿ ಕೌಶಲ್ಯ ಹೆಚ್ಚಿಸಿಕೊಳ್ಳಲು ಸಹಕಾರಿಯಾಗುತ್ತದೆ. ಕಾರ್ಯಾಗಾರದ ಸದುಪಯೋಗ ಪಡೆದುಕೊಂಡು ವೃತ್ತಿಯಲ್ಲಿ ಪ್ರಗತಿ ಹೊಂದುವಂತೆ ಸಲಹೆ ನೀಡಿದರು.

ಮೈಸೂರು ಮಹಿಳಾ ಉದ್ಯಮಿಗಳ ಸಂಘದ ಅಧ್ಯಕ್ಷೆ ಪದ್ಮಿನಿ ಶಿವಣ್ಣ ಮಾತನಾಡಿ, ಬ್ಯೂಟಿಷಿಯನ್ ಕ್ಷೇತ್ರದಲ್ಲೂ ಕೆಲವು ನೈಪುಣ್ಯತೆ ಇರಬೇಕಾಗುತ್ತದೆ. ಕೆಲವರು ಬ್ಯೂಟಿಪಾರ್ಲರ್‌ಗಳನ್ನು ಸ್ಥಾಪಿಸಿಕೊಂಡು ವೃತ್ತಿ ನಡೆಸುತ್ತಿದ್ದರೆ, ಮತ್ತೆ ಕೆಲವರು ಮನೆಗಳಲ್ಲೇ ಬ್ಯೂಟಿಷಿಯನ್ ವೃತ್ತಿಯನ್ನು ಪಾರ್ಟ್‌ಟೈಮ್ ಉದ್ಯೋಗ ಮಾಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ವೃತ್ತಿಯಲ್ಲಿ ಪರಿಣತಿ ಹೊಂದಲೆಂಬ ಕಾರಣದಿಂದ ಹೆಸರಾಂತ ಮೇಕಪ್ ಕಲಾವಿದರಿಂದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಸರ್ಕಾರದಿಂದ ಮಹಿಳಾ ಉದ್ಯಮಿಗಳಿಗೆ ದೊರಕುವ ಸೌಲಭ್ಯಗಳನ್ನು, ಮಹಿಳಾ ಉದ್ಯಮಿಗಳ ಸಂಘವು ಕೊಡಿಸುವ ಕೆಲಸ ಮಾಡುತ್ತಾ ಬಂದಿದೆ. ಸಣ್ಣ ಸಣ್ಣ ಉದ್ಯಮಿಗಳನ್ನು ಸೃಷ್ಟಿಸಲು ಪ್ರೇರಣೆ ನೀಡ ಲಾಗುತ್ತಿದೆ. ಸಣ್ಣ ಪ್ರಮಾಣದ ಉದ್ಯಮ ಆರಂಭಿಸಲು 1ರಿಂದ 5 ಲಕ್ಷ ರೂ.ವರೆಗೆ ಸಾಲ ಸೌಲಭ್ಯ ದೊರಕಿಸಿಕೊಡು ವುದಕ್ಕೂ ಮಹಿಳಾ ಉದ್ಯಮಿಗಳ ಸಂಘ ಶ್ರಮಿಸುತ್ತಿದೆ ಎಂದರು.

ಮೇಕಪ್ ತರಬೇತಿ: ಬ್ಯೂಟಿಷಿಯನ್‌ಗಳಿಗೆ ತರಬೇತಿ ನೀಡಲು ಮೇಕಪ್ ಕಲೆಯಲ್ಲಿ ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆದಿರುವ ಸೋಮು ಹಾಸನ್, ಬ್ಯೂಟಿಷಿಯನ್‌ಗಳಿಗಾಗಿ ಮೇಕಪ್ ಮಾಡುವ ಕಲೆ ಕುರಿತಂತೆ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಯಾವುದೇ ಕಂಪನಿಯ ಸೌಂದರ್ಯವರ್ಧಕ ಬಳಸಿದರೂ, ಅವಶ್ಯಕತೆಗೆ ಅನುಗುಣವಾದ ಪ್ರಮಾಣದಲ್ಲಿ ಬಳಕೆ ಮಾಡಬೇಕು, ಯಾವ ಯಾವ ವಸ್ತುಗಳನ್ನು ಎಷ್ಟು ಪ್ರಮಾಣದಲ್ಲಿ ಬಳಸಬೇಕು ಎಂದು ಸಲಹೆ ನೀಡಲಾಯಿತು.

ಈ ವೇಳೆ ಮಹಿಳಾ ಉದ್ಯಮಿಗಳ ಸಂಘದ ಟಿ.ಎ.ವಸಂತ ಕುಮಾರಿ, ಭಾರತಿ, ಕಮಲಾ ನಟರಾಜ್, ಬ್ಯೂಟಿಷಿಯನ್ ವೀಣಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದು ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ ಫಲಿತಾಂಶ

ಬೆಂಗಳೂರು: 2021ರ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯ ಫಲಿತಾಂಶ ಶುಕ್ರವಾರ ಪ್ರಕಟವಾಗಲಿದೆ. ಫಲಿತಾಂಶವನ್ನು ವೆಬ್‌ಸೈಟ್ http://karresults.nic.in ನಲ್ಲಿ ಬೆಳಗ್ಗೆ 11 ಗಂಟೆಯ ನಂತರ ವೀಕ್ಷಿಸಬಹುದಾಗಿದೆ ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ತಿಳಿಸಿದೆ. ಜೂನ್ 12 ರಿಂದ 19ರವರೆಗೆ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ ನಡೆದಿತ್ತು. ಇದೀಗ ಮೌಲ್ಯಮಾಪನ ಕಾರ್ಯ ಮುಕ್ತಾಯವಾಗಿದ್ದು, ಅಧಿಕೃತ ವೆಬ್‌ಸೈಟ್‌ಗಳಾದ kseab.karnataka.gov.in ಅಥವಾ karresults.nic.in ಫಲಿತಾಂಶ ಬಿಡುಗಡೆಯಾಗಲಿದೆ.

ಮೇನಲ್ಲಿ ಪ್ರಕಟವಾಗಿದ್ದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಒಟ್ಟು 7,00,619 ವಿದ್ಯಾರ್ಥಿಗಳು ಪಾಸ್ ಆಗಿದ್ದರು. ಮುಖ್ಯ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಮತ್ತು ಫಲಿತಾಂಶವನ್ನು ತಿರಸ್ಕರಿಸಿದ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗಿತ್ತು.

ಸೋಲಿನ ವಿಮರ್ಶೆ ಬಿಟ್ಟು ಲೋಕಸಭಾ ಚುನಾವಣೆಯತ್ತ ಗಮನ ಹರಿಸೋಣ

ಕೇಂದ್ರ ಸರ್ಕಾರಕ್ಕೆ 9ನೇ ವರ್ಷದ ಸಂಭ್ರಮದ ಸಭೆಯಲ್ಲಿ ಆರ್. ಅಶೋಕ್ ಕರೆ



ಮಡಿಕೇರಿ, ಜೂ.29– ವಿಧಾನ ಸಭಾ ಚುಣಾವಣೆಯಲ್ಲಿನ ಬಿಜೆಪಿ ಸೋಲಿನ ವಿಮರ್ಶೆ ಮಾಡುತ್ತಲೇ ಇದ್ದಲ್ಲಿ ನಾವು ಅಲ್ಲೆ ಉಳಿದು ಬಿಡುತ್ತೇವೆ. ಸೋಲನ್ನು ಮರೆತು ಮುಂದಿನ ಲೋಕಸಭಾ ಚುನಾವಣೆಯನ್ನು ಗೆಲ್ಲಲು ಶ್ರಮಿಸೋಣವೆಂದು ಬಿಜೆಪಿ ಮುಖಂಡರು ಹಾಗೂ ಮಾಜಿ ಉಪ ಮುಖ್ಯಮಂತ್ರಿಗಳಾದ ಆರ್.ಅಶೋಕ್ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

ನಗರದ ಗೌಡ ಸಮಾಜದ ಸಭಾಂಗಣದಲ್ಲಿ ನಡೆದ ಕೇಂದ್ರದ ಮೋದಿ ನೇತೃತ್ವದ ಸರ್ಕಾರ 9 ವರ್ಷಗಳ ಸಾಧನೆಯನ್ನು ತಿಳಿಸುವ 'ಬಿಜೆಪಿ ಕಾರ್ಯಕರ್ತರ ಸಮಾವೇಶ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಸ್ತುತ ಬಿಜೆಪಿಯ ಸೋಲಿನ ವಿಮರ್ಶೆಯಲ್ಲಿ ಕಾರ್ಯಕರ್ತರು ತೊಡಗಿದ್ದಾರೆ. ಮೊದಲು ಇದಕ್ಕೆ ಪೂರ್ಣ ವಿರಾಮ ಹಾಕಿ, ಮುಂದೆ ಏನು ಎನ್ನುವುದರತ್ತ ಎಲ್ಲರೂ ಚಿಂತನೆ ಹರಿಸೋಣ ಎಂದು ತಿಳಿಸಿದರು.

'ಮೋದಿ' ಕಾರ್ಯ ತಿಳಿಸಿ: ಬಿಜೆಪಿ ಪಕ್ಷದಿಂದ ನಡೆದಿರುವ ಜನಪರವಾದ ಕಾರ್ಯಕ್ರಮಗಳನ್ನು ಜನರಿಗೆ ಮುಟ್ಟಿಸುವಲ್ಲಿ ನಾವು ವಿಫಲರಾಗಿದ್ದೇವೆ. ಕೇವಲ 'ಮೋದಿ' ಹೆಸರನ್ನು ಹೇಳುತ್ತಾ ಹೋದರೆ ಮತ ಬರಲಾರದು. ಮೋದಿ ಅವರು ಈ ರಾಷ್ಟ್ರಕ್ಕೆ ನೀಡಿದ ಕೊಡುಗೆ, ಮಾಡಿರುವ ಮಹತ್ತರ ಕಾರ್ಯಗಳ ಮೇಲೆ ಮತಗಳು ಬರುತ್ತದೆಂದು ಸ್ಪಷ್ಟಪಡಿಸಿದರು. ರಾಜ್ಯದ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿ ಸೋತಿದೆ. ಈ ಗೆಲುವಿನೊಂದಿಗೆ ಕಾಂಗ್ರೆಸ್ ಒಂದು ಗೆರೆ ಎಳೆದಿದೆ. ಮುಂಬರುವ ಲೋಕ ಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸುವ ಮೂಲಕ, ಕಾಂಗ್ರೆಸ್ ಎಳೆದ ಗೆರೆಗಿಂತಲು ದೊಡ್ಡ ಗೆರೆಯನ್ನು ಎಳೆಯಬೇಕೆಂದು ದೃಢವಾಗಿ ನುಡಿದರು.

ಕಾಂಗ್ರೆಸ್‌ಗೆ ಅಭಿನಂದನೆ: ಮಾಜಿ ಸಚಿವ ಆರ್.ಅಶೋಕ್ ಅವರು ಮಾತಿನ ನಡುವೆ, ಅಕ್ಕಿ ಭಾಗ್ಯದ ಮೂಲಕ ಪಡಿತರ ಚೀಟಿಗೆ ದೊರಕುತ್ತಿದ್ದ 5 ಕೆಜಿ ಅಕ್ಕಿ ಕೇಂದ್ರದ ಮೋದಿ ಸರ್ಕಾರದ್ದೆಂದು ಜನರಿಗೆ ಮನದಟ್ಟಾಗಿದೆ. ಈ ಹಿನ್ನೆಲೆ ಅಕ್ಕಿ ಭಾಗ್ಯದ ಮೂಲಕ ಕೇಂದ್ರದ ಕೊಡುಗೆಯನ್ನು ಜನರ ಅರಿವಿಗೆ ತಂದ ಕಾಂಗ್ರೆಸ್‌ಗೆ ಅಭಿನಂದನೆ ಸಲ್ಲಿಸುವುದಾಗಿ ಹಾಸ್ಯದ ಧಾಟಿಯಲ್ಲಿ ನುಡಿದರು. ಇಂದು ಅಕ್ಕಿ ಕೇಂದ್ರದ್ದು, ಚೀಲ ಮಾತ್ರ ಸಿದ್ದರಾಮಯ್ಯ ಅವರದ್ದೆಂದು ತಿಳಿಯುವಂತಾಯಿತು ಎಂದು ವ್ಯಂಗ್ಯವಾಡಿದರು. ರಾಜ್ಯದ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿಗಳು ಸಮರ್ಪಕವಾಗಿ ಜಾರಿಯಾಗದೆ ಗೊಂದಲವಾಗಿದ್ದು, ಸಿದ್ದರಾಮಯ್ಯ ಅವರ ಈ ಮೋಸವನ್ನು ಜನರಿಗೆ ತಲುಪಿಸಬೇಕು. ಈ ಬಗ್ಗೆ ಬೀದಿಗಿಳಿದು ಹೋರಾಟ ನಡೆಸುವ ಮೂಲಕ ಕಾಂಗ್ರೆಸ್ ಏನೆಂಬುದನ್ನು ಜನರಿಗೆ ಮನದಟ್ಟು ಮಾಡಬೇಕೆಂದು ಹೇಳಿದರು.

ವರ್ಗಾವಣೆ ದಂಧೆ: ಬಿಜೆಪಿಯನ್ನು 40 ಪರ್ಸೆಂಟ್ ಕಮಿಷನ್ ಸರಕಾರ ಎಂದು ಟೀಕಿಸುತ್ತಿದ್ದ ಕಾಂಗ್ರೆಸ್ ಅದಕ್ಕೆ ದಾಖಲೆಯನ್ನು ಇಲ್ಲಿಯವರೆಗೆ ನೀಡಿಲ್ಲ. ಬದಲಾಗಿ ಇದೀಗ ದುಡ್ಡು ಹೊಡೆಯುವುದಕ್ಕೆ ಅಧಿಕಾರಿಗಳ ವರ್ಗಾವಣೆಯ ದಂಧೆಯಲ್ಲಿ ತೊಡಗಿದೆ. ಇದೀಗ ಕಾಂಗ್ರೆಸ್‌ನ ನಿಜಬಣ್ಣ ಬಯಲಾಗುತ್ತಿದೆ ಎಂದು ಹೇಳಿದರು.

ಮಡಿಕೇರಿ ಕ್ಷೇತ್ರದ ಮಾಜಿ ಶಾಸಕ ಅಪ್ಪಚ್ಚು ರಂಜನ್ ಮಾತನಾಡಿ, ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಹಿಂದಿನ ಚುನಾವಣೆಗಿಂತಲೂ ಬಿಜೆಪಿ ಹೆಚ್ಚಿನ ಮತ ಗಳಿಸಿದೆ. ಆದರೆ, ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್‌ನಿಂದಾಗಿ, ಕೂಲಿ ಕಾರ್ಮಿಕ ಸಮೂಹ ಜಿಲ್ಲೆಯಲ್ಲಿ ಹೆಚ್ಚಾಗಿರುವುದರಿಂದ ಸೋಲು ಎದುರಾಯಿತು ಎಂದು ವಿಶ್ಲೇಷಿಸಿದರು. ಚುನಾವಣೆಯ ಸಂದರ್ಭ ತಮ್ಮ ಆತ್ಮಕ್ಕೆ ಚುಚ್ಚುವ ಮಾಡಿಕೊಂಡವರು ಒಮ್ಮೆ ತಮ್ಮನ್ನೇ ಸೋಲಿಗೆ ಕಾರಣವೇನೆಂದು ಪ್ರಶ್ನಿಸಿಕೊಳ್ಳಲಿ ಎಂದು ಸೂಕ್ಷ್ಮವಾಗಿ ನುಡಿದರು.

ಬಿಜೆಪಿ ಸೋತಿದೆ–'ಸತ್ತಿಲ್ಲ': ಸಂಸದ ಪ್ರತಾಪ ಸಿಂಹ ಮಾತನಾಡಿ, ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿ ಸೋತಿರಬಹುದು. ಆದರೆ, ಸತ್ತಿಲ್ಲ. ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಚಿಂತನೆಯಡಿ ಮೋದಿ ಗೆಲುವಿಗೆ ಶ್ರಮಿಸುವಂತೆ ಕರೆ ನೀಡಿದರಲ್ಲದೆ, ಬಿಜೆಪಿಯ ಭದ್ರಕೋಟೆಯಾಗಿ ಕೊಡಗು ಇದೆ ಎನ್ನುವುದನ್ನು ಮುಂದಿನ ಚುನಾವಣೆಗಳಲ್ಲಿ ನಿರೂಪಿಸೋಣ ಎಂದರು.

ಮಾಜಿ ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ಬಿಜೆಪಿಗೆ ಸೋಲು ಹೊಸದೇನಲ್ಲ. ಸೋಲಿನಿಂದ ಧೃತಿಗೆಡಬೇಕಾಗಿಲ್ಲ. ಹೀಗಿದ್ದೂ, ವೈಯಕ್ತಿಕವಾದ ದ್ವೇಷವನ್ನು ಪಕ್ಷದ ವಿರುದ್ಧವಾಗಿ ತರುವುದು ಬೇಡ. ಮುಂಬರುವ ಸ್ಥಳೀಯ ಸಂಸ್ಥೆಗಳು, ಜಿಲ್ಲಾ, ತಾಲೂಕು ಪಂಚಾಯ್ತಿ, ಲೋಕಸಭಾ ಚುನಾವಣೆಯಲ್ಲಿ ಸೋಲಿನ ಕಡೆಯಿಂದ ಗೆಲುವಿನೆಡೆಗೆ ಬಿಜೆಪಿ ನಡೆಯಬೇಕೆಂದು ನುಡಿದರು.

ವೇದಿಕೆಯಲ್ಲಿ ಮಾಜಿ ಸಹಕಾರ ಸಚಿವ ಸೋಮಶೇಖರ್, ಎಂಎಲ್‌ಸಿ ಸುಜಾ ಕುಶಾಲಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ರಾಬಿನ್ ದೇವಯ್ಯ, ನಗರಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಮಾಜಿ ಎಂಎಲ್‌ಸಿ ಎಸ್.ಜಿ. ಮೇದಪ್ಪ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಬಿ.ಬಿ. ಭಾರತೀಶ್, ನಾಪಂಡ ಕಾಳಪ್ಪ, ಅರುಣ್ ಭೀಮಯ್ಯ, ಮಹೇಶ್ ಜೈನಿ, ಅರುಣ್ ಭೀಮಯ್ಯ ಮೊದಲಾದವರು ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆವರೆಗೆ ಮಾತ್ರ ಕಾಂಗ್ರೆಸ್ ಗ್ಯಾರಂಟಿ

ಮಾಜಿ ಉಪಮುಖ್ಯಮಂತ್ರಿ ಆರ್. ಅಶೋಕ್ ಲೇವಡಿ

ಮಡಿಕೇರಿ, ಜೂ.29– ಕಾಂಗ್ರೆಸ್ ಚುನಾವಣಾ ಹಿನ್ನೆಲೆಯಲ್ಲಿ ನೀಡಿರುವ ಐದು ಗ್ಯಾರಂಟಿಗಳು ಮುಂದಿನ ಸಾಲಿನ ಲೋಕ ಸಭಾ ಚುನಾವಣೆಯವರೆಗೆ ಮಾತ್ರವೇ ನಡೆಯಲಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಆರ್.ಅಶೋಕ್ ಲೇವಡಿ ಮಾಡಿದ್ದಾರೆ.

ನಗರದ ಗೌಡ ಸಮಾಜ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನೀಡಿರುವ ಗ್ಯಾರಂಟಿಗಳಲ್ಲಿ ಮಹಿಳೆಯರಿಗೆ ಉಚಿತ ಬಸ್ ಮಾತ್ರ ಜಾರಿಯಾಗಿದ್ದು, ಅದೂ ಸಮರ್ಪಕವಾಗಿಲ್ಲ. ಇನ್ನು ಪ್ರತಿ ಮನೆಯ ಮಹಿಳೆಯರಿಗೆ 2 ಸಾವಿರ ರೂ., ನಿರುದ್ಯೋಗಿಗಳಿಗೆ 3 ಸಾವಿರ, ಪ್ರತಿ ಮನೆಗೆ 200 ಯೂನಿಟ್ ಗ್ಯಾರಂಟಿಗಳು ಇನ್ನೂ ಜಾರಿಯಾಗಿಲ್ಲ, ಇವೆಲ್ಲ ಗೊಂದಲದ ಗೂಡಾಗಿದೆ ಎಂದು ಟೀಕಿಸಿದರು.

ಪ್ರತಿ ಪಡಿತರ ಚೀಟಿ ಸದಸ್ಯರಿಗೆ ತಲಾ 10 ಕೆ.ಜಿ. ಅಕ್ಕಿಯನ್ನು ನೀಡಲು ಇನ್ನೂ ಸಾಧ್ಯವಾಗಿಲ್ಲ. ಆದರೆ ಸಿದ್ದರಾಮಯ್ಯ ಅವರ ಈ ಅಕ್ಕಿ ಯೋಜನೆಯಿಂದ ಇಲ್ಲಿಯವರೆಗೆ ಪಡಿತರದಾರರಿಗೆ ದೊರಕುತ್ತಿದ್ದ 5 ಕೆ.ಜಿ. ಅಕ್ಕಿ ಕೇಂದ್ರದ ಮೋದಿ ನೇತೃತ್ವದ ಸರ್ಕಾರ ನೀಡುತ್ತಿದ್ದುದು ಎನ್ನುವುದು ಜನರಿಗೆ ತಿಳಿಯುವಂತಾಗಿದೆ ಎಂದು ತೀಕ್ಷ್ಣವಾಗಿ ನುಡಿದರು.

ಈ ಸರ್ಕಾರ ಉಳಿಯಲ್ಲ: ಜನರಿಗೆ ಸುಳ್ಳು ಭರವಸೆಗಳನ್ನು ನೀಡಿ ಮೋಸ ಎಸಗುತ್ತಿರುವ ಸಿದ್ದರಾಮಯ್ಯ ನೇತೃತ್ವದ ರಾಜ್ಯದ ಕಾಂಗ್ರೆಸ್ ಸರ್ಕಾರ ಲೋಕ ಸಭಾ ಚುನಾವಣೆಯ ಬಳಿಕ ಬಿದ್ದು ಹೋಗುತ್ತದೆಂದು ಆರ್. ಅಶೋಕ್ ಇದೇ ಸಂದರ್ಭ ದೃಢವಾಗಿ ನುಡಿದರು. ಸಿದ್ದರಾಮಯ್ಯ ಮತ್ತು ಡಿ.ಕೆ ಶಿವಕುಮಾರ್ ಕಾಂಗ್ರೆಸ್ ಶಾಸಕರನ್ನು ಬಣ ರಾಜಕೀಯದ ಮೂಲಕ ಹಿಡಿತದಲ್ಲಿಟ್ಟುಕೊಳ್ಳಲು ಪೈಪೋಟಿ ನಡೆಸುತ್ತಿದ್ದಾರೆ. ಇದು ಕೂಡ ಕಾಂಗ್ರೆಸ್ ಯೋಜನೆಗಳಲ್ಲಿ ಒಂದಾಗಿದೆ ಎಂದು ಅಶೋಕ್ ವ್ಯಂಗ್ಯವಾಡಿದರು.

ಕಾಂಗ್ರೆಸ್‌ನಿಂದ ಬಿಜೆಪಿಗೆ ಬಂದ 17 ವಲಸಿಗ ಶಾಸಕರಿಂದಾಗಿಯೇ ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾಗಲು ಕಾರಣವಾಯಿತು. ಹೀಗಾಗಿ ಈ ಶಾಸಕರನ್ನು ಬಿಜೆಪಿ ಪಕ್ಷದಿಂದ ಕೈಬಿಡುವ ಪ್ರಶ್ನೆಯೇ ಇಲ್ಲ. ಅವರೊಂದಿಗೆ ಬಿಜೆಪಿ ಮುಂದೆ ಸಾಗಲಿದೆ. ಮಳೆ ನಿಂತ ಮೇಲೆ ಕೆಲವೊಂದು ಹನಿಗಳು ಸಿಂಪಡಿಸುವುದು ಸಹಜ ಪ್ರಕ್ರಿಯೆ ಎಂದೂ ಬಿಜೆಪಿಯ ಕೆಲ ನಾಯಕರ ದೂರಿಗೆ ಅಶೋಕ್ ಮಾರ್ಮಿಕವಾಗಿ ಉತ್ತರಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಎಸ್.ಟಿ. ಸೋಮಶೇಖರ್, ಮಾಜಿ ಶಾಸಕ ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ರಾಬಿನ್ ದೇವಯ್ಯ ಮತ್ತಿತರರು ಉಪಸ್ಥಿತರಿದ್ದರು.

ಕಾಂಗ್ರೆಸ್ಸಿನದು 'ಪೋಸ್ಟಿಂಗ್' ಸರ್ಕಾರವೇ?: ಸಂಸದ ಪ್ರತಾಪ್‌ಸಿಂಹ ವಾಗ್ದಾಳಿ

ಮಡಿಕೇರಿ, ಜೂ.29– ಬಿಜೆಪಿಯನ್ನು 40 ಪರ್ಸೆಂಟ್ ಸರ್ಕಾರ ಎಂದು ತಮಟೆ ಹೊಡೆದುಕೊಂಡು ಸಾರಿದ್ದ ಕಾಂಗ್ರೆಸ್ ಇದೀಗ ಅಧಿಕಾರಕ್ಕೆ ಬಂದ ಮೇಲೆ 'ಪೋಸ್ಟಿಂಗ್' ಸರ್ಕಾರ ನಡೆಸುತ್ತಿದೆಯೇ ಎಂದು ಕೊಡಗು ಮೈಸೂರು ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರತಾಪ್ ಸಿಂಹ, ಅಧಿಕಾರಿಗಳ ವರ್ಗಾವಣೆ ವಿಚಾರವಾಗಿ ರಾಜ್ಯ ಕಾಂಗ್ರೆಸ್ ಸರ್ಕಾರದ ನಡೆಗೆ ಪ್ರತಾಪ್ ಸಿಂಹ ಕಿಡಿಕಾರಿದರು. ಅನ್ನಭಾಗ್ಯ ಯೋಜನೆಯಲ್ಲಿ 5 ಕೆ.ಜಿ ಅಕ್ಕಿ, ಉಳಿದ 5 ಕೆ.ಜಿ ಅಕ್ಕಿಗೆ ಹಣ ನೀಡುವ ರಾಜ್ಯ ಸರ್ಕಾರದ ನಿರ್ಧಾರ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಸಂಸದ ಪ್ರತಾಪ್ ಸಿಂಹ, ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಳ್ಳಿ ಅಂತ ಸಿ.ಎಂ. ಸಿದ್ದರಾಮಯ್ಯ ಅವರಿಗೆ ಸಲಹೆ ನೀಡಿದರು. ನೀವು ಗ್ಯಾರಂಟಿಯಲ್ಲಿ 10 ಕೆ.ಜಿ ಅಕ್ಕಿ ಕೊಡುತ್ತೇವೆ ಎಂದು ಹೇಳಿದ್ದೀರಿ. ಈಗ ಯಾಕೆ 5 ಕೆ.ಜಿ ಬಗ್ಗೆ ಮಾತನಾಡುತ್ತಿದ್ದೀರಾ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, 5 ಕೆಜಿ ಅಕ್ಕಿ ಕೇಂದ್ರ ಕೊಡುತ್ತಿರುವುದು ಎಂಬುದು ನಿಮಗೆ ಮನವರಿಕೆಯಾದ ಮೇಲೆ ನೀವು ನುಡಿದಂತೆ 10 ಕೆ.ಜಿ.ಗೆ 34 ರೂಪಾಯಿಯ ರೀತಿಯಾಗಿ ಹಣ ವಿತರಿಸಿ ಎಂದು ಸಲಹೆ ನೀಡಿದರು.

ಗ್ಯಾರಂಟಿ ಘೋಷಿಸುವಾಗ ಕೇಂದ್ರದ ಮೋದಿಜಿ ನೇತೃತ್ವದ ಸರ್ಕಾರ ಕೊಡುತ್ತಿದ್ದದ್ದು ಸೇರಿಸಿ ಹೇಳಿದ್ರಾ ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಮೋದಿ ನೇತೃತ್ವದ ಕೇಂದ್ರ ಕೊಡುತ್ತಿರುವ ಅಕ್ಕಿಗೆ ಅನ್ನಭಾಗ್ಯ ಲೇಬಲ್ ಹಾಕಿದ್ರಿ, ಈಗ ಸತ್ಯ ಒಪ್ಪಿಕೊಂಡಿದ್ದೀರಾ ಎಂದು ಪ್ರತಾಪ್ ವ್ಯಂಗ್ಯವಾಡಿದರು.

ಕೇಂದ್ರದ ಅಕ್ಕಿಯ ಪಾಲಿನ ಬಗ್ಗೆ ಸತ್ಯ ಒಪ್ಪಿಕೊಂಡಿರುವುದಕ್ಕೆ ಸಿ.ಎಂ. ಸಿದ್ದರಾಮಯ್ಯ ಅವರಿಗೆ ಧನ್ಯವಾದ ಸಲ್ಲಿಸಿದ ಪ್ರತಾಪ್ ಸಿಂಹ, ಅಂತ್ಯೋದಯ ಅನ್ನಭಾಗ್ಯ ಯೋಜನೆ ಜಾರಿಗೆ ತಂದಿದ್ದೇ ಬಿಜೆಪಿಯ ನಾಯಕ ವಾಜಪೇಯಿ ಅವರು, ಅದು ನಿಮ್ಮ ಕಾಂಗ್ರೆಸ್ ಸರ್ಕಾರದ ಕೊಡುಗೆ ಅಲ್ಲ ಎಂದು ಹೇಳಿದರು. ಈ ಸಂದರ್ಭ ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಬಿಜೆಪಿ ಮಂಡಲ ಅಧ್ಯಕ್ಷ ಸತೀಶ್ ಉಪಸ್ಥಿತರಿದ್ದರು.

ತ್ಯಾಗ ಬಲಿದಾನ ಸಂಕೇತವಾದ ಬಕ್ರೀದ್ ಆಚರಣೆ



ಕುಶಾಲನಗರ, ಜೂ.29– ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಪಟ್ಟಣದಲ್ಲಿ ಮುಸ್ಲಿಂ ಬಾಂಧವರು ಗುರುವಾರ ಆಚರಿಸಿದರು.

ಬಕ್ರೀದ್ ಮುಸಲ್ಮಾನರ ಪ್ರಮುಖ ಹಬ್ಬವಾಗಿದ್ದು, ಈ ಬಾರಿ ಬಕ್ರೀದ್ ಹಬ್ಬವನ್ನು ಶಾಫಿ ಹಾಗೂ ಹನಫಿ ಪಂಗಡದವರು ಒಂದೇ ದಿನ ಆಚರಿಸಿದರು. ಶುಭದಿನದಂದು ಬೆಳಿಗ್ಗೆ ಮಸೀದಿಗೆ ತೆರಳಿ ಬಕ್ರೀದ್ ಹಬ್ಬದ ನಮಾಜನ್ನು ನೆರವೇರಿಸಿದರು. ನಂತರ ಬಕ್ರೀದ್ ಹಬ್ಬದ ಪ್ರಾಮುಖ್ಯತೆ ಕುರಿತು ಮಸೀದಿಯ ಧರ್ಮಗುರುಗಳಿಂದ ಬೋಧನೆ ನೀಡಲಾಯಿತು. ಕುಶಾಲನಗರದ ಹಿಲಾಲ್ ಮಸೀದಿ, ತಕ್ವಾ ಮಸೀದಿ, ಜಾಮಿಯಾ ಮಸೀದಿ ಸೇರಿದಂತೆ ದಂಡಿನಪೇಟೆ, ಜನತಾ ಕಾಲೋನಿ, ಕೂಡಿಗೆ, ನಂಜರಾಯಪಟ್ಟಣದ ಮಸೀದಿಯಲ್ಲಿ ಬಕ್ರೀದ್ ಹಬ್ಬದ ವಿಶೇಷವಾದ ನಮಾಜ್ ಹಾಗೂ ಪ್ರಾರ್ಥನೆಯನ್ನು ನೆರವೇರಿಸಲಾಯಿತು. ಈ ಸಂದರ್ಭ ಮುಸಲ್ಮಾನ ಸಹೋದರರು ಪರಸ್ಪರ ಬಕ್ರೀದ್ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಬಕ್ರೀದ್ ವಿಶೇಷವಾದ ದಿನವಾದ ಹಿನ್ನಲೆ ತಮ್ಮ ಕುಟುಂಬದಲ್ಲಿ ಮರಣ ಹೊಂದಿದವರ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಲಾಯಿತು.

ಹಿಲಾಲ್ ಮಸೀದಿಯ ಧರ್ಮಗುರುಗಳು ಹಾಗೂ ಮುದರ್ರಿಸ್ ಆದ ಅಬ್ದುಲ್ ನಾಸಿರ್ ಫೈಝಿ ರವರ ನೇತೃತ್ವದಲ್ಲಿ ಬಕ್ರೀದ್ ಹಬ್ಬದ ವಿಶೇಷ ಪ್ರಾರ್ಥನೆ ನಡೆಸಲಾಯಿತು. ನಂತರ ಸರ್ವರಿಗೂ ಹಬ್ಬದ ಶುಭಾಶಯಗಳನ್ನು ತಿಳಿಸಿದರು. ಹಿಲಾಲ್ ಮಸೀದಿ ಅಧ್ಯಕ್ಷರಾದ ಎಮ್.ಎಮ್.ಎಸ್ ಹುಸೇನ್ ಅವರು, ಜಾತಿ, ಧರ್ಮ, ದ್ವೇಷವನ್ನು ಮರೆತು ಎಲ್ಲರೂ ಪರಸ್ಪರ ಸಹೋದರರಂತೆ ಬಾಳಿ ಬದುಕಬೇಕು ಎಂದರು. ಈ ಸಂದರ್ಭದಲ್ಲಿ ಹಿಲಾಲ್ ಮಸೀದಿ ಕಾರ್ಯದರ್ಶಿ ಅಬ್ದುಲ್ ಮಜೀದ್ ಬಕ್ರೀದ್ ಹಬ್ಬದ ಶುಭಾಶಯಗಳನ್ನು ತಿಳಿಸಿದರು.

ವಿ.ಪೇಟೆಯಲ್ಲಿ ಗಾಂಜಾ ಮಾರುತ್ತಿದ್ದ ಮೂವರ ಬಂಧನ








ವಿರಾಜಪೇಟೆ, ಜೂ.29– ವಿರಾಜ ಪೇಟೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ವಿರಾಜಪೇಟೆ ನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ.

ವಿರಾಜಪೇಟೆ ಸುಂಕದಕಟ್ಟೆ ನಿವಾಸಿಗಳಾದ ಎಸ್.ಹರೀಶ್(48), ಎಸ್.ಸಂತೋಷ್(39) ಮತ್ತು ಎಸ್.ಪಿ.ದೀಕ್ಷಿತ್(23) ಬಂಧಿತ ಆರೋಪಿ ಗಳು. ಬಂಧಿತ ಆರೋಪಿಗಳಿಂದ 127 ಗ್ರಾಂ. ಗಾಂಜಾವನ್ನು ವಶಕ್ಕೆ ಪಡೆಯ ಲಾಗಿದೆ. ನಗರದ ಖಾಸಗಿ ಬಸ್ ನಿಲ್ದಾಣದ ಬಳಿ ಮಾದಕ ವಸ್ತು ಮಾರಾಟ ಮಾಡುತ್ತಿರುವ ಕುರಿತು ವಿರಾಜಪೇಟೆ ನಗರ ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಹಿನ್ನೆಲೆಯಲ್ಲಿ ದಾಳಿ ನಡೆಸಿ ಮೂವರು ಆರೋಪಿಗಳು ಮಾಲು ಸಹಿತ ಸೆರೆ ಹಿಡಿದಿದ್ದಾರೆ ವಿರಾಜಪೇಟೆ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಬಿ.ಎಸ್. ಶಿವರುದ್ರಪ್ಪ, ಹಾಗೂ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಜಿಲ್ಲೆಯಾದ್ಯಂತ ಸಂಭ್ರಮದ ಬಕ್ರೀದ್ ಆಚರಣೆ





- ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಕೆ
- ಹೊಸ ಬಟ್ಟೆ ತೊಟ್ಟು ಸಂಭ್ರಮಿಸಿದ ಮುಸ್ಲಿಂ ಬಾಂಧವರು

ಚಾಮರಾಜನಗರ, ಜೂ.29– ತ್ಯಾಗ, ಬಲಿದಾನದ ಪ್ರತೀಕವಾದ ಹಾಗೂ ಇಸ್ಲಾಂ ಹಬ್ಬಗಳಲ್ಲಿ ಪ್ರಮುಖವಾಗಿರುವ ಬಕ್ರೀದ್ ಹಬ್ಬವನ್ನು ಜಿಲ್ಲೆಯಾದ್ಯಂತ ಗುರುವಾರ ಮುಸ್ಲಿಂ ಬಾಂಧವರು ಸಡಗರ ಸಂಭ್ರಮದಿಂದ ಆಚರಿಸಿದರು.

ನಗರವೂ ಸೇರಿದಂತೆ ಜಿಲ್ಲೆಯ ತಾಲೂಕು ಕೇಂದ್ರಗಳು ಹಾಗೂ ಇತರೆ ಹೋಬಳಿ, ಗ್ರಾಮಗಳ ಈದ್ಗಾ ಮೈದಾನಕ್ಕೆ ತೆರಳಿದ ಸಮುದಾಯವರು ಆಯಾ ಕೇಂದ್ರಗಳಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ನಗರದ ಸೋಮವಾರಪೇಟೆ ಹಾಗೂ ಪಾಲಿಟೆಕ್ನಿಕ್ ಕಾಲೇಜು ಹಿಂಭಾಗದಲ್ಲಿರುವ ಈದ್ಗಾ ಮೈದಾನಗಳಲ್ಲೂ ಗುರುವಾರ ಬೆಳಗ್ಗೆ ಭಾರಿ ಸಂಖ್ಯೆಯಲ್ಲಿ ನೆರೆದಿದ್ದ ಇಸ್ಲಾಂ ಧರ್ಮದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಬಳಿಕ, ಒಬ್ಬರಿಗೊಬ್ಬರು ಆಲಂಗಿಸಿಕೊಂಡು, ಕೈ-ಕೈ ಕುಲುಕಿಕೊಳ್ಳುವ ಮೂಲಕ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು.

ಹಬ್ಬದ ಹಿನ್ನೆಲೆಯಲ್ಲಿ ಹೊಸಬಟ್ಟೆ ತೊಟ್ಟು ಕಂಗೊಳ್ಳಿಸುತ್ತಿದ್ದ ಚಿಣ್ಣರು ಪರಸ್ಪರ ಅಪ್ಪಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಹಿರಿಯರು– ಕಿರಿಯರು ಎಂಬ ಭೇದವಿಲ್ಲದೇ ಮಸೀದಿ ಹಾಗೂ ಈದ್ಗಾ ಮೈದಾನಕ್ಕೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ಪ್ರಾರ್ಥನೆ ಮುಗಿಸಿ ಬಂದ ನಂತರ ಹಿರಿಯರನ್ನು ಸ್ಮರಿಸಿದರು. ನಗರವಲ್ಲದೇ ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರು ತಾಲೂಕು ಹಾಗೂ ಹನೂರು ಭಾಗದಲ್ಲಿ ಬಕ್ರೀದ್ ಹಬ್ಬವನ್ನು ಅರ್ಥಪೂರ್ಣ ರೀತಿಯಲ್ಲಿ ನೆರವೇರಿಸಲಾಯಿತು.

ಇದೇ ವೇಳೆ ಅಲ್ಲಾಹನು ಎಲ್ಲರಿಗೂ ಒಳ್ಳೆಯದು ಮಾಡಲಿ, ಮಕ್ಕಳಿಗೆ ಹೆಚ್ಚಿನ ಆಯಸ್ಸು ಕೊಟ್ಟು ಕಾಪಾಡಲಿ ಎಂದು ಧಾರ್ಮಿಕ ಗುರುಗಳು ಶುಭ ಸಂದೇಶ ತಿಳಿಸಿ ಬಕ್ರೀದ್ ಹಬ್ಬದ ಆಚರಣೆಯ ಮಹತ್ವವನ್ನು ತಿಳಿಸಿಕೊಟ್ಟರು.

ಕೊಳ್ಳೇಗಾಲದಲ್ಲೂ ಶ್ರದ್ಧಾಭಕ್ತಿಯ ಬಕ್ರೀದ್

ಕೊಳ್ಳೇಗಾಲ, ಜೂ.29– ಕೊಳ್ಳೇಗಾಲದಲ್ಲಿ ಮುಸ್ಲಿಂ ಬಾಂಧವರು ಶ್ರದ್ಧಾಭಕ್ತಿಯಿಂದ ಬಕ್ರೀದ್ ಹಬ್ಬವನ್ನು ಆಚರಿಸಿದರು. ಸಾಮೂಹಿಕ ಪ್ರಾರ್ಥನೆ ಸಲ್ಲಿಸಿ ಬಂಧುಗಳು ಹಾಗೂ ಹಿತೈಷಿಗಳನ್ನು ಆಹ್ವಾನಿಸುವ ಮೂಲಕ ಸಡಗರ, ಸಂಭ್ರಮದಿಂದ ಹಬ್ಬ ಆಚರಿಸಿದರು. ಈ ವೇಳೆ ಶಾಸಕ ಎ.ಆರ್.ಕೃಷ್ಣಮೂರ್ತಿ ಪಾಲ್ಗೊಂಡು ಮುಸ್ಲಿಂ ಬಾಂಧವರಿಗೆ ಸಿಹಿ ತಿನಿಸುವ ಮೂಲಕ ಹಬ್ಬದ ಸಂಭ್ರಮದಲ್ಲಿ ತಾವು ಪಾಲ್ಗೊಂಡರು. ತಮ್ಮ ಗೆಲುವಿನಲ್ಲಿ ಮುಸ್ಲಿಂ ಸಮಾಜದ ಪಾತ್ರವೂ ಇದ್ದು, ಈ ವೇಳೆ ಸಮಾಜದ ಎಲ್ಲರಿಗೂ ಕೃತಜ್ಞತೆ ಅರ್ಪಿಸುವೆ ಎಂದಲ್ಲದೆ ಇದೇ ವೇಳೆ ಬಕ್ರೀದ್ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.



ಜಿಲ್ಲೆಯಲ್ಲಿ ಸಂಭ್ರಮದ ಏಕಾದಶಿ ಆಚರಣೆ



ಚಾಮರಾಜನಗರ, ಜೂ.29– ಆಷಾಢ ಮಾಸದ ಪ್ರಥಮ ಏಕಾದಶಿಯನ್ನು ಜಿಲ್ಲಾದ್ಯಂತ ಗುರುವಾರ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು.

ಏಕಾದಶಿ ಅಂಗವಾಗಿ ನಗರದ ಶ್ರೀಕಾಡು ನಾರಾಯಣಸ್ವಾಮಿ ದೇವಸ್ಥಾನದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ ನಡೆಯಿತು. ದೇವಾಲಯವನ್ನು ತಳಿರು–ತೋರಣಗಳಿಂದ ಶೃಂಗರಿಸಲಾಗಿತ್ತು. ಶ್ರೀದೇವಿ ಭೂದೇವಿ ಸಮೇತ ಕಾಡು ನಾರಾಯಣ ಸ್ವಾಮಿಯ ಉತ್ಸವ ನಡೆಯಿತು. ಜೊತೆಗೆ ವಿಷ್ಣು ಸಹಸ್ರಾಮ ಪಾರಾಯಣವಾಯಿತು. ಈ ಸಂದರ್ಭದಲ್ಲಿ ಅರ್ಚಕರಾದ ರಾಮಚಂದ್ರ, ಉತ್ಸವ ಸಮಿತಿಯ ಸದಸ್ಯರು, ವಿಪ್ರ ಮಹಿಳೆಯರು ಭಕ್ತರು ಹಾಜರಿದ್ದರು.

ಅಲ್ಲದೇ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನ, ಗಣೇಶನ ದೇವಸ್ಥಾನ, ಆಂಜನೇಯಸ್ವಾಮಿ ದೇವಸ್ಥಾನ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕೈಂಕರ್ಯ ನಡೆಯಿತು. ನಗರ ಮಾತ್ರವಲ್ಲದೇ ಜಿಲ್ಲೆಯ ಕೊಳ್ಳೇಗಾಲ, ಹನೂರು, ಮಲೆಹದೇಶ್ವರಸ್ವಾಮಿ ಬೆಟ್ಟ, ಯಳಂದೂರು, ಬಿಳಿಗಿರಿ ರಂಗನಾಥ ಸ್ವಾಮಿ ಬೆಟ್ಟ, ಗುಂಡ್ಲುಪೇಟೆ, ಹಿಮವದ್ ಗೋಪಾಲಸ್ವಾಮಿ ಬೆಟ್ಟ ಸೇರಿದಂತೆ ಹಲವೆಡೆ ಏಕಾದಶಿ ಆಚರಿಸಲಾಯಿತು.

ಹಬ್ಬದ ಅಂಗವಾಗಿ ಬೆಳಗ್ಗೆಯಿಂದಲೇ ಜನರು ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿದರು. ಮನೆಯಲ್ಲಿ ಫಲಹಾರ ಸೇರಿದಂತೆ ವಿಶೇಷ ಉಪಹಾರ ತಂಯಾರಿಸಿ ಸವಿದು, ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ರಕ್ತಚಂದನ ಮರದ ತುಂಡುಗಳನ್ನು ಸಾಗಿಸುತ್ತಿದ್ದ ಮೂವರ ಬಂಧನ



ಕೊಳ್ಳೇಗಾಲ, ಜೂ.29– ಅಕ್ರಮವಾಗಿ ರಕ್ತಚಂದನ ಮರದ ತುಂಡುಗಳನ್ನು ಸಾಗಿಸುತ್ತಿದ್ದ ಆರೋಪಿಗಳನ್ನು ಬಂಧಿಸಿ 17 ಲಕ್ಷ ರೂ. ಮೌಲ್ಯದ ರಕ್ತಚಂದನ ಮರದ ತುಂಡುಗಳನ್ನು ವಶಕ್ಕೆ ಪಡೆಯುವಲ್ಲಿ ಸಿಐಡಿ ಅರಣ್ಯ ಸಂಚಾರಿದಳದ ಪೊಲೀಸರು ಯಶಸ್ವಿಯಾಗಿದ್ದಾರೆ.

ಬೆಂಗಳೂರು ವಿಜಯನಗರ ನಿವಾಸಿ ಅರುಣ್‌ಕುಮಾರ್ ಬಿನ್ ರಾಜು (26), ಬೆಂಗಳೂರಿನ ನಾಯಂಡಹಳ್ಳಿ ವಾಸವಿ ಆನಂದ ಬಿನ್ ಮುನಿಯಪ್ಪ (46), ತುಮಕೂರಿನ ಆನಂದ ನಗರದ ತ್ರುದುಲ್ ಬಿನ್ ಟಿ ಎಸ್ ಅಬ್ದುಲ್ ರಶೀದ್ ಬಂಧಿತರು.

ಆರೋಪಿಗಳು ಹುಂಡೈ ಕಾರಿ(ಕೆಎ02, ಪಿ 8320) ನಲ್ಲಿ 284 ಕೆಜಿ ರಕ್ತಚಂದನದ ತುಂಡುಗಳನ್ನು ಸಾಗಿಸುತ್ತಿದ್ದ ಖಚಿತ ಮಾಹಿತಿ ಮೇರೆಗೆ ಸತ್ತೇಗಾಲ ಹ್ಯಾಂಡ್‌ಪೋಸ್ಟ್ ಬಳಿ ಪೊಲೀಸರು ದಾಳಿ ನಡೆಸಿ, ಆರೋಪಿಗಳನ್ನು ಬಂಧಿಸಿ ಬಂಧಿತರಿಂದ, 3 ಮೊಬೈಲ್, 14 ರಕ್ತಚಂದನ ಮರದ ತುಂಡುಗಳು, 1230 ರೂ. ನಗದು ವಶಕ್ಕೆ ಪಡೆದು ಮುಂದಿನ ಕ್ರಮಕೈಗೊಂಡಿದ್ದಾರೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ

ಜೋರು ಗಾಳಿಗೆ ನೆಲಕ್ಕುರುಳಿದ ಮರ



ಚಾಮರಾಜನಗರ, ಜೂ.29– ನಗರದಲ್ಲಿ ಗುರುವಾರ ಮಧ್ಯಾಹ್ನ ಬೀಸಿದ ಜೋರು ಗಾಳಿಗೆ ಮರಗಳು ನೆರಕ್ಕುರುಳಿದ ಘಟನೆ ನಡೆದಿದೆ.

ಗುರುವಾರ ಮಧ್ಯಾಹ್ನ 1.30ರಿಂದ 2 ಗಂಟೆಯ ಸಮಯದಲ್ಲಿ ಇದ್ದಕ್ಕಿದ್ದಂತೆ ಜೋರು ಗಾಳಿ ಬೀಸಲಾರಂಭಿಸಿತು. ಇದರಿಂದ ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗದ ಉದ್ಯನದಲ್ಲಿ ದಶಕಗಳ ಕಾಲದಿಂದ ಇದ್ದ ಮರವೊಂದು ಬಿದ್ದಿದೆ.

ಅಲ್ಲದೇ ನಗರದ 21ನೇ ವಾರ್ಡ್‌ನಲ್ಲಿ ತೆಂಗಿನ ಮರವೊಂದು ಮನೆಯ ಮೇಲೆ ಬಿದ್ದಿದೆ. ಇದೇ ವೇಳೆ ಮನೆಯ ಮುಂಭಾಗ ಹಾದು ಹೋಗಿದ್ದ ವಿದ್ಯುತ್ ವೈರ್ ಮೇಲೂ ತೆಂಗಿನ ಗರಿಗಳು ಬಿದ್ದಿದೆ. ಪರಿಣಾಮ ವಿದ್ಯುತ್ ವೈರ್ ತುಂಡಾಗಿ ಗಂಟೆಗಳ ಕಾಲ ವಿದ್ಯುತ್ ವ್ಯತ್ಯಯ ಉಂಟಾಗಿತ್ತು. ಜೋರು ಗಾಳಿಯಿಂದ ಕೆಲಕಾಲ ಗಾಬರಿಗೊಂಡ ಜನರು ಮನೆಯಿಂದ ಹೊರ ಬರಲಿಲ್ಲ. ಮನೆ ಮುಂಭಾಗ ಹಾಗೂ ರಸ್ತೆಯಲ್ಲಿದ್ದ ಪ್ಲಾಸ್ಟಿಕ್ ವಸ್ತುಗಳು ಸೇರಿದಂತೆ ಇತರೆ ವಸ್ತುಗಳು ಗಾಳಿಯ ರಭಸಕ್ಕೆ ಕೆಲ ದೂರಗಳಷ್ಟು ಹಾರಿ ಹೋದವು.

ಬಿಸಲವಾಡಿ ಪಿಎಸಿಸಿ ಬ್ಯಾಂಕ್‌ಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಚಾಮರಾಜನಗರ, ಜೂ.29– ತಾಲೂಕಿನ ಬಿಸಲವಾಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮಹದೇವಯ್ಯ, ಉಪಾಧ್ಯಕ್ಷರಾಗಿ ಎಸ್. ಸಿದ್ದಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಅಧ್ಯಕ್ಷ– ಉಪಾಧ್ಯಕ್ಷರಾಗಿದ್ದ ಸಿದ್ದನಾಯಕ ಮತ್ತು ಶಿವಸ್ವಾಮಿ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಸಹಕಾರ ಸಂಘದ ಕಚೇರಿ ಸಭಾಂಗಣದಲ್ಲಿ ಚುನಾವಣೆ ನಡೆಯಿತು. ಅಧ್ಯಕ್ಷ ಸ್ಥಾನಕ್ಕೆ ಮಹದೇವಯ್ಯ, ಉಪಾಧ್ಯಕ್ಷ ಸ್ಥಾನಕ್ಕೆ ಸಿದ್ದಶೆಟ್ಟಿ ಇವರಿಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆಯ ಅಧಿಕಾರಿ ತ್ಯಾಗರಾಜು ಅಧಿಕೃತವಾಗಿ ಅಧ್ಯಕ್ಷ– ಉಪಾಧ್ಯಕ್ಷರ ಆಯ್ಕೆಯನ್ನು ಘೋಷಣೆ ಮಾಡಿದರು.

ಗ್ರಾಮಗಳ ಅಭಿವೃದ್ದಿಗೆ ಸಹಕಾರಿ ಕ್ಷೇತ್ರ ಉತ್ತಮ : ಸಂಘದ ನೂತನ ಅಧ್ಯಕ್ಷ– ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ. ರವಿಕುಮಾರ್ ಸಹಕಾರ ಸಂಘಗಳ ಬೆಳವಣಿಗೆಯಿಂದ ರೈತರ ಪ್ರಗತಿ ಹಾಗೂ ಗ್ರಾಮದ ಅಭಿವೃದ್ಧಿ ಸಾಧ್ಯವಿದೆ. ರೈತರ ಸಂಸ್ಥೆಯಾಗಿರುವ ಸಹಕಾರ ಸಂಸ್ಥೆಗಳು ಅವರ ಅಶೋತ್ತರಗಳಿಗೆ ಸ್ಪಂದಿಸುವ ಜೊತೆಗೆ ಸರ್ಕಾರದ ಸಲವತ್ತುಗಳನ್ನು ಪ್ರಾಮಾಣಿಕವಾಗಿ ರೈತರಿಗೆ ತಲುಪಿಸುವಲ್ಲಿ ನೆರವಾಗುತ್ತಿವೆ ಎಂದರು.

ಇಂಥ ಸಂಸ್ಥೆಯ ಅಧ್ಯಕ್ಷ, ಉಪಾಧ್ಯಕ್ಷರಾಗಿರುವ ತಾವುಗಳು ಸಂಘದ ಪ್ರಗತಿಯ ಬಗ್ಗೆ ಹೆಚ್ಚಿನ ಗಮನ ವಹಿಸಬೇಕು. ಸಹಕಾರ ತತ್ವದಡಿಯಲ್ಲಿ ಪರಸ್ಪರ ಹೊಂದಾಣಿಕೆಯೊಂದಿಗೆ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ರವಿಕುಮಾರ್ ತಿಳಿಸಿದರು. ಬಳಿಕ ಸಂಘದ ನೂತನ ಅಧ್ಯಕ್ಷ ಮಹದೇವಯ್ಯ, ಉಪಾಧ್ಯಕ್ಷ ಎಸ್. ಸಿದ್ದಶೆಟ್ಟಿ ಮಾತನಾಡಿ, ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ –ಉಪಾಧ್ಯಕ್ಷರನ್ನಾಗಿ ಅವಿರೋಧವಾಗಿ ನಮ್ಮನ್ನು ಆಯ್ಕೆಮಾಡಲು ಕಾರಣಕರ್ತರಾದ ಸಂಘದ ಎಲ್ಲಾ ನಿರ್ದೇಶಕರಿಗೆ ಹಾಗೂ ಗ್ರಾಮಸ್ಥರಿಗೆ ಅಭಾರಿಯಾಗಿದ್ದೇನೆ. ಎಲ್ಲರ ಸಹಕಾರ ಪಡೆದು ಸಂಘದಿಂದ ರೈತರಿಗೆ ಹೆಚ್ಚಿನ ಸೌಲಭ್ಯವನ್ನು ಕೊಡಿಸಲು ಬದ್ದರಾಗಿರುವುದಾಗಿ ತಿಳಿಸಿದರು.

ಸಭೆಯಲ್ಲಿ ಸಂಘದ ನಿರ್ದೇಶಕರಾದ ಎಸ್. ಮಂಜುನಾಥ, ಸಿದ್ದಮಲ್ಲಪ್ಪ, ಎಲ್. ಶಿವಕುಮಾರ್, ಎಸ್. ಶಿವಕುಮಾರ್, ಎಸ್. ಸಿದ್ದೇಗೌಡ, ರಾಜಮ್ಮ, ಸಿಇಓ ಅಶೋಕ ಇದ್ದರು. ಈ ಸಂದರ್ಭದಲ್ಲಿ ಗ್ರಾ.ಪಂ.ಮಾಜಿ ಅಧ್ಯಕ್ಷ ಹಾಲಿ ಸದಸ್ಯ ಸಿ.ಮಹದೇವಪ್ಪ, ಎಸ್.ಗಿರೀಶ, ಸದಸ್ಯರಾದ ನಾಗರತ್ನಮ್ಮ ನಾರಾಯಣ ನಾಯಕ, ರಮ್ಯ ನಾಗರಾಜು, ಗೀತಾಚನ್ನ ಬಸಪ್ಪ, ಮುಖಂಡರಾದ ಕೊತ್ತಲವಾಡಿ ಸೋಮಲಿಂಗಪ್ಪ, ಬಿ. ಶಾಂತಮಲ್ಲಪ್ಪ, ಎಸ್. ಉಮೇಶ, ಶಿವರುದ್ರಪ್ಪ, ಪ್ರಭುಸ್ವಾಮಿ ಶಿವಣ್ಣ, ಎಂ.ರವಿ, ಚೆಲುವರಾಜು, ಸಿದ್ದಮಲ್ಲಶೆಟ್ಟಿ, ಗುರುಮಲ್ಲು, ಪ್ರಕಾಶ, ಮಹದೇವಯ್ಯ, ಬಸವರಾಜು, ರಮೇಶ, ಸಿಇಓ ಎಸ್.ಅಶೋಕ್, ಗುಮಾಸ್ತ ಎಂ. ಪ್ರಸನ್ನ ಕುಮಾರ್, ಆಟೆಂಡರ್ ನಾಗರಾಜು ಮೊದಲಾದವರು ಇದ್ದರು.

ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಾಳೆ ಕೆಡಿಪಿ ಸಭೆ

ಚಾಮರಾಜನಗರ, ಜೂ.29– ಪಶು ಸಂಗೋಪನೆ, ರೇಷ್ಮೆ ಸಚಿವರು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯು ಜು.1 ರಂದು ಬೆಳಗ್ಗೆ 10 ಗಂಟೆಗೆ ನಗರದ ಜಿಪಂ ಸಭಾಂಗಣದಲ್ಲಿ ನಡೆಯಲಿದೆ ಎಂದು ಜಿಪಂ ಸಿಇಓ ಎಸ್. ಪೂವಿತಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದ್ವಿಚಕ್ರ ವಾಹನಗಳಿಗೆ ಬೆಂಕಿ, ಸಂಪೂರ್ಣ ನಾಶ



ಯಳಂದೂರು, ಜೂ.29– ಪಟ್ಟಣದ ಎಲೇಕೇರಿ ಬಡಾವಣೆಯ ಮನೆಯೊಂದರ ಮುಂಭಾಗ ನಿಲ್ಲಿಸಿದ್ದ ಎರಡು ದ್ವಿಚಕ್ರ ವಾಹನಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದು, ಸಂಪೂರ್ಣವಾಗಿ ಸುಟ್ಟು ಹೋಗಿದೆ.

ಪಟ್ಟಣದ 5ನೇ ವಾರ್ಡಿನ ಎಲೇಕೇರಿ ಬಡಾವಣೆಯ ನಿವಾಸಿ ಮಹೇಶನಾಯಕ್ ಎಂಬುವರಿಗೆ ಸೇರಿದ ಎರಡು ದ್ವಿಚಕ್ರ ವಾಹನಗಳನ್ನು ಮನೆಯ ಮುಂಭಾಗ ನಿಲ್ಲಿಸಿದ್ದು, ಮಂಗಳವಾರ ಮಧ್ಯರಾತ್ರಿ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದು, ಈ ಸಂದರ್ಭದಲ್ಲಿ ವಾಹನಗಳು ಬೆಂಕಿ ಹೊತ್ತಿ ಉರಿಯುತ್ತಿದ್ದಾಗ ಅಕ್ಕಪಕ್ಕದ ನಿವಾಸಿಗಳು ತಕ್ಷಣ ಮಾಲೀಕರಿಗೆ ವಿಷಯ ತಿಳಿಸಿ, ಬೆಂಕಿ ನಂದಿಸಲು ಮುಂದಾಗಿದ್ದರು. ಮಾಲೀಕ ಮಹೇಶ್ ಬಂದು ನೋಡುವಷ್ಟರಲ್ಲಿ ಬೈಕ್‌ಗಳು ಸಂಪೂರ್ಣವಾಗಿ ಸುಟ್ಟು ಹೋಗಿವೆ. ಯಾರೋ ದುಷ್ಕರ್ಮಿಗಳು ಬೆಂಕಿ ಹಚ್ಚಿ ಹೋಗಿರಬಹುದು ಎಂದು ದೂರು ನೀಡಿದ್ದು, ಈ ಬಗ್ಗೆ ಯಳಂದೂರು ಪಟ್ಟಣ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಚಂದ್ರಹಾಸನಾಯಕ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮೈಸೂರು ಮಿತ್ರ

ದಿನದ 24 ಗಂಟೆಯೂ ತ್ವರಿತ; ನೋಂದಾಯಿತ ಅಂಚೆ ಸೇವೆ

ಮೈಸೂರು, ಜೂ.29– ಭಾರತೀಯ ಅಂಚೆ ಇಲಾಖೆಯ ಆರ್‌ಎಂಎಸ್ 'ಕ್ಯೂ' ವಿಭಾಗದ ಅಧೀನದಲ್ಲಿರುವ ಮೈಸೂರು ಸಾರ್ಟಿಂಗ್ ಕಚೇರಿಯು ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ವಿದ್ಯಾವರ್ಧಕ ಕಾನೂನು ಕಾಲೇಜಿನ ಮುಂಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಇಲ್ಲಿರುವ ಕೌಂಟರ್‌ನಲ್ಲಿ ಪ್ರಸಕ್ತ ತ್ವರಿತ ಅಂಚೆಸೇವೆ ಹಾಗೂ ನೋಂದಾಯಿತ ಅಂಚೆ ಸೇವೆಯು ಸಂಜೆ 5.30 ರಿಂದ ರಾತ್ರಿ 9.30ರವರೆಗೆ ಮಾತ್ರ ಲಭ್ಯವಿತ್ತು. ಇದೀಗ ಅಂಚೆ ಗ್ರಾಹಕರ ಅನುಕೂಲಕ್ಕಾಗಿ ದಿನದ 24 ಗಂಟೆಗಳಲ್ಲಿಯೂ ತ್ವರಿತ ಅಂಚೆ ಸೇವೆಯ ಜೊತೆಗೆ ನೋಂದಾಯಿತ ಅಂಚೆ ಸೇವೆ ಹಾಗೂ ತ್ವರಿತ ಪಾರ್ಸೆಲ್ ಸೇವೆಯನ್ನು ಆರಂಭಿಸಲಾಗಿದೆ ಹಾಗೂ ಅಂಚೆ ಚೀಟಿಗಳು ಕೂಡ ಲಭ್ಯವಿರುತ್ತದೆ. ಎಲ್ಲಾ ಸೇವೆಗಳ ಶುಲ್ಕವನ್ನು ಗ್ರಾಹಕರು ಡಿಜಿಟಲ್ ಪಾವತಿ ಅಥವಾ ಕ್ಯೂಆರ್ ಕೋಡ್ ಮುಖಾಂತರವೂ ಪಾವತಿಸಬಹುದು ಎಂದು ಆರ್‌ಎಂಎಸ್ 'ಕ್ಯೂ' ವಿಭಾಗದ ಅಧೀಕ್ಷಕರು ತಿಳಿಸಿದ್ದಾರೆ.

ಮೂರನೇ ಪುಟದಿಂದ

ಕುಡಿಯುವ ನೀರಿಗೂ ಹಾಹಾಕಾರ...

ನಗರಕ್ಕೆ 25 ದಿನಕ್ಕೆ ಮಾತ್ರ ಸಾಕಾಗಲಿದೆ. ಮಳೆ ಬಾರದೆ ಪರಿಸ್ಥಿತಿ ಹೀಗೆ ಮುಂದುವರೆದರೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಲಿದೆ. ಸದ್ಯ ಮೈಸೂರು ನಗರಕ್ಕೆ ಕುಡಿಯುವ ನೀರಿಗೆ ಕೊರತೆ ಇಲ್ಲ. ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಲ್ಲಿ ಈಗಿರುವ ನೀರಿನ ಪ್ರಮಾಣದಲ್ಲಿ ಇನ್ನು 25 ದಿನ ಕುಡಿಯುವ ನೀರಿಗೆ ಯಾವುದೇ ತೊಂದರೆ ಇಲ್ಲ. ಅಷ್ಟರಲ್ಲಿ ಮಳೆಯಾಗಿ ಎರಡು ಜಲಾಶಯ ತುಂಬುತ್ತವೆ ಎಂಬ ನಿರೀಕ್ಷೆ ಇದೆ. ಒಂದು ವೇಳೆ ಮಳೆ ಕೈಕೊಟ್ಟರೆ ಏನು ಮಾಡಬೇಕೆಂದು ಮುಂದೆ ತೀರ್ಮಾನ ಮಾಡಲಾಗುವುದು ಎಂದು ನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಈಗಿರುವ ನೀರಿನ ಪ್ರಮಾಣ ಅರಿತು ಮೈಸೂರು, ಮಂಡ್ಯ ಹಾಗೂ ಬೆಂಗಳೂರಿನ ಜನರು ಕುಡಿಯುವ ನೀರನ್ನು ವ್ಯಯ ಮಾಡದೆ ಮಿತವಾಗಿ ಬಳಸಬೇಕು. ಇಲ್ಲದಿದ್ದರೆ ಕುಡಿಯುವ ನೀರಿಗೆ ಹಾಹಾಕಾರಪಡುವ ಪರಿಸ್ಥಿತಿ ಬರುವುದಂತೂ ನಿಶ್ಚಿತ.

ನೇಮಕಕ್ಕೆ ಕ್ಷಣಗಣನೆ

ಯಡಿಯೂರಪ್ಪ ಬಣಕ್ಕೆ ಟಾಂಗ್ ಕೊಡುತ್ತಿದ್ದಾರೆ. ಒಂದು ಹೆಜ್ಜೆ ಮುಂದೆ ಹೋಗಿರುವ ಮಾಜಿ ಸಚಿವ ರೇಣುಕಾ ಚಾರ್ಯ ಈ ಚುನಾವಣೆಯ ಸೋಲಿಗೆ ವರಿಷ್ಠರೇ ಕಾರಣ ಎಂದು ಆರೋಪಿಸಿದ್ದಾರೆ. ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳ ಗಿಳಿಸದಿದ್ದರೆ, ರಾಜ್ಯ ದಲ್ಲಿ ಬಿಜೆಪಿ ಅಧಿಕಾರ ಕಳೆದುಕೊಳ್ಳುತ್ತಿ ರಲಿಲ್ಲ ಎಂದು ದೂರಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಏನು ಇಲ್ಲದ ಸಂದರ್ಭದಲ್ಲಿ ಯಡಿ ಯೂರಪ್ಪ ಪಕ್ಷವನ್ನು ಕಟ್ಟಿ ಬೆಳೆಸಿ, ಮೂರು ಬಾರಿ ಅಧಿಕಾರಕ್ಕೆ ತಂದರು. ಅವರನ್ನು ಹಠಾತ್ ಆಗಿ ಇಳಿಸಿದ್ದೆ ಈ ಸೋಲಿಗೆ ಕಾರಣ ಎಂದಿದ್ದಾರೆ. ಅಲ್ಲದೆ ಮತ ಕೇಳಲಿಕ್ಕೆ ಯಡಿಯೂರಪ್ಪ ಬೇಕು, ಅಧಿಕಾರ ಮಾತ್ರ ಬೇರೆ ಯವರಿಗೇ ಎಂದು ಪ್ರಶ್ನಿಸಿದ್ದಾರೆ. ಜಗದೀಶ್ ಶೆಟ್ಟರ್, ಈಶ್ವರಪ್ಪ ಅವರನ್ನು ಮುಗಿಸಿ, ಬೊಮ್ಮಾಯಿ ಹೆಸರಿಗಷ್ಟೇ ಮುಖ್ಯ ಮಂತ್ರಿಯಾಗಿದ್ದರು. ಬೊಮ್ಮಾಯಿಗೆ ಸ್ಯೂಟ್ ಹೊಡೆಯುತ್ತಿದ್ದ ಅಣ್ಣಾಮಲೈಯನ್ನು ಅವರ ಮೇಲೆ ತಂದು ಕೂರಿಸಿದ್ದೀರಿ. ನಮ್ಮ ನಾಯಕರ ವರ್ತನೆ ಈ ಸೋಲಿಗೆ ಕಾರಣ ಎಂದರು. ಇಷ್ಟೆಲ್ಲಾ ಆದರೂ ನಳಿನ್‌ಕುಮಾರ್ ಕಟೀಲ್ ರಾಜ್ಯಾಧ್ಯಕ್ಷರಾಗಿ ಮುಂದುವರೆಯುತ್ತಿರುವುದು ನಾಚಿಕೆಗೇಡಿನ ಕ್ರಮ ಎಂದರು.

ಅವ್ಯವಸ್ಥೆ ಬಗ್ಗೆ ಹೈಕೋರ್ಟ್‌ಗೆ ಪಿಐಎಲ್

ದರು ನೀಡಬೇಕು ಎಂದು ಸಲಹೆ ನೀಡಿದರು. ಬೆಂಗಳೂರಿನಿಂದ ಮೈಸೂರಿಗೆ ಕೇವಲ ಶೇ.30ರಷ್ಟು ಜನ ಮಾತ್ರ ಈ ರಸ್ತೆಯಲ್ಲಿ ಸಂಚರಿಸುತ್ತಿದ್ದಾರೆ. ಕೇವಲ ಈ ಪ್ರಮಾಣದ ಜನರಿಗಾಗಿ 8 ರಿಂದ 9 ಸಾವಿರ ಕೋಟಿ ಖರ್ಚು ಮಾಡುವ ಅಗತ್ಯವೇನಿತ್ತು ಎಂದು ಪ್ರಶ್ನಿಸಿದ ಅವರು, ಈ ರಸ್ತೆ ನಿರ್ಮಾಣದಿಂದ ಮಂಡ್ಯ ಹಾಗೂ ರಾಮನಗರ ಜಿಲ್ಲೆಯ ಬೀದಿ ಬದಿ ವ್ಯಾಪಾರಸ್ಥರ ಹೊಟ್ಟೆ ಮೇಲೆ ಕೇಂದ್ರ ಸರ್ಕಾರ ಹೊಡೆದಿದೆ ಎಂದು ದೂರಿದರು.

ಗಣಂಗೂರು ಬಳಿಯ ಟೋಲ್‌ನಲ್ಲಿ ಜುಲೈ ಒಂದರಿಂದ ನಿಗದಿಪಡಿಸಿರುವ ಶುಲ್ಕ ಮಂಡ್ಯ ಜಿಲ್ಲೆಯ ಜನರ ಪಾಲಿಗೆ ಆಘಾತವನ್ನುಂಟು ಮಾಡಿದ್ದು, ಹೆದ್ದಾರಿ ಸಂಚಾರದಿಂದ ಸ್ಥಳೀಯ ಜನರನ್ನು ವಂಚಿಸಲು ನಡೆಸಿರುವ ಹುನ್ನಾರ ಇದಾಗಿದೆ.

ಮೈಸೂರು– ಬೆಂಗಳೂರು ರಸ್ತೆ ನಿರ್ಮಿಸಿದವರು ಮೈಸೂರು ರಾಜವಂಶಸ್ಥರು. ಅದನ್ನು ನಾಲ್ಕು ಪಥಗಳನ್ನಾಗಿ ಮೇಲ್ದರ್ಜೆಗೇರಿಸಿದ ಈ ಭಾಗದ ಜನನಾಯಕ ಎಸ್.ಎಂ.ಕೃಷ್ಣ ರವರು ಮೈಸೂರು–ಬೆಂಗಳೂರು ನಗರಗಳ ಮಧ್ಯದಲ್ಲಿನ ಜನರ ಆರ್ಥಿಕ ಬೆಳವಣಿಗೆಗೆ ಕಾರಣರಾಗಿ, ಲಕ್ಷಾಂತರ ಜನರ ಪಾಲಿಗೆ ಉದ್ಯೋಗ ಮತ್ತು ಜೀವನ ರೂಪಿಸಿಕೊಳ್ಳಲು ಕಾರಣರಾದರು. ಆದರೆ ಪ್ರಸ್ತುತ ಇದನ್ನು ಎಕ್ಸ್‌ಪ್ರೆಸ್ ವೇ ಆಗಿ ನಿರ್ಮಿಸಿದ ಕೇಂದ್ರ ಸರ್ಕಾರ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಜನರ ಪಾಲಿಗೆ ಮರಣ ಶಾಸನ ಬರೆದು ಸಾರ್ವಜನಿಕರ ಹಣ ಲೂಟಿಗೆ ಮುಂದಾಗಿದೆ ಎಂದು ದೂರಿದರು. ಸ್ಥಳೀಯ ಗ್ರಾಮಗಳು, ಪಟ್ಟಣಗಳ ನಾಗರಿಕರು, ಕೈಗಾರಿಕೋದ್ಯಮಿಗಳು, ಪ್ರವಾಸಿ ತಾಣಗಳು, ರೈತರ ಉತ್ಪನ್ನಗಳ ಸಾಗಾಣಿಕೆ ಸೇರಿದಂತೆ ಸ್ಥಳೀಯವಾಗಿ ಸಂಚಾರಕ್ಕೆ ಯಾವುದೇ ಪರ್ಯಾಯ ಮಾರ್ಗ ನಿರ್ಮಿಸದೇ, ಆಗಮನ ಮತ್ತು ನಿರ್ಗಮನ ಸ್ಥಳಗಳನ್ನು ವೈಜ್ಞಾನಿಕವಾಗಿ ರೂಪಿಸದೆ, ಗ್ರಾಮಗಳ ಸಂಪರ್ಕಕ್ಕೆ ಸರಿಯಾದ ಅಂಡರ್‌ಪಾಸ್, ಸ್ಕೈವಾಕರ್‌ಗಳನ್ನು ನಿರ್ಮಿಸದೆ, ಸರ್ವೀಸ್ ರಸ್ತೆಗಳ ನಿರ್ಮಾಣ ಪೂರ್ಣಗೊಳ್ಳುವ ಮುನ್ನವೇ ಟೋಲ್ ಸಂಗ್ರಹಕ್ಕೆ ಇಳಿದಿರುವುದು ನಾಚಿಕೆಗೇಡಿನ ಕ್ರಮ ಎಂದು ಕಿಡಿಕಾರಿದರು.

ಮಂಡ್ಯದಿಂದ ಕೇವಲ 40 ಕಿಮೀ. ದೂರದ ಮೈಸೂರಿಗೆ 155 ರೂ.ಗಳ ಟೋಲ್ ಶುಲ್ಕ ನಿಗದಿಪಡಿಸಿರುವುದರ ಹಿಂದೆ ಈ ಭಾಗದ ಜನರನ್ನು ರಸ್ತೆಯ ಬಳಕೆಯಿಂದ ಹಿಂದೆ ಸರಿಯುವಂತೆ ಮಾಡುವ ಹುನ್ನಾರವಾಗಿದೆ ಎಂದರು.

ಸಂಸದ ಪ್ರತಾಪ್ ಸಿಂಹ, ತಮ್ಮ ವ್ಯಾಪ್ತಿ ಮೀರಿ ಹೆದ್ದಾರಿ ಪ್ರಾಧಿಕಾರವನ್ನು ದಿಕ್ಕುತಪ್ಪಿಸಿ ತಾವೊಬ್ಬ ಮಹಾನ್ ಅಭಿವೃದ್ಧಿ ಹರಿಕಾರ ಎಂಬಂತೆ ಬಿಂಬಿಸಿಕೊಂಡು, ಮಂಡ್ಯ ಮತ್ತು ರಾಮನಗರ ಜಿಲ್ಲೆಯ ಜನರನ್ನು ಹೆದ್ದಾರಿ ಸಂಚಾರದಿಂದ ವಿಮುಖರನ್ನಾಗಿಸಿ, ಜನರ ಬದುಕಿಗೆ ಆರ್ಥಿಕ ವಹಿವಾಟುಗಳಿಗೆ ಹೊಡೆತ ನೀಡಿ ಅವರನ್ನು ಬೀದಿಗೆ ತಳ್ಳಿದ ಕೀರ್ತಿಗೆ ಭಾಜನರಾಗಿದ್ದಾರೆ ಎಂದು ಕಿಡಿಕಾರಿದರು. ಈ ಕೂಡಲೇ ಹೆದ್ದಾರಿ ಪ್ರಾಧಿಕಾರ ಅವೈಜ್ಞಾನಿಕ ದರಗಳನ್ನು ವಾಪಸ್ ಪಡೆಯಬೇಕು. ಸ್ಥಳೀಯ ವಾಸಿಗಳಿಗೆ, ಜಮೀನು ಕಳೆದುಕೊಂಡವರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಬೇಕು. ಮುಖ್ಯರಸ್ತೆ ಮತ್ತು ಸರ್ವೀಸ್ ರಸ್ತೆಗಳ ನಿರ್ಮಾಣ ಕಾರ್ಯ ಮುಗಿಯುವವರೆಗೆ ಯಾವುದೇ ಟೋಲ್ ಸಂಗ್ರಹಿಸಕೂಡದು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ರಾಮಲಿಂಗಯ್ಯ, ಪ್ರಶಾಂತ್, ನರಸಪ್ಪ ಹೆಗಡೆ, ಲಿಂಗರಾಜು ಇತರರಿದ್ದರು.

ತಾನೇ ಬಲಿಯಾದ ಮಾಜಿ ರೌಡಿಶೀಟರ್

ಸಮಾಧಾನಪಡಿಸಿ ಗುಂಡು ಪಾರ್ಟಿ ಮುಂದುವರೆಸಿದ್ದಾರೆ. ಸ್ವಲ್ಪ ಸಮಯದ ನಂತರ ಮತ್ತೆ ಗಲಾಟೆಯಾಗಿದ್ದು, ಸುಧೀರ್ ತಂದ ಮಚ್ಚಿನಿಂದಲೇ ಆತನ ತಲೆ ಕತ್ತರಿಸಿ ಬರ್ಬರವಾಗಿ ಹತ್ಯೆಗೈದಿದ್ದಾರೆ. ಘಟನಾ ಸ್ಥಳಕ್ಕೆ ಮಂಡ್ಯ ಜಿಲ್ಲಾ ಎಸ್ಪಿ ಎನ್.ಯತೀಶ್ ಹಾಗೂ ಕೆಆರ್‌ಎಸ್ ಠಾಣೆ ಪೊಲೀಸರು ಭೇಟಿ ನೀಡಿದ್ದು, ಕುಮಾರ್, ಡಿಸ್ಕೊ ವಿನಿ ಮತ್ತು ಚೆಲುವರಾಜು ಅವರುಗಳನ್ನು ಬಂಧಿಸಿದ್ದಾರೆ. ಪೂರ್ಣಚಂದ್ರ ತಲೆಮರೆಸಿಕೊಂಡಿದ್ದು, ಆತನಿಗಾಗಿ ಹುಡುಕಾಟ ನಡೆದಿದೆ. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೆ ಎರಡು ಅಪಘಾತ: ಮೂವರ ಸಾವು

ಕೇರಳ ಮೂಲದ ಎಂ.ವಿ.ಜರೀನ್ ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ತಂದೆ ವರ್ಗೀಸ್ ಅವರೊಂದಿಗೆ ಬೆಂಗಳೂರಿನಿಂದ ಬೊಲೆರೋದಲ್ಲಿ ಕೇರಳಾಗೆ ತೆರಳುತ್ತಿದ್ದ ವೇಳೆ ಅತೀ ವೇಗವಾಗಿ ಬಂದ ಟ್ರಕ್ ಇವರ ವಾಹನಕ್ಕೆ ಹಿಂಬದಿಯಿಂದ ಡಿಕ್ಕಿ ಹೊಡೆದಿದೆ. ಈ ರಭಸಕ್ಕೆ ಕಾರು ಡಿವೈಡರ್‌ಗೆ ಅಪ್ಪಳಿಸಿದ್ದು, ಜರೀನ್ ಅವರು ಸಾವನ್ನಪ್ಪಿದರೆ, ಅವರ ತಂದೆ ವರ್ಗೀಸ್ ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಕ್ರೀದ್ ಸಾಮೂಹಿಕ ಪ್ರಾರ್ಥನೆ

'ಸ್ಟಾರ್ ಆಫ್ ಮೈಸೂರ್' ಅಂಕಣಕಾರರಾದ ಖ್ಯಾತ ವೈದ್ಯ ಡಾ. ಜಾವಿದ್ ಕೆ.ನಯೀಮ್, ಮೈಸೂರು ಜಿಲ್ಲಾ ವಕ್ಫ್ ಅಧಿಕಾರಿ ಮುಸ್ತಾಕ್ ಅಹಮದ್, ಮಂಡಿ ಠಾಣೆ ಇನ್ಸ್‌ಪೆಕ್ಟರ್ ನಾಗೇಶ್, ಮಾಜಿ ಕಾರ್ಪೊರೇಟರ್ ಸುಹೇಲ್ ಬೇಗ್, ಪತ್ರಕರ್ತ ಅಪ್ಸರ್ ಪಾಷ, ಕಾಂಗ್ರೆಸ್ ಮುಖಂಡ ಶೌಕತ್ ಅಲಿ ಖಾನ್ ಅವರು ಇಂದಿನ ಬಕ್ರೀದ್ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. ಈದ್ಗಾ ಮೈದಾನದ ಸುತ್ತಲಿನ ಸಯ್ಯಾಜಿರಾವ್ ರಸ್ತೆ, ಹೈವೇ ಸರ್ಕಲ್, ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಲಿಮಿಟೆಡ್ ರಸ್ತೆಗಳಲ್ಲಿ ಮುಸ್ಲಿಂ ಬಾಂಧವರ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿತ್ತು. ಎನ್.ಆರ್. ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್ ನೇತೃತ್ವದಲ್ಲಿ ಸುಗಮ ಸಂಚಾರ ವ್ಯವಸ್ಥೆ ಮಾಡಲಾಗಿತ್ತು. ಮಂಡಿ, ಎನ್.ಆರ್., ಲಷ್ಕರ್ ಠಾಣೆಗಳ ಸಿಬ್ಬಂದಿಗಳನ್ನು ಈದ್ಗಾ ಮೈದಾನಕ್ಕೆ ನಿಯೋಜಿಸಿ, ಬಕ್ರೀದ್ ಸಾಮೂಹಿಕ ಪ್ರಾರ್ಥನೆಗೆ ವ್ಯಾಪಕ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಬುಧವಾರವೇ ಈದ್ಗಾ ಮೈದಾನವನ್ನು ಸ್ವಚ್ಛಗೊಳಿಸಿ ಸಾಮೂಹಿಕ ಪ್ರಾರ್ಥನೆಗೆ ಅನುವು ಮಾಡಿಕೊಟ್ಟಿದ್ದರು. ಅದೇ ರೀತಿ ಅಶೋಕ ರಸ್ತೆ ಎನ್.ಆರ್.ಮೊಹಲ್ಲಾ, ಉದಯಗಿರಿ, ಬೀಡಿ ಕಾರ್ಮಿಕರ ಕಾಲೋನಿ, ರಾಜೀವ್‌ನಗರ, ಭಾರತ್ ನಗರ ಸೇರಿದಂತೆ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಎಲ್ಲಾ ಮಸೀದಿಗಳಲ್ಲೂ ಬಕ್ರೀದ್ ಅಂಗವಾಗಿ ಇಂದು ಬೆಳಗ್ಗೆ ಮುಸ್ಲಿಂ ಬಾಂಧವರು ಒಟ್ಟಿಗೆ ಸೇರಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಶಾಂತಿ–ಸೌಹಾರ್ದತೆ ಸಂದೇಶ ಸಾರಿದರು.

ಮಹಾ ಪುರುಷರನ್ನು ಜಾತಿಗೆ ಸೀಮಿತ ಮಾಡುವುದು ಸರಿಯಲ್ಲ : ಜಿಟಿಡಿ

ಮೈಸೂರು, ಜೂ.29(ಜಿಎ)–ಬಸವಣ್ಣ, ಅಂಬೇಡ್ಕರ್, ವಾಲ್ಮೀಕಿ ಮತ್ತು ಕನಕದಾಸರು ಸೇರಿದಂತೆ ಮಹಾನ್ ವ್ಯಕ್ತಿಗಳನ್ನು ಜಾತಿಗೆ ಸೀಮಿತಗೊಳಿಸುತ್ತಿದ್ದೇವೆ ಎಂದು ಶಾಸಕ ಜಿ.ಟಿ.ದೇವೇಗೌಡ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ರಾಜೇಂದ್ರ ಸಭಾಂಗಣ ದಲ್ಲಿ ಮೈಸೂರು ಶರಣ ಮಂಡಳಿ ವತಿ ಯಿಂದ ಆಯೋಜಿಸಿದ್ದ ಬಸವ ಜಯಂತಿ ಹಾಗೂ ಬಸವ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ ಮತ್ತು ಶಾಸಕ ಜಿ.ಟಿ.ದೇವೇಗೌಡರು ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಐವರಿಗೆ ಬಸವರತ್ನ ಪ್ರಶಸ್ತಿ ಪ್ರದಾನ ಮಾಡಿದರು.

ಈ ವೇಳೆ ಮಾತನಾಡಿದ ಅವರು, ಪ್ರತಿ ವರ್ಷ ಬಸವಣ್ಣನ ಜಯಂತಿ ಆಚರಣೆ ಮಾಡುತ್ತೇವೆ. ಅವರು ತಮ್ಮ ವಚನ ಸಾಹಿತ್ಯ, ಅನುಭವ ಮಂಟಪದ ಆಧಾರದ ಮೇಲೆ ನಾಡಿಗೆ ಸಮಾನತೆ ಸಾರುವ ಮೂಲಕ ಸಮಾಜದ ಕಟ್ಟಕಡೆಯ ಮಾನವನನ್ನು ಗುರುತಿಸಿದವರು. ಹಾಗೇ ಮಹಿಳೆಯರಿಗೆ ದೇವಾಲಯ ಪ್ರವೇಶಕ್ಕೆ ನಿರ್ಬಂಧ ಇದ್ದಾಗ ಅಕ್ಕಮಹಾದೇವಿ

ಐವರಿಗೆ ಬಸವ ರತ್ನ ಪ್ರಶಸ್ತಿ



ಯವರನ್ನು ಅನುಭವ ಮಂಟಪದಲ್ಲಿ ಕೂರಿಸುವ ಮೂಲಕ ಸಾಕಷ್ಟು ಕ್ರಾಂತಿ ಗಳನ್ನು ಮಾಡಿ ಸಾಮಾಜಿಕ ನ್ಯಾಯದ ಹರಿಕಾರರಾಗಿದ್ದರು ಎಂದು ತಿಳಿಸಿದರು.

ಇಂದಿನ ಜಾತಿ ವ್ಯವಸ್ಥೆಯಿಂದ ವೀರಶೈವರು ಬಸವಣ್ಣನನ್ನು, ಅಂಬೇಡ್ಕರ್ ಅವರನ್ನು ದಲಿತರು, ವಾಲ್ಮೀಕಿ ಅವರನ್ನು ನಾಯಕರು ಮತ್ತು ಕುರುಬರು ಕನಕದಾಸರನ್ನು ಸ್ಮರಿಸುವಂತಹ ವಾತಾವರಣ ಸೃಷ್ಟಿಯಾಗುತ್ತಿರುವುದು ವಿಷಾದಕರ ಸಂಗತಿ. ಸರ್ಕಾರಗಳು ಈ ಮಹಾನ್ ಚೇತನರ ಜಯಂತಿ ಆಚರಿಸುತ್ತಿವೆ. ಆದರೆ, ಇವರು ಸಮಗ್ರ ಸಮಾಜದ ಸಂಪತ್ತು. ಇವರ ಕೊಡುಗೆ ಇಡೀ ಮಾನವ ಕುಲ ಕೋಟಿಗೆ ಅನ್ವಯಿಸುವಂತದ್ದು ಎಂದರು.

ಬಸವೇಶ್ವರರು ಸಮಾಜದಲ್ಲಿ ಸಮಾನತೆಗಾಗಿ ಎಲ್ಲಾ ಕಾಯಕ ವರ್ಗದವರಿಗೆ ಲಿಂಗಧಾರಣೆ ಮಾಡಿದ್ದರು. ದೇಶದಲ್ಲಿ ಜಾತಿ ಬೇರೂರಿದೆ, ಅದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವುದು ಕಷ್ಟಕರ ವಿಚಾರ. ಆದರೆ, ಬಸವಣ್ಣ ಅವರ ಆದರ್ಶವನ್ನು ಪಾಲಿಸಿದರೆ, ಅದು ಸುಲಭ ಸಾಧ್ಯ ಎಂದು ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಪ್ರಗತಿಪರ ರೈತ ಕೆ.ಹೆಚ್.ನಂಜಪ್ಪ ಪತ್ರಕರ್ತ ಕೆ.ಶಿವಕುಮಾರ್, ಸಮಾಜ ಸೇವಕ ಎ.ಪಿ.ನಾಗೇಶ್, ಸಂಘಟಕ ಲಯನ್ ವೆಂಕಟೇಶ್ ಮತ್ತು ಉದ್ಯಮಿ ವೈ.ವೀರಭದ್ರ ಅವರುಗಳಿಗೆ ಬಸವ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಕ್ಷೇತ್ರದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ಶರಣ ಮಂಡಳಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

ತಮಿಳು ಹೇರಿಕೆ ವಿರೋಧಿಸಿ

ಇತ್ತೀಚೆಗೆ ತಾಳವಾಡಿಯಲ್ಲಿರುವ ಕನ್ನಡ ಶಾಲೆಗಳಲ್ಲಿ ಮೊದಲ ಭಾಷೆಯಾಗಿ ಮಕ್ಕಳಿಗೆ ಕನ್ನಡದ ಬದಲು ತಮಿಳು ಭಾಷೆಯನ್ನು ಕಲಿಸಲಾಗುತ್ತಿದೆ. ಈ ಹಿಂದೆ ಜಯಲಲಿತಾ ಇದ್ದಾಗ ಇದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಬಗ್ಗೆ ಸರ್ಕಾರ ವಿಧಾನ ಸಭೆ ಮತ್ತು ವಿಧಾನಪರಿಷತ್‌ನಲ್ಲಿ ಚರ್ಚಿಸಿ, ಹೇಗೆ ಹಿಂದಿ ಹೇರಿಕೆಯನ್ನು ತಡೆಯಬೇಕು. ಹಾಗೇ ತಮಿಳು ಹೇರಿಕೆಯನ್ನು ವಿರೋಧಿಸಬೇಕು. ಜೊತೆಗೆ ತಮಿಳುನಾಡಿನಲ್ಲಿ ಕನ್ನಡ ಶಾಲೆಗಳ ಅಭಿವೃದ್ಧಿ ಕೆಲಸ ಮತ್ತು ಕಳೆದ 15 ವರ್ಷಗಳಿಂದ ಶಿಕ್ಷಕರ ನೇಮಕಾತಿ ಯಾಗಿಲ್ಲ. ಈ ಎಲ್ಲಾ ವಿಷಯಗಳ ಬಗ್ಗೆ ಸರ್ಕಾರ ಗಮನಹರಿಸಬೇಕಿದೆ.

-ಕೆ.ಶಿವಕುಮಾರ್, ಪತ್ರಕರ್ತ

ಅರಮನೆ ರಕ್ಷಣಾ ಗೋಡೆ ದುರಸ್ತಿ ಪೂರ್ಣ



ಮೈಸೂರು, ಜೂ.29(ಜಿಎ)– ವಿಶ್ವ ವಿಖ್ಯಾತ ಅಂಬಾವಿಲಾಸ ಅರಮನೆಯ ಹೊರ ಆವರಣದ ಕೋಟೆಯ ಗೋಡೆಯ ದುರಸ್ತಿ ಕಾಮಗಾರಿ ಪೂರ್ಣಗೊಂಡಿದೆ.

ಕಳೆದ ವರ್ಷ ನಗರದಲ್ಲಿ ನಿರಂತರ ಮಳೆ ಸುರಿದ ಹಿನ್ನೆಲೆಯಲ್ಲಿ ಕೋಟೆ ಮಾರಮ್ಮ ದೇವಸ್ಥಾನದ ಎಡಭಾಗ ಮತ್ತು ಅರಮನೆಯ ವರಾಹ ದ್ವಾರದ ಬಳಿ 20 ಮೀಟರ್ ಅಗಲ ಮತ್ತು 7 ಅಡಿ ಎತ್ತರದ ಕೋಟೆ ಗೋಡೆಯು ಅಕ್ಟೋಬರ್ 18 ರಂದು ಮುಂಜಾನೆ ಕುಸಿದಿತ್ತು. ತಜ್ಞರ ಮಾರ್ಗದರ್ಶನದಲ್ಲಿ ದುರಸ್ತಿ ಕಾಮಗಾರಿ ಅಕ್ಟೋಬರ್ 25ರಂದು ಆರಂಭಗೊಂಡಿತ್ತು. ಈಗ ಕಾಮಗಾರಿ ಪೂರ್ಣಗೊಂಡಿದೆ.

ಪಾರಂಪರಿಕ ನೋಟವನ್ನು ಗಮನದಲ್ಲಿಟ್ಟುಕೊಂಡು ದುರಸ್ತಿಗೆ ಅರಮನೆ ಮಂಡಳಿ ಇ–ಟೆಂಡರ್ ಕರೆದಿತ್ತು. ಶಿಥಿಲಗೊಂಡ ಮೂರು ಸ್ಥಳದಲ್ಲಿ 50 ಮೀಟರ್ ಗೋಡೆ ದುರಸ್ತಿಗೆ ಗುರುತಿಸಲಾಗಿತ್ತು. ಅದಕ್ಕಾಗಿ 39.60 ಲಕ್ಷ ರೂ.ಗಳ ಟೆಂಡರ್ ಕರೆಯಲಾಗಿತ್ತು. ಕೋಟೆ ಗೋಡೆಯನ್ನು ಮರು ನಿರ್ಮಾಣ ಮಾಡಲಾಗಿದ್ದು, ಹಿಂದೆ ಕೋಟೆ ಗೋಡೆಯನ್ನು ನಿರ್ಮಿಸಲು ಬಳಸಲಾಗಿದ್ದ ಕಲ್ಲುಗಳು ಮತ್ತು ಸುರ್ಕಿ ಗಾರೆ (ಒಂದು ರೀತಿಯ ಪ್ಲಾಸ್ಟರಿಂಗ್) ವಸ್ತುಗಳನ್ನು ಬಳಸಲಾಗಿದ್ದು, ಮರುನಿರ್ಮಾಣ ಕಾರ್ಯ ಪೂರ್ಣಗೊಂಡಿದೆ.

ಅರಮನೆ ರಕ್ಷಣೆಗಾಗಿ ಸುತ್ತಲೂ ಸುಮಾರು 25 ಅಡಿ ಎತ್ತರದ ಕೋಟೆ (ತಡೆಗೋಡೆ) ಯನ್ನು ಕಲ್ಲು, ಸುಣ್ಣದ ಗಾರೆ, ಮಣ್ಣಿನಲ್ಲಿ ನಿರ್ಮಿಸಲಾಗಿದೆ. ಇದು ಅರಮನೆಯನ್ನು ರಕ್ಷಣೆ ಮಾಡಿಕೊಂಡು ಬರುತ್ತಿದೆ. ಆದರೆ, ಇತ್ತೀಚೆಗೆ ಸರಿಯಾದ ನಿರ್ವಹಣೆ ಇಲ್ಲದಿರುವುದರಿಂದ ಕೆಲವು ಕಡೆ ಶಿಥಿಲಗೊಂಡಿದೆ. ಕಳೆದ ವರ್ಷ ವಸ್ತುಪ್ರದರ್ಶನ ಆವರಣದ ಕಡೆಗೆ ಹೊರ ಚಾಚಿಕೊಂಡಿದ್ದ ಕೋಟೆ (ತಡೆಗೋಡೆ) ಮಳೆಯಿಂದ ಕುಸಿದಿತ್ತು. ಕೆಲವು ವರ್ಷಗಳ ಹಿಂದೆಯೂ ತಡೆಗೋಡೆ ಕುಸಿದಿದ್ದು, ಪಾರಂಪರಿಕ ಇಲಾಖೆಯ ನೆರವಿನಿಂದ ಮರು ನಿರ್ಮಾಣ ಮಾಡಲಾಗಿತ್ತು.

ಪಾರಂಪರಿಕ ಅರಮನೆಯ ಹೊರ ಆವರಣದ ಬೃಹತ್ ಕಾಂಪೌಂಡ್ ಕುಸಿದು ಬಿದ್ದಿದ್ದು, ಜನರಲ್ಲಿ ಬೇಸರ ಮೂಡಿಸಿತ್ತು. ಅರಮನೆಯ ಕೋಟೆ ಸರಿಯಾದ ನಿರ್ವಹಣೆ ಇಲ್ಲದೆ ಹಲವು ಕಡೆ ಬಿರುಕು ಕಾಣಿಸಿಕೊಂಡಿದೆ. ಇದೇ ರೀತಿ ಮುಂದಿನ ದಿನಗಳಲ್ಲಿ ನಗರದ ಎಲ್ಲ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಲಿಲ್ಲವಾದರೆ, ಮೈಸೂರು ಪಾರಂಪರಿಕ ಸೌಂದರ್ಯ ವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂದು ಮೈಸೂರಿಗರು ಅಭಿಪ್ರಾಯಪಟ್ಟಿದ್ದಾರೆ.

ನಾಳೆ ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಡಾ.ಯತೀಂದ್ರರಿಗೆ ಅಭಿನಂದನಾ ಸಮಾರಂಭ



ಮೈಸೂರು,ಜೂ.29(ಪಿಎಂ)– ಕನ್ನಡ ಸ್ನೇಹ ಬಳಗದ ವತಿಯಿಂದ ಜು.1ರಂದು ಚಾಮರಾಜ ಕ್ಷೇತ್ರದ ನೂತನ ಶಾಸಕ ಕೆಹರೀಶ್ ಗೌಡ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರರೂ ಆದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಅಭಿನಂದನಾ ಸಮಾರಂಭ ಏರ್ಪಡಿಸಲಾಗಿದೆ ಎಂದು ಕರ್ನಾಟಕ ಕಾವಲುಪಡೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಎಂ. ಮೋಹನ್ ಕುಮಾರ್‌ಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಇದೇ ಪತ್ರಕರ್ತರ ಭವನದಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ನೂತನ ಶಾಸಕ ಕೆ.ಹರೀಶ್‌ಗೌಡ ಹಾಗೂ ಇತ್ತೀಚೆಗೆ ಜನ್ಮದಿನ ಆಚರಿಸಿಕೊಂಡ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅವರನ್ನು ಪ್ರಗತಿಪರ ಚಿಂತಕ ಡಾ.ಕೆಕಾಳಚನ್ನೇಗೌಡ ಅಭಿನಂದಿಸಲಿದ್ದಾರೆ ಎಂದರು.

ಡಾ.ಯತೀಂದ್ರರಿಗೆ 1 ಕೆಜಿ ಬೆಳ್ಳಿ ಖಡ್ಗ ಹಾಗೂ ಹರೀಶ್‌ಗೌಡರಿಗೆ 1 ಕೆಜಿ ಬೆಳ್ಳಿ ಕಿರೀಟ ಧಾರಣೆ ಮಾಡುವ ಮೂಲಕ ಸನ್ಮಾನಿಸಲಾಗುವುದು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಸಾಹಿತಿ ಸತೀಶ್ ಜವರೇಗೌಡ, ಜೆಪಿಎನ್ ಪ್ರಾಪರ್ಟೀಸ್‌ನ ಮಾಲೀಕ ಪಿ.ನಾಗೇಂದ್ರ, ಶ್ರೀ ವೈಷ್ಣವಿ ಸ್ವೀಟ್ಸ್‌ನ ಮಾಲೀಕ ಜಿ.ನವೀನ್ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು. ಕನ್ನಡ ಸ್ನೇಹ ಬಳಗದ ಅಧ್ಯಕ್ಷ ಪಿ.ಬಂದಿಗೌಡ, ಪದಾಧಿಕಾರಿಗಳಾದ ಸಿ.ರಮೇಶ್, ಬಾಲಚಂದ್ರ, ಎಂ.ಮಾದಪ್ಪ, ಕೃಷ್ಣಪ್ಪ, ರಾಜ್‌ಕುಮಾರ್ ಗೋಷ್ಠಿಯಲ್ಲಿದ್ದರು.

ಮಳೆಗಾಲದ ಹಿನ್ನೆಲೆ; ರಾಜಕಾಲುವೆ, ದೊಡ್ಡ ಮೋರಿ, ಚರಂಡಿ ಸ್ವಚ್ಛತೆಯಲ್ಲಿ ತೊಡಗಿದ ಪಾಲಿಕೆ

ತ್ವರಿತವಾಗಿ ಕಾಮಗಾರಿ ಪೂರ್ಣಗೊಳ್ಳಬೇಕಿದೆ; ಮಳೆ ಬಂದರೆ ನೆನೆಗುದಿಗೆ ಬೀಳಬಹುದು



ತ್ಯಾಗರಾಜ ರಸ್ತೆಯಲ್ಲಿ ಹಾದು ಹೋಗಿರುವ ರಾಜಕಾಲುವೆಯಲ್ಲಿ ಗಿಡಗಂಟಿ ಬೆಳೆದು ನಿಂತು ನೀರು ಸರಾಗವಾಗಿ ಸಾಗಲು ತೊಡಕಿರುವುದನ್ನು ಕಾಣಬಹುದು.

● ಎಂ.ಬಿ.ಪವನ್‌ಮೂರ್ತಿ

ಮೈಸೂರು, ಜೂ.29– ಮುಂಗಾರು ಮಳೆ ಆರಂಭದ ಹಿನ್ನೆಲೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಮುನ್ನೆಚ್ಚರಿಕೆ ಕ್ರಮವಾಗಿ ರಾಜಕಾಲುವೆ, ದೊಡ್ಡ ಮೋರಿಗಳು ಹಾಗೂ ಬಡಾವಣೆ ಪ್ರದೇಶದ ಚಿಕ್ಕ ಚರಂಡಿಗಳ ಸ್ವಚ್ಛತಾ ಕಾರ್ಯ ಚುರುಕುಗೊಳಿಸಿದೆ. ಈಗಾಗಲೇ ಸಾಕಷ್ಟು ಕೆಲಸ ಕಾರ್ಯಗಳ ಮೂಲಕ ಮಳೆ ನೀರು ಸರಾಗವಾಗಿ ಸಾಗಲು ಸಜ್ಜುಗೊಳಿಸಿದ್ದರೂ ರಾಜಕಾಲುವೆಯಲ್ಲಿ ಅಲ್ಲಲ್ಲಿ ಗಿಡಗಂಟಿಗಳು ಬೆಳೆದು ನಿಂತಿದ್ದು, ಇವುಗಳ ತೆರವಿಗೂ ಸಮರೋಪಾದಿಯಲ್ಲಿ ಕಾರ್ಯನಿರ್ವಹಿಸಬೇಕಿದೆ.

ಜೋರು ಮಳೆಗೆ ಮೈಸೂರು ಹೃದಯ ಭಾಗವೇ ಉಕ್ಕಿ ಹರಿಯುವ ಸನ್ನಿವೇಶ ಪ್ರತಿ ಮಳೆಗಾಲದಲ್ಲೂ ಸರ್ವೇ ಸಾಮಾನ್ಯ. ಮುಂಗಾರು ಮಾರುತವು ವಾರಾಂತ್ಯಕ್ಕೆ ದೇಶವಿಡೀ ಆವರಿಸುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಹೀಗಾಗಿ ತ್ವರಿತಗತಿಯಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದೆ. ಮುಂಗಾರು ಪೂರ್ವ ಮಳೆಯೂ ಮೈಸೂರು ನಗರದಲ್ಲಿ ಒಂದಿಷ್ಟು ಹಾನಿ ಮಾಡಿ ಎಚ್ಚರಿಕೆ ನೀಡಿದ್ದು, ಹಾಗಾಗಿ ಮುಂಗಾರು ಮಳೆಗೆ ಸರ್ವ ರೀತಿಯಲ್ಲೂ ಪಾಲಿಕೆ ಸಜ್ಜಾಗಬೇಕಿದೆ. ತಗ್ಗು ಪ್ರದೇಶಕ್ಕೆ ನೀರು ನುಗ್ಗಿ ಅನಾಹುತ ಉಂಟಾಗುವುದನ್ನು ತಪ್ಪಿಸುವ ಜೊತೆಗೆ ಜನ ಸಂಚಾರದ ಪ್ರದೇಶದಲ್ಲಿ ರಾಜಕಾಲುವೆಯ ತಡೆಗೋಡೆ ಸಮರ್ಪಕವಾಗಿ ಇರುವುದನ್ನು ಖಾತ್ರಿಪಡಿಸಿಕೊಳ್ಳ ಬೇಕಿದೆ. ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿ ರಾಜಕಾಲುವೆಯ ತಡೆಗೋಡೆಗಾಗಿ ಅಳವಡಿಸಿರುವ ಕಬ್ಬಿಣದ ಸಲಾಕೆಗಳು ತುಕ್ಕು ಹಿಡಿದು ಮುರಿದಿದ್ದು, ದುರಸ್ತಿಗೊಳಿಸುವ ಮೂಲಕ ಯಾವುದೇ ಅನಾಹುತ ಸಂಭವಿಸದಂತೆ ಕ್ರಮ ವಹಿಸಬೇಕಿದೆ. ಇದೇ ರೀತಿಯಲ್ಲಿ ದುರಸ್ತಿ ಅಗತ್ಯವಿರುವುದನ್ನು ಗುರುತಿಸಿ, ನಾಗರಿಕರ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂಬುದು ಪ್ರಜ್ಞಾವಂತ ನಾಗರಿಕರ ಆಗ್ರಹವಾಗಿದೆ.

ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಹಾದು ಹೋಗಿರುವ ರಾಜಕಾಲುವೆಗೆ ನಾರಾಯಣಶಾಸ್ತ್ರಿ ರಸ್ತೆ, ಚಾಮರಾಜ ಜೋಡಿ ರಸ್ತೆ ಜಂಕ್ಷನ್‌ನಲ್ಲಿ ಕಬ್ಬಿಣದ ಜಾಲರಿ ಅಳವಡಿಸಿ ನಾಗರಿಕರ ಸುರಕ್ಷತೆಗೆ ಸೂಕ್ತ ಕ್ರಮ ವಹಿಸಲಾಗಿದೆ. ಇದೇ ಮಾದರಿಯಲ್ಲಿ ಜನ ದಟ್ಟಣೆ ಹೊಂದಿರುವ ಸ್ಥಳಗಳಲ್ಲಿ ರಾಜಕಾಲುವೆಗೆ ಕಬ್ಬಿಣದ ಜಾಲರಿಗಳನ್ನು ಅಳವಡಿಸುವುದು ಅವಶ್ಯಕವಾಗಿದೆ.

ಚರಂಡಿ ಸ್ವಚ್ಛತೆ: ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ 65 ವಾರ್ಡ್‌ಗಳಲ್ಲಿ ಚರಂಡಿಗಳ ಸಚ್ಛತೆಗೆ ಪ್ರತ್ಯೇಕ ಅನುದಾನ ಕಲ್ಪಿಸಿದ್ದು, ಕಳೆದೆರಡು ತಿಂಗಳಿನಿಂದ ಜನವಸತಿ ಪ್ರದೇಶದ ಚರಂಡಿಗಳಲ್ಲಿ ಹೂಳೆತ್ತುವುದೂ ಸೇರಿದಂತೆ ಸ್ವಚ್ಛತೆ ಕಾರ್ಯ ಭರದಿಂದ ಸಾಗಿದೆ. ಅಲ್ಲದೆ, ಕಳೆದ 7 ತಿಂಗಳಿಂದಲೂ ಎಲ್ಲಾ ವಾರ್ಡ್‌ಗಳಲ್ಲಿ ರಾಜಕಾಲುವೆ ಹೂಳು ತೆರವು ನಡೆಸಿ ಮಳೆ ನೀರು ಸರಾಗವಾಗಿ ಹರಿದು ಸಾಗಲು ಸಜ್ಜುಗೊಳಿಸಲಾಗುತ್ತಿದೆ. ಆಯಾಯ ವಲಯಗಳ ಅಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ರಾಜಕಾಲುವೆ, ದೊಡ್ಡ ಮೋರಿಗಳು ಹಾಗೂ ಬಡಾವಣೆ ಪ್ರದೇಶದ ಚಿಕ್ಕ ಚರಂಡಿಗಳ ಸ್ವಚ್ಛತಾ ಚಟುವಟಿಕೆಗಳು ಸಾಗುತ್ತಿವೆ.

'ಶ್ರೀರಾಂಪುರದಲ್ಲಿ ಹಾದು ಹೋಗಿರುವ ದೊಡ್ಡ ಮೋರಿಯಿಂದ ಮಳೆ ನೀರು ಉಕ್ಕಿ ಹರಿದು ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ನುಗ್ಗುವುದನ್ನು ತಪ್ಪಿಸಲು ಈಗಾಗಲೇ ಕ್ರಮ ವಹಿಸಲಾಗಿದೆ. ಸಂಪೂರ್ಣವಾಗಿ ಹೂಳು ತೆಗೆದು ನೀರು ಸರಾಗವಾಗಿ ಸಾಗಲು ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಐಶ್ವರ್ಯನಗರದಲ್ಲಿ ರಾಜಕಾಲುವೆ ಸ್ವಚ್ಛಗೊಳಿಸಲಾಗಿದೆ. ಇದೀಗ ಜೆಪಿ ನಗರದಲ್ಲಿ ರಾಜಕಾಲುವೆ ಸ್ವಚ್ಛತಾ

ಅಗತ್ಯವಿದ್ದರೆ ಹೆಚ್ಚುವರಿ ಅನುದಾನ

ಮಳೆಗಾಲದ ಹಿನ್ನೆಲೆಯಲ್ಲಿ ಚರಂಡಿಗಳ ಸ್ವಚ್ಛತೆಗೆ ಪ್ರತಿ ವಾರ್ಡಿಗೆ ಲಕ್ಷ ರೂ. ಅನುದಾನ ನೀಡಿದ್ದು, ಪಾಲಿಕೆ ವಲಯ ಕಚೇರಿ ಅಭಿವೃದ್ಧಿ ಅಧಿಕಾರಿಗಳ ನೇತೃತ್ವದಲ್ಲಿ ಹೂಳು, ಗಿಡಗಂಟಿ ತೆರವು ಕಾರ್ಯ ನಡೆಯುತ್ತಿದೆ. ಅಗತ್ಯವಿದ್ದಲ್ಲಿ ಹೆಚ್ಚುವರಿ ಅನುದಾನ ಕಲ್ಪಿಸಲಾಗುವುದು. ರಾಜಕಾಲುವೆ, ದೊಡ್ಡ ಮೋರಿ ಸ್ವಚ್ಛತಾ ಕಾರ್ಯವೂ ನಡೆಯುತ್ತಿದೆ. **–ಶಿವಕುಮಾರ್, ಮೇಯರ್, ಮೈಸೂರು ನಗರ ಪಾಲಿಕೆ.**



ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿ ನಾಗರಿಕರ ಸುರಕ್ಷತೆ ದೃಷ್ಟಿಯಿಂದ ರಾಜಕಾಲುವೆಗೆ ತಡೆಗೋಡೆ ಮಾದರಿಯಲ್ಲಿ ಅಳವಡಿಸಿರುವ ಕಬ್ಬಿಣದ ಪೈಪ್‌ಗಳು ಮುರಿದಿರುವುದನ್ನು ಕಾಣಬಹುದು.



ನಾಚನಹಳ್ಳಿಪಾಳ್ಯದಲ್ಲಿ ಮನೆಗಳ ಬಳಿಯ ಚರಂಡಿಯಲ್ಲಿ ಹೂಳು ತೆರವುಗೊಳಿಸುತ್ತಿರುವುದು.



ವಲಯ ಕಚೇರಿ 3ರ ವ್ಯಾಪ್ತಿಯ ಕುವೆಂಪುನಗರದಲ್ಲಿ ರಾಜಕಾಲುವೆ ಸ್ವಚ್ಛಗೊಳಿಸುತ್ತಿರುವುದನ್ನು ಕಾಣಬಹುದು.

ಕಾರ್ಯ ನಡೆಯುತ್ತಿದೆ' ಎಂದು ವಲಯ ಕಚೇರಿ 2ರ ಅಧಿಕಾರಿಗಳು ಮಾಹಿತಿ ನೀಡಿದರು.

ಬೋಗಾದಿ ರಸ್ತೆಯಲ್ಲಿ (ರಿಂಗ್ ರಸ್ತೆ ಜಂಕ್ಷನ್ ಬಳಿ) ಹೋದು ಹೋಗಿರುವ ರಾಜಕಾಲುವೆಯು ಎಡೆಬಿಡದೇ ಸುರಿದ ಮಳೆಗೆ ಉಕ್ಕಿ ಹರಿದು ಅವಾಂತರ ಸೃಷ್ಟಿಸಿರುವ ನಿದರ್ಶನಗಳಿವೆ. ಹೀಗಾಗಿ ಮಳೆಗಾಲ ಆರಂಭಕ್ಕೂ ಮುನ್ನವೇ ಇಲ್ಲಿನ ರಾಜಕಾಲುವೆ ಹೂಳು ತೆರವುಗೊಳಿಸಿ ನೀರು ಸರಾಗವಾಗಿ ಸಾಗಲು ಅನುವು ಮಾಡಲಾಗಿದೆ.

'ಬೋಗಾದಿ ಬಳಿ ರಾಜಕಾಲುವೆಯ ಹೂಳು ತೆಗೆಯಲಾಗಿದೆ. ಕುವೆಂಪುನಗರದಲ್ಲಿ ಅಪೋಲೋ ಆಸ್ಪತ್ರೆಯಿಂದ ಇಸ್ಕಾನ್ ದೇವಸ್ಥಾನ ಮಾರ್ಗವಾಗಿ ಐಶ್ವರ್ಯ ಬಡಾವಣೆವರೆಗಿನ ರಾಜಕಾಲುವೆಯನ್ನು ಸಂಪೂರ್ಣ ಸ್ವಚ್ಛಗೊಳಿಸಲಾಗಿದೆ. ಅಲ್ಲದೆ, ರಾಮಕೃಷ್ಣನಗರ ಕೆ ಬ್ಲಾಕ್, ದಟ್ಟಗಳ್ಳಿ, ಆನಂದನಗರದಲ್ಲಿ ರಾಜಕಾಲುವೆಯ ಹೂಳು ತೆಗೆಯಲಾಗಿದೆ. ಕುವೆಂಪುನಗರ, ವಿಜಯನಗರ 3ನೇ ಹಂತ, ದಟ್ಟಗಳ್ಳಿಯಲ್ಲಿ ರಾಜಕಾಲುವೆ ಸ್ವಚ್ಛತೆ ಬಹುತೇಕ ಪೂರ್ಣಗೊಂಡಿದೆ. 13.5 ಕಿ.ಮೀ. ರಾಜಕಾಲುವೆ ವಿಸ್ತೀರ್ಣವು ಈ ವಲಯ ವ್ಯಾಪ್ತಿಯಲ್ಲಿದೆ. ಚಿಕ್ಕ ಚರಂಡಿ ಸ್ವಚ್ಛತೆಯೂ ನಡೆಯುತ್ತಿದೆ' ಎನ್ನುತ್ತಾರೆ ವಲಯ ಆಯುಕ್ತ ಸತ್ಯಮೂರ್ತಿ.

'ವಲಯ ಕಚೇರಿ 4ರ ವ್ಯಾಪ್ತಿಯಲ್ಲಿ ಎರಡು ತಿಂಗಳ ಹಿಂದೆಯೇ ಕುದುರೆ ಮಾಳದಿಂದ ಕುಕ್ಕರಹಳ್ಳಿಕೆರೆ ರಸ್ತೆವರೆಗೆ ರಾಜಕಾಲುವೆ ಸ್ವಚ್ಛ ಮಾಡಲಾಗಿದೆ. ಪ್ರವಾಹ ಉಂಟಾಗುವ ಯಾವುದೇ ಸಮಸ್ಯೆ ಇಲ್ಲಿಲ್ಲ. ಕುದುರೆಮಾಳದ ಬಳಿ ರಾಜಕಾಲುವೆಗೆ ಅಲ್ಪ ಪ್ರಮಾಣದಲ್ಲಿ ಕಾಂಕ್ರೀಟ್ ಕಾಮಗಾರಿ ಮಾಡಬೇಕಿದೆ. ಪಡುವಾರಹಳ್ಳಿ ಬಳಿ ರಾಜಕಾಲುವೆ ತುಂಬಿ ಹರಿಯುವ ಪರಿಸ್ಥಿತಿ ತಪ್ಪಿಸಲು ಈಗಾಗಲೇ ಅಗಲೀಕರಣ ಕಾಮಗಾರಿ ಪೂರ್ಣಗೊಳಿಸಲಾಗಿದೆ' ಎಂದು ಇಲ್ಲಿನ ಅಧಿಕಾರಿಗಳು ಮಾಹಿತಿ ನೀಡಿದರು.

ವಲಯ ಕಚೇರಿ 6ರ ವ್ಯಾಪ್ತಿಯಲ್ಲಿ ಕಬೀರ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ, ಶೇಷಾದ್ರಿ ಅಯ್ಯರ್ ರಸ್ತೆ, ದೇವರಾಜ ಮಾರುಕಟ್ಟೆ, ಶಾಂತಲಾ ಚಿತ್ರಮಂದಿರ ಸಮೀಪ ಚರಂಡಿಯು ಮಳೆ ಬಂದಾಗ ನೀರು ತುಂಬಿ ಹರಿಯುವ ಮೂಲಕ ಸಂಚಾರಕ್ಕೆ ತೊಡಕಾಗುವ ಸನ್ನಿವೇಶ ಇತ್ತು. ಇದೀಗ ಇಲ್ಲೆಲ್ಲ ಹೂಳು ತೆರವುಗೊಳಿಸಿ ನೀರು ಸರಾಗವಾಗಿ ಹೋಗಲು ಕ್ರಮ ವಹಿಸಲಾಗಿದೆ ಎಂದು ಸದರಿ ವಲಯ ಕಚೇರಿ ಅಧಿಕಾರಿಗಳು ತಿಳಿಸಿದರು.

ವಾರ್ಡ್‌ಗಳಿಗೆ ತಲಾ ಲಕ್ಷ ರೂ. ಅನುದಾನ

ರಾಜಕಾಲುವೆ ಸ್ವಚ್ಛತಾ ಕಾರ್ಯ ಕಳೆದ 7 ತಿಂಗಳ ಹಿಂದೆಯೇ ಆರಂಭವಾಗಿದ್ದು, ಬಹುತೇಕ ಪೂರ್ಣಗೊಂಡಿದೆ. ಸಣ್ಣ ಚರಂಡಿಗಳಲ್ಲಿ ಹೂಳು ತೆಗೆದು ಸ್ವಚ್ಛಗೊಳಿಸಲು ಕಳೆದ ಎರಡು ತಿಂಗಳ ಹಿಂದೆ ಎಲ್ಲಾ 65 ವಾರ್ಡ್‌ಗಳಿಗೆ ತಲಾ ಲಕ್ಷ ರೂ. ಅನುದಾನ ಬಿಡುಗಡೆ ಮಾಡಲಾಗಿತ್ತು. ಈ ಚರಂಡಿಗಳ ಸ್ವಚ್ಛತೆಯೂ ಭಾಗಶಃ ನಡೆದಿದೆ. **–ಜಿ.ಲಕ್ಷ್ಮೀಕಾಂತರೆಡ್ಡಿ, ಆಯುಕ್ತರು, ಮೈಸೂರು ನಗರಪಾಲಿಕೆ.**



ಮಾಂಕ್ ದಿ ಯಂಗ್
ಯುವ ಸನ್ಯಾಸಿಯ ಟೀಸರ್

ಕನ್ನಡ ಚಿತ್ರರಂಗವೀಗ ಸಾಕಷ್ಟು ಹೊಸ ಪ್ರಯೋಗಗಳಿಗೆ ಸಾಕ್ಷಿಯಾಗುತ್ತಿದೆ. "ಮಾಂಕ್ ದಿ ಯಂಗ್" ಎನ್ನುವ ಚಿತ್ರ ಆ ಲಿಸ್ಟ್‌ಗೆ ಮತ್ತೊಂದು ಸೇರ್ಪಡೆ. ಹೊಸ ಥರದ ಕಥೆಯೊಂದಿಗೆ ಕನ್ನಡ ಸೇರಿದಂತೆ ಆರು ಭಾಷೆಗಳಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಮಾಸ್ಚಿತ್ ಸೂರ್ಯ ಅವರ ನಿರ್ದೇಶನವಿರುವ ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು. ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಭಾ.ಮ. ಹರೀಶ್, ನಟ ಪ್ರಥಮ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ನಿರ್ದೇಶಕ ಮಾಸ್ಚಿತ್ ಸೂರ್ಯ ಮಾತನಾಡಿ, ಇದು ವಿಂಟೇಜ್ ಫ್ಯಾಮಿಲಿ ಥ್ರಿಲ್ಲರ್ ಕಥಾಹಂದರ ಹೊಂದಿರುವ, ಬ್ರಿಟಿಷರ ಕಾಲದಲ್ಲಿ ನಡೆಯುವ ಕಥೆ ಹೊಂದಿದ ಚಿತ್ರ. ಈಗಾಗಲೇ ಚಿತ್ರದ ಚಿತ್ರೀಕರಣ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕಾರ್ಯ ಅಂತಿಮ ಹಂತದಲ್ಲಿದೆ. ಮೂರು ತಿಂಗಳಲ್ಲಿ ಚಿತ್ರ ತೆರೆಗೆ ಬರಲಿದೆ. ಪ್ರೇಕ್ಷಕ ಕೊಟ್ಟ ದುಡ್ಡಿಗೆ ಮೋಸವಾಗದಂತಹ ಚಿತ್ರ ಮಾಡಿದ್ದೇವೆ ಎಂದರು.

5 ಜನ ನಿರ್ಮಾಪಕರಲ್ಲೊಬ್ಬರಾದ ಕರ್ನಲ್ ರಾಜೇಂದ್ರನ್ ಮಾತನಾಡಿ, ಮಾಸ್ಚಿತ್ ಸೂರ್ಯ ಅವರು ನನ್ನನ್ನು ಚಿತ್ರದಲ್ಲಿ ಅಭಿನಯಿಸಲು ಕಥೆ ಹೇಳುವುದಕ್ಕೆ ಕರೆದಿದ್ದರು. ಕಥೆ ಚೆನ್ನಾಗಿತ್ತು. ನಟನೆಗೆ ಹೋದ ನಾನು ನಿರ್ಮಾಪಕನಾದೆ. ನನ್ನೊಂದಿಗೆ ನನ್ನ ಸ್ನೇಹಿತರು ನಿರ್ಮಾಣದಲ್ಲಿ ಜೊತೆಯಾದರು. ಇದು ಫ್ಯಾಂಟಸಿ ಮೂವೀ, ಒಂದು ಇಮ್ಯಾಜಿನೇಶನ್ ಕಥೆ. ನಾಯಕ 100 ವರ್ಷ ಹಿಂದೆ ಹೋಗ್ತಾನೆ, 100 ವರ್ಷ ಮುಂದೆ ಬರ್ತಾನೆ. ಸೆಪ್ಟೆಂಬರ್‌ನಲ್ಲಿ ಚಿತ್ರ ರಿಲೀಸ್ ಮಾಡುತ್ತಿದ್ದು, ಕನ್ನಡದಲ್ಲಿ ಒಂದೊಳ್ಳೆ ಸಿನಿಮಾ ಆಗಲಿದೆ. ನಾನೂ ಸೇರಿ ಐದು ಜನ ನಿರ್ಮಾಪಕರು ಈ ಚಿತ್ರದಲ್ಲಿ ಅಭಿನಯಿಸಿದ್ದೇವೆ ಎಂದು ಹೇಳಿದರು. ನಿರ್ಮಾಪಕರಾದ ವಿನಯ್ ಬಾಬು ರೆಡ್ಡಿ, ಗೋಪಿಚಂದ್, ಲಾಲ್‌ಚಂದ್ ಸಹ ಚಿತ್ರದ ಕುರಿತು ಮಾತನಾಡಿದರು.

ನಾವು ಸೀಮಿತವಾದ ಜೀವನ ನಡೆಸುತ್ತಿರುತ್ತೇವೆ. ಆದರೆ ಅದರಾಚೆ ಬಂದು ನೋಡಿದಾಗ ಬೇರೊಂದು ಜೀವನ ಇದೆ. ಹಾಗೇ ನಮ್ಮ ಚಿತ್ರ ಕೂಡ. ಮಾಮೂಲಿ ಜಾನರ್‌ಗಿಂತ ಸ್ವಲ್ಪ ವಿಭಿನ್ನವಾದ ಚಿತ್ರ ಎನ್ನಬಹುದು. ನಾನು ಹಾಗೂ ಮಾಸ್ಚಿತ್ ಸೂರ್ಯ ಮೊದಲು ಸಣ್ಣದಾಗಿ ಅಂತ ಚಿತ್ರ ಆರಂಭಿಸಿದೆವು. ನಂತರ ನಾಲ್ಕು ಜನ ನಿರ್ಮಾಪಕರು ಜೊತೆಯಾದರು. ನಾನು ಕೂಡ ಈ ಚಿತ್ರದ ನಿರ್ಮಾಪಕರಲ್ಲಿ ಒಬ್ಬ. ಹಾಗೆ ನಾಯಕ ಕೂಡ. ಜನ ನಮ್ಮ ಚಿತ್ರವನ್ನು ಮೆಚ್ಚಿಕೊಳ್ಳುವ ಭರವಸೆಯಿದೆ ಎಂದು ನಾಯಕ ಹಾಗೂ ನಿರ್ಮಾಪಕರೂ ಆದ ಸರೋವರ್ ತಿಳಿಸಿದರು.

ನಾಯಕಿ ಸೌಂದರ್ಯಗೌಡ ಮಾತನಾಡಿ, ನಾಯಕನ ಪತ್ನಿಯಾಗಿ ಕಾಣಿಸಿಕೊಂಡಿದ್ದೇನೆ, ಕಥೆ ತುಂಬಾ ಯೂನಿಕ್ ಆಗಿದೆ. ಮಂಗಳೂರು, ಉಡುಪಿಯಲ್ಲಿ ಚಿತ್ರೀಕರಿಸಿದ್ದೇವೆ ಎಂದರು. ಸಂಕಲನಕಾರ ಧನುಷ್ ಎಲ್.ಬೇಂದ್ರೆ, ಹಿನ್ನೆಲೆ ಸಂಗೀತ ನೀಡಿರುವ ಸ್ವಾಮಿನಾಥನ್ ಚಿತ್ರದ ಕುರಿತಂತೆ ಮಾತನಾಡಿದರು.



ಕೋಜ್ ಐ ಲವ್ ಯು
ಮಹೇಶ್‌ಬಾಬು ವಿನೂತನ ಪ್ರಯೋಗ

ತಂತ್ರಜ್ಞಾನ ಮುಂದುವರೆದಂತೆ ಅದು ಅನೇಕ ಹೊಸ ಪ್ರಯೋಗಗಳಿಗೆ ದಾರಿ ಮಾಡಿಕೊಡುತ್ತಿದೆ. ಅಂತಹ ವಿನೂತನ ಪ್ರಯತ್ನಕ್ಕೆ 'ಕೋಜ್ ಐ ಲವ್ ಯು' ಆಲ್ಬಂ ಹಾಡಿನ ಮೂಲಕ ನಾಂದಿ ಹಾಡಿದ್ದಾರೆ ಡಾ. ಎಸ್.ಮಹೇಶ್ ಬಾಬು. ಇತ್ತೀಚೆಗೆ ಈ ಹಾಡಿನ ಪ್ರದರ್ಶನ ಹಾಗೂ ಪತ್ರಿಕಾ ಗೋಷ್ಠಿ ನಡೆಯಿತು.

ಡಾ.ಎಸ್.ಮಹೇಶ್ ಬಾಬು ಮಾತನಾಡುತ್ತಾ, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ತಂತ್ರಜ್ಞಾನ ಬಳಸಿಕೊಂಡು ಹೊಸ ಪ್ರಯೋಗ ಮಾಡಬೇಕೆಂದೆನಿಸಿತು. ಆಗ ಹೊಳೆದದ್ದೇ ಈ ಆಲ್ಬಂ ಐಡಿಯಾ. ಇದರ ವಿಶೇಷತೆ ಏನೆಂದರೆ ಈ ಹಾಡನ್ನು ಯಾವ ಗಾಯಕ–ಗಾಯಕಿಯೂ ಹಾಡಿಲ್ಲ. ಸಾಹಿತ್ಯವನ್ನು ಸಾಫ್ಟ್‌ವೇರ್‌ಗೆ ಅಳವಡಿಸಿ ಗಂಡು ಮತ್ತು ಹೆಣ್ಣಿನ ಧ್ವನಿಯನ್ನು ಸೃಷ್ಟಿಸಿದ್ದೇನೆ. ನನಗೆ ತಿಳಿದ ಹಾಗೆ ವಿಶ್ವದಲ್ಲೇ ಇದು ಮೊದಲ ಪ್ರಯೋಗ ಎನ್ನಬಹುದು. ನನಗೆ ಈ ಕುರಿತು ರಿಸರ್ಚ್ ಮಾಡಲು ಆರು ತಿಂಗಳು ಹಿಡಿಯಿತು. ನಾನೇ ಹಾಡು ಬರೆದು, ಸಂಗೀತ ಮಾಡಿ, ನಿರ್ಮಾಣ ಹಾಗೂ ನಿರ್ದೇಶನ ಕೂಡ ಮಾಡಿದ್ದೇನೆ. ಇಂಗ್ಲಿಷ್ ಭಾಷೆಯಲ್ಲಿ ಈ ಹಾಡು ಮೂಡಿ ಬಂದಿದೆ. ಇಂಗ್ಲಿಷ್‌ನಲ್ಲಿ ಮಾಡಲು ಕಾರಣವೇನೆಂದರೆ, ಈ ಹೊಸ ತಂತ್ರಜ್ಞಾನ ವಿಶ್ವವ್ಯಾಪಿಯಾಗಬೇಕೆಂದು. ಈ ಹಾಡಿನಲ್ಲಿ ಇರಾನ್ ಕಲಾವಿದೆ ಐರಾ ಫರಿದ್, ರೇವಂತ್ ರಾಮಕುಮಾರ್, ಯೋಗೇಶ್ ಮಲ್ಲಿಕಾರ್ಜುನ ಹಾಗೂ ಲೀನಾಕುಮಾರನ್ ಅಭಿನಯಿಸಿದ್ದಾರೆ.

ಈ ತಂತ್ರಜ್ಞಾನವನ್ನು ಯಾವ ಭಾಷೆಯಲ್ಲಿ ಬೇಕಾದರೂ ಬಳಸಿಕೊಳ್ಳಬಹುದು. ಮುಂದೆ ಕನ್ನಡ ರಾಜ್ಯೋತ್ಸವದ ಸಮಯಕ್ಕೆ ಇದೇ ತಂತ್ರಜ್ಞಾನದಿಂದ ಕನ್ನಡ ಹಾಡೊಂದನ್ನು ಮಾಡುತ್ತೇನೆ. ಆಲ್ಬಂ ಹಾಡು ಮಾಡುವುದಕ್ಕೂ ಮುನ್ನ ಕೊರೊನಾ ಸಮಯದಲ್ಲಿ ಪ್ರಾಪ್ತಿ ಎಂಬ ಕನ್ನಡ ಸಿನಿಮಾವನ್ನು ಮಾಡಿದ್ದೆ, ಆ ಚಿತ್ರವೀಗ ತೆರೆಗೆ ಬರಲು ಸಿದ್ಧವಿದೆ. ಈ ನೂತನ ತಂತ್ರಜ್ಞಾನದಿಂದ ಗಾಯಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗುವುದಿಲ್ಲ. ಆಸಕ್ತಿವುಳ್ಳವರು ತಮ್ಮ ಸಿನಿಮಾದ ಒಂದು ಹಾಡಿಗೆ ಈ ತಂತ್ರಜ್ಞಾನ ಬಳಸಿಕೊಳ್ಳಬಹುದು. ಈಗಾಗಲೇ ನಮ್ಮ ಯೂಟ್ಯೂಬ್ ಚಾನಲ್‌ನಲ್ಲಿ ಈ ಹಾಡು ಹಾಗೂ ಹಾಡಿನ ಮೇಕಿಂಗ್ ವೀಡಿಯೋ ಬಿಡುಗಡೆ ಮಾಡಿದ್ದೇವೆ. ಆರೂವರೆ ನಿಮಿಷಗಳ ಈ ಹಾಡು ಗಿನ್ನಿಸ್ ರೆಕಾರ್ಡ್ ಮಾಡುವ ಸಾಧ್ಯತೆಯಿದೆ ಎಂದು ತಿಳಿಸಿದರು. ಈ ಹಾಡಲ್ಲಿ ಅಭಿನಯಿಸಿದ ಐರಾ ಫರೀದ್, ರೇವಂತ್ ರಾಮಕುಮಾರ್, ಯೋಗೇಶ್ ಮಲ್ಲಿಕಾರ್ಜುನ ಹಾಗೂ ಲೀನಾಕುಮಾರನ್ ಹಾಡಿನ ಬಗ್ಗೆ ಮಾತನಾಡಿದರು.

'ರೇಸರ್' ನಾಯಕಿ ಅಕ್ಷಿತಾ ಸತ್ಯನಾರಾಯಣ್



'ರೇಸರ್' ಸಿನಿಮಾ ಮೂಲಕ ನಿರ್ಮಾಪಕ ಹಾಗೂ ನಿರ್ದೇಶಕರೂ ಆದ ಭರತ್ ವಿಷ್ಣುಕಾಂತ್ ಬೈಕ್ ರೇಸಿಂಗ್ ಕುರಿತ ನೈಜ ಘಟನೆ ಆಧಾರಿತ ಚಿತ್ರ ಮಾಡುತ್ತಿದ್ದಾರೆ. ಇತ್ತೀಚೆಗೆ ಈ ಚಿತ್ರದ ಹೀರೋಯಿನ್ ಇಂಟ್ರೊಡಕ್ಷನ್ ಪೋಸ್ಟರ್ ರಿಲೀಸ್ ಆಗಿದೆ. ಅಕ್ಷಿತಾ ಸತ್ಯನಾರಾಯಣ್ ಈ ಚಿತ್ರದ ನಾಯಕಿ. ಕನ್ನಡದವರೇ ಆದ ಅಕ್ಷಿತಾ ಮಾಡೆಲ್ ಜಗತ್ತಿಗೆ ಚಿರಪರಿಚಿತರು.

ನಾಯಕಿ ಪಾತ್ರಕ್ಕಾಗಿ ಅಕ್ಷಿತಾ ಸತ್ಯನಾರಾಯಣ್ ಬೈಕ್ ರೇಸ್ ಕಲಿತಿದ್ದಾರೆ. ದುಬಾರಿ ಬೆಲೆ ಬೈಕ್ ಏರಿ ಅಕ್ಷಿತಾ ಗ್ರ್ಯಾಂಡ್ ಆಗಿ ಎಂಟ್ರಿ ಕೊಟ್ಟಿರುವ ಮೋಷನ್ ಪೋಸ್ಟರ್‌ಗೆ ಒಳ್ಳೆ ರೆಸ್ಪಾನ್ಸ್ ಸಿಕ್ಕಿದೆ. ಅಂದ ಹಾಗೆ ಅಕ್ಷಿತಾ ಸಿನಿಮಾದಲ್ಲಿ ಬಬ್ಲಿ ಹುಡುಗಿಯಾಗಿ ಪಾತ್ರ ನಿಭಾಯಿಸಿದ್ದಾರೆ. ಕಳೆದ ಜನವರಿಯಲ್ಲಿ ಸೆಟ್ಟೇರಿದ್ದ ರೇಸರ್ ಸಿನಿಮಾದ 35ರಷ್ಟು ಭಾಗ ಶೂಟಿಂಗ್ ಕಂಪ್ಲೀಟ್ ಆಗಿದೆ. ಇದೇ ತಿಂಗಳಾತ್ಯಂತಕ್ಕೆ ಹಾಡುಗಳ ಚಿತ್ರೀಕರಣ ನಡೆಯಲಿದೆ. ಭಾಯ್ ಎಂಬ ದೊಡ್ಡ ಪಾತ್ರಕ್ಕಾಗಿ ಮಲಯಾಳಂ, ಕನ್ನಡದ ಇಬ್ಬರು ದೊಡ್ಡ ಸ್ಟಾರ್ ಗಳನ್ನು ಅಪ್ರೋಚ್ ಮಾಡಲಾಗಿದೆ. ಸಂದೇಶ್ ಪ್ರಸನ್ನ ನಾಯಕನಾಗಿ ನಟಿಸುತ್ತಿದ್ದು, ಯಶ್ ಶೆಟ್ಟಿ, ಕಾಕ್ರೋಚ್ ಸುಧಿ, ಬಾಲ ರಾಜ್ವಾಡಿ, ಕಾಮಿಡಿ ಕಿಲಾಡಿ ಸೂರಜ, ಸ್ವಾತಿ ಸೇರಿದಂತೆ ಹಲವು ಕಲಾವಿದರು ಚಿತ್ರದ ತಾರಾಬಳಗದಲ್ಲಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಮೈಸೂರು ಸ್ವಾಮಿ ಛಾಯಾಗ್ರಹಣ ಚಿತ್ರಕ್ಕಿದೆ. ಭರತ್ ವಿಷ್ಣುಕಾಂತ್ ನಿರ್ದೇಶನದ ಜೊತೆಗೆ ಭರತ್ ಫಿಲಂಸ್ ನಡಿ ತಾವೇ ರೇಸರ್ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

'ದೇವರ ಆಟ ಬಲ್ಲವರಾರು' ಮೂವತ್ತು ದಿನಗಳಲ್ಲಿ ತೆರೆಗೆ



ಈ ಹಿಂದೆ 'ಫಿರಂಗಿಪುರ' ಎಂಬ ಚಿತ್ರ ನಿರ್ದೇಶಿಸಿದ್ದ, ಜನಾರ್ಧನ್ ಪಿ.ಜಾನಿ ಅವರು ಈಗ 'ದೇವರ ಆಟ ಬಲ್ಲವರಾರು' ಚಿತ್ರದ ಮೂಲಕ ಗಿನ್ನಿಸ್ ರೆಕಾರ್ಡ್ ಮಾಡಲು ಹೊರಟಿದ್ದಾರೆ. ಶೂಟಿಂಗ್ ಆರಂಭಿಸಿದ 30 ದಿನಗಳಲ್ಲಿ ಎಲ್ಲಾ ಪ್ರಕ್ರಿಯೆ ಮುಗಿಸಿ ಬಿಡುಗಡೆ ಮಾಡುವ ಮೂಲಕ ಹೊಸ ದಾಖಲೆ ನಿರ್ಮಿಸುತ್ತಿದ್ದಾರೆ. ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಅವರು ಮಾಹಿತಿ ಹಂಚಿಕೊಂಡರು.


1975ರ ಕಾಲಘಟ್ಟದಲ್ಲಿ ನಡೆಯುವ, ಆಕ್ಷನ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ ಇದಾಗಿದ್ದು, ಚಿತ್ರದ ಎಲ್ಲಾ ಕೆಲಸಗಳನ್ನು ಒಂದು ತಿಂಗಳೊಳಗೆ ಮುಗಿಸಿ, ಶೂಟಿಂಗ್ ಆರಂಭಿಸಿದ 30 ದಿನಗಳಲ್ಲಿ ಚಿತ್ರವನ್ನು ರಿಲೀಸ್ ಮಾಡುವ ಮೂಲಕ ಗಿನ್ನಿಸ್ ರೆಕಾರ್ಡ್ ಮಾಡಬೇಕು ಎಂಬುದು ನನ್ನ ಆಸೆ. ನಾನು, ಹಾಗೂ ನನ್ನ ತಂಡ ಸುಮಾರು ಆರು ತಿಂಗಳಿನಿಂದ ಇದಕ್ಕಾಗಿ ಶ್ರಮಪಟ್ಟಿದ್ದೇವೆ. ಚಿತ್ರಕ್ಕಾಗಿಯೇ ಮಡಿಕೇರಿಯ ವಿಶಾಲವಾದ ಜಾಗದಲ್ಲಿ ಸೆಟ್‌ಹಾಕಿ 36 ಗಂಟೆಗಳವರೆಗೆ ಚಿತ್ರೀಕರಣ ಮಾಡಿದ್ದೇವೆ ಎಂದರು. ಹದಿನಾರು ದಿನದೊಳಗೆ ಚಿತ್ರೀಕರಣ ಮಾಡಿ, ನಂತರದ ಕೆಲಸಗಳನ್ನು ಮುಗಿಸಿ, ಜುಲೈ 20ರಂದು ಚಿತ್ರವನ್ನು ತೆರೆಗೆ ತರುತ್ತಿದ್ದೇವೆ. ನಮ್ಮ ಕಾರ್ಯವೈಖರಿ ವೀಕ್ಷಿಸಲು ಆರು ಜನ ತೀರ್ಪುಗಾರರು ಆ ಸ್ಥಳದಲ್ಲೇ ಇರುತ್ತಾರೆ ಎಂದು ನಿರ್ದೇಶಕ ಜನಾರ್ಧನ್ ಪಿ. ಜಾನಿ ತಿಳಿಸಿದರು.

ನಾನು ಈ ಹಿಂದೆ ನಾಲ್ಕು ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಆದರೆ ಈ ಚಿತ್ರದ ನಿರ್ದೇಶಕರ ಕಾರ್ಯವೈಖರಿ ಕಂಡು ಆಶ್ಚರ್ಯವಾಯಿತು. ಚಿತ್ರಕ್ಕಾಗಿಯೇ ಎರಡು ತಿಂಗಳಲ್ಲಿ ಹದಿನಾಲ್ಕು ಕೆಜಿ ತೂಕ ಇಳಿಸಿಕೊಂಡಿದ್ದೇನೆ. ನೋಡಿದವರು ಕಂಡುಹಿಡಿಯದಷ್ಟು ಸಣ್ಣಗಾಗಿದ್ದೇನೆ. ನಿರ್ದೇಶಕರು ಒಳ್ಳೆಯ ಕಥೆ ಆಯ್ಕೆ ಮಾಡಿಕೊಂಡಿದ್ದಾರೆ. ನನ್ನ ಪಾತ್ರದ ಹೆಸರು ಸೂರಿ ಎಂದು ನಾಯಕ ಅರ್ಜುನ್ ರಮೇಶ್ ಹೇಳಿದರು. ನಾಯಕಿ ಸಿಂಧೂ ಲೋಕನಾಥ್ ಮಾತನಾಡುತ್ತಾ ಮೂರು ವರ್ಷಗಳ ನಂತರ ನಾನು ನಟಿಸುತ್ತಿರುವ ಚಿತ್ರವಿದು. ನನ್ನ ಪಾತ್ರದ ಹೆಸರು ರಚನ. ನಾನು ಈವರೆಗೂ ಮಾಡಿರದಂಥ ಪಾತ್ರವನ್ನು ಈ ಚಿತ್ರದಲ್ಲಿ ನಿರ್ವಹಿಸುತ್ತಿದ್ದೇನೆ ಎಂದರು.

ಚಿತ್ರದಲ್ಲಿ ನಟಿಸುತ್ತಿರುವ ವರ್ಷ ವಿಶ್ವನಾಥ್, ಅರ್ಜುನ್, ಸಂಪತ್‌ರಾಮ್, ಸಂಗೀತ ನಿರ್ದೇಶಕ ಶ್ಯಾನ್ ಎಲ್. ರಾಜ್, ಸಾಹಸ ನಿರ್ದೇಶಕ ಕುಂಗು ಚಂದ್ರು ಹಾಗೂ ಕಾರ್ಯಕಾರಿ ನಿರ್ಮಾಪಕ ಶ್ರೀಪಾದ್ ಹೆಗಡೆ ಚಿತ್ರದ ಕುರಿತಂತೆ ಮಾತನಾಡಿದರು.

ಪ್ರತಿಯೊಬ್ಬ ಮನುಷ್ಯನ ಒಳಗೆ ಒಂದು ಕ್ರೂರಮೃಗ ಇದ್ದೆ ಇರುತ್ತದೆ ಎಂಬ ಅಡಿಬರಹ ಇರುವ ಈ ಚಿತ್ರದಲ್ಲಿ ಶನಿ ಧಾರಾವಾಹಿಯ ಅರ್ಜುನ್ ರಮೇಶ್ ನಾಯಕನಾಗಿದ್ದು, ನಾಯಕಿಯಾಗಿ ಸಿಂಧೂ ಲೋಕನಾಥ್, ವರ್ಷ ವಿಶ್ವನಾಥ್, ಸಂಪತ್‌ರಾಮ್, ಅರ್ಜುನ್, ಮೇದಿನಿ ಕೆಳಮನೆ ಮುಂತಾದವರು ಅಭಿನಯಿಸುತ್ತಿದ್ದಾರೆ.

ಸಿನಿಪದಬಂಧ–480



ಹೆಸರು
ವಿಳಾಸ
ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ
1. ನಿಯಮಗಳ ಕ್ರಮಬದ್ಧ ಜೋಡಣೆ ! 3
4. ಕ್ರಿಶ್ಚಿಯನ್ ಹೆಸರುಳ್ಳ ನಟಿ ಕೊನೆಯಲ್ಲಿ ಕಾವಲುಗಾರನನ್ನು ಇರಿಸಿದ್ದಾಳೆ 7
7. ಅನಂತ್ ನಾಗ್ – ಲಕ್ಷ್ಮಿ 'ಮುಕ್ತಿ'ಗೊಂಡರೂ 'ಕೋಳ' ತೊಟ್ಟಿದ್ದಾರೆ 7
8. ಅರಾಧನೆ ಚಿತ್ರದ ನಾಯಕಿ ಇಲ್ಲಿ ತಿರುಗಿದ್ದಾಳೆ 2
10." ಗಂಗಾ _ _ _ ಸಂಗಮ ಈ ಪ್ರೇಮ ಕೆನೆ ಹಾಲುಜೇನು ಸೇರಿದಂತೆ..... ", 3
11. ಅರಸಿಯ ನಡುವೆ ಒಂದಕ್ಷರ ನುಸುಳಿದರೆ ನಟಿಯೊಬ್ಬಳು ಪ್ರತ್ಯಕ್ಷ ! 3
15.ಅಂಬರೀಷ್ ಅಭಿನಯಕ್ಕೆ ವಿಜಯ್ ಗುಜ್ಜಾರ್ ನಿರ್ದೇಶಕ 2
16. ಕಾಶಿನಾಥ್ ಅವರೇ ನಂಯಜಮಾನ್ರು ಅಂತಾ ಸುಧಾರಾಣಿ ಹೇಳುತಿದ್ದಾಳೆ ! 7
18.ಪ್ರಜ್ವಲ್ ದೇವರಾಜ್ – ಶೃತಿ ಹರಿಹರನ್ ಅಭಿನಯದ ಚಿತ್ರ 7
19.ಮಾಜಿ ಪ್ರಧಾನಿಯೊಬ್ಬರ ಹಂತಕರ ಸುತ್ತಲಿನ ಘಟನೆಯ ಕಥಾವಸ್ತು 'ವಿಷಕಾರಿ' 3

ವಿಜೇತರು: ಎ.ಆರ್.ರೇಣುಕಾ ಪ್ರಸಾದ್, ನಂ.58, 3ನೇ ಬ್ಲಾಕ್, 6ನೇ ಮೇನ್, ಜಯಲಕ್ಷ್ಮೀಪುರಂ, ಮೈಸೂರು-570012



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 479ರ ಉತ್ತರ

ವಿ	ಕ್ಟ	ರಿ		ನಂ	ದ	ಲ	ವ್ಸ್	ನಂ	ದಿ	ತಾ
ಧಿ				ದಿ				ದ		
ವಿ	ಶ್ವ	ವಿ	ಜೇ	ತ		ಲಂ		ಗೋ		ಜಾ
ಲಾ		ರ			ಚಂ	ಚ	ಲ	ಕು	ಮಾ	ರಿ
ಸ	ತ್ಯ	ಹ	ರಿ	ಶ್ಚಂ	ದ್ರ			ಲ		ಣಿ
			ಷಿ		ಚ		ಮೌ			
ಕು		ಅಂ			ಕೋ	ಪ	ನ	ಮ	ದ	ನ
ಮು	ಕುಂ	ದ	ಮು	ರಾ	ರಿ			ಡಿ		ಟೋ
ದ		ವೋ		ಶಿ		ಬ	ಯ	ಲು	ದಾ	ರಿ
		ಅಂ				ಳ್ಳಾ				ಯ
ಪ್ರೇ	ಮ	ದ	ಕಾ	ದಂ	ಬ	ರಿ		ಸ	ರ್ಕ	ಸ್

ಮೇಲಿನಿಂದ ಕೆಳಕ್ಕೆ
1. ಸಪ್ತವರ್ಣದ ಈ ಚಿತ್ರ ಅಶ್ವಿನಿ ಅವರ 'ಮೃಗತೃಷ್ಣ" ಕಾದಂಬರಿ ಆಧರಿಸಿದೆ 5
2. ನನ್ನಾಸೆಯ ಹೂವೇ ಚಿತ್ರದ ಪ್ರೀತಿಯ ಹೊಂಬಾಳೆಗೆ ಕೊನೆಯಲ್ಲಿ ಕೋಳವಿದೆ 5
3. ಪ್ರೀತಂ ಗುಬ್ಬಿಯ ವರ್ಣರಂಜಿತ ಹೃದಯ ರೊಮ್ಯಾಂಟಿಕ್ ಆಗಿದೆ 5
5. ಆಂಗ್ಲದ ನಕ್ಷತ್ರವಿಲ್ಲಿ ತಲೆಕೆಳಗು 2
6. ಕನ್ನಡ ನಾಡಿನ ರಸಿಕರ ಮನವ ಸೂರೆಗೊಂಡ ಕಲಾವಿದೆ 5
9. "ಹಾರುತ ದೂರ ದೂರ ಮೇಲೇರುವ ಬಾರಾ ಬಾರಾ....", ಗೀತೆಯ ಚಿತ್ರ 5
12.ಬೊಂಬೆ ಹೇಳುತ್ತೈತೆ ಪುನೀತನೇ "ಅರಸು" ಅಂತಾ! 5
13. ಸುರನೊಂದಿಗೆ ನರನೂ ಇದ್ದಾನೆ 5
14. ಕನ್ನಡ ಸಿನಿಮಾ ಜಗತ್ತು ಚಂದನ ವನವೇ ಸರಿ ! 5
17. ಜಗ್ಗೇಶ್ 'ಚಂದ್ರ'ನಂತೆ ಕಂಗೊಳಿಸುತ್ತಿದ್ದಾನೆ 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

'ಲವ್' ಚಿತ್ರದ ಹೊಸ ಪ್ರೇಮಗೀತೆ

ಮಹೇಶ್ ಸಿ.ಅಮ್ಮಳ್ಳಿದೊಡ್ಡಿ ಅವರ ಸಾರಥ್ಯದಲ್ಲಿ ಮೂಡಿಬಂದಿರುವ ಚಿತ್ರ ಲವ್. ಈ ಚಿತ್ರದ ಮೊದಲ ಹಾಡು ಇದೀಗ ಅನಾವರಣಗೊಂಡಿದೆ. ಕಣ್ಮಣಿ ಎಂಬ ಮಧುರ ಪ್ರೇಮಗೀತೆ ಇದಾಗಿದ್ದು, ನಿರ್ದೇಶಕ ಮಹೇಶ್ ಅವರು ಪದಪುಂಜ ಪೋಣಿಸಿರುವ ಈ ಹಾಡಿಗೆ ರೋಸಿತ್ ವಿಜಯನ್ ಧ್ವನಿಯಾಗಿದ್ದಾರೆ, ಜೊತೆಗೆ ಸಾಯಿ ಕಿರಣ್ ಸಂಗೀತ ನಿರ್ದೇಶಿಸಿದ್ದಾರೆ.

ಟೈಟಲ್ಲೇ ಹೇಳುವಂತೆ ಇದೊಂದು ಅಪ್ಪಟ ಪ್ರೇಮಕಥೆಯುಳ್ಳ ಚಿತ್ರವಾಗಿದ್ದು. ಈ ಚಿತ್ರದ ಮೂಲಕ ಪ್ರಜಯ್ ಜಯರಾವ್, ವೃಷ ಪಾಟೀಲ ನಾಯಕ ಹಾಗೂ ನಾಯಕಿಯಾಗಿ ಸ್ಯಾಂಡಲ್‌ವುಡ್‌ಗೆ ಪರಿಚಯವಾಗುತ್ತಿದ್ದಾರೆ. ಕಾಂತಾರ ಖ್ಯಾತಿಯ ಪ್ರಭಾಕರ್ ಕುಂದರ್ ಬ್ರಹ್ಮಾವರ, ಸತೀಶ್ ಕಾಂತಾರ ಸೇರಿದಂತೆ ಉಮೇಶ್ ಶ್ರೀಕಾಂತ್ ತೇಲಿ, ರಾಧಿಕಾಭಟ್, ತಿಲಕ, ಪ್ರಸಾದ್ ಭಟ್, ಹರೀಶ್ ಶೆಟ್ಟಿ, ಸೌರಭ್ ಶಾಸ್ತ್ರೀ ಹಲವರು ಈ ಚಿತ್ರದ ಭಾಗವಾಗಿದ್ದಾರೆ. ಶ್ರೀಕಾಲ ಭೈರವೇಶ್ವರ ಮೂವೀ ಮೇಕರ್ಸ್‌ನಡಿ ದಿವಾಕರ್ ಅವರು ಲವ್ ಚಿತ್ರವನ್ನು ನಿರ್ಮಿಸುತ್ತಿದ್ದು, ಸಿದ್ಧಾರ್ಥ್ ಹೆಚ್.ಆರ್. ಅವರ ಛಾಯಾಗ್ರಹಣ, ರೋಸಿತ್ ವಿಜಯನ್, ಶ್ರೀ ಸಾಯಿಕಿರಣ್ ಸಂಗೀತ, ಲೋಕೇಶ್ ಪುಟ್ಟೇಗೌಡ ಅವರ ಸಂಕಲನ ಸಿನಿಮಾದ ಶ್ರೀಮಂತಿಕೆ ಹೆಚ್ಚಿಸಿದೆ. ನೈಜ ಘಟನೆ ಗಳಿಂದ ಪ್ರೇರಿತ ಕಥೆ ಹೊಂದಿರುವ 'ಲವ್' ಸಿನಿಮಾವನ್ನು ಉಡುಪಿ, ಕೋಟ, ಕುಂದಾಪುರ, ಬೈಂದೂರು, ಬಾಗಲ ಕೋಟೆ ಮತ್ತು ಬೆಂಗಳೂರಿನಲ್ಲಿ ಚಿತ್ರೀಕರಿಸಲಾಗಿದೆ.

ಮೈಸೂರು ಮಿತ್ರ

ಶೀಘ್ರ 6 ಕೋಟಿ ವೆಚ್ಚದ ವಾಲ್ಮೀಕಿ ಭವನ ಉದ್ಘಾಟನೆ

ಹೆಚ್.ಡಿ.ಕೋಟೆಯಲ್ಲಿ ಅಭಿನಂದನೆ ಸ್ವೀಕರಿಸಿ ಶಾಸಕ ಅನಿಲ್ ಚಿಕ್ಕಮಾದು ಘೋಷಣೆ



ಭಾರೀ ಬಹುಮತದಿಂದ ಎರಡನೇ ಬಾರಿಗೆ ಶಾಸಕರಾಗಿ ಆಯ್ಕೆಯಾದ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ತಾಲೂಕು ನಾಯಕ ಸಮಾಜದ ವತಿಯಿಂದ ಅಭಿನಂದಿಸಲಾಯಿತು.

ಹೆಚ್.ಡಿ.ಕೋಟೆ, ಜೂ.29– ರಾಜ್ಯದಲ್ಲೇ ಮೊಟ್ಟಮೊದಲಿಗೆ 6 ಕೋಟಿ ವೆಚ್ಚದಲ್ಲಿ ವಾಲ್ಮೀಕಿ ಸಮುದಾಯ ಭವನ ನಮ್ಮ ಎಚ್.ಡಿ. ಕೋಟೆ ತಾಲೂಕಿನಲ್ಲಿ ನಿರ್ಮಾಣವಾಗುತ್ತಿದ್ದು, ಶೀಘ್ರದಲ್ಲೇ ಉದ್ಘಾಟನೆಯಾಗಲಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಬಿ.ಆರ್. ಅಂಬೇಡ್ಕರ್ ಭವನದಲ್ಲಿ ತಾಲೂಕು ನಾಯಕ ಸಮುದಾಯದ ವತಿಯಿಂದ ಎರಡನೇ ಬಾರಿಗೆ ಭಾರೀ ಬಹುಮತದಿಂದ ಶಾಸಕರಾಗಿ ಆಯ್ಕೆಯಾದ ಅನಿಲ್ ಚಿಕ್ಕಮಾದು ಅವರಿಗೆ ಹಾಗೂ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ತಾಲೂಕಿನ ನಾಯಕ ಸಮುದಾಯದ ಮಕ್ಕಳಿಗೆ ಏರ್ಪಡಿಸಲಾಗಿದ್ದ ಅಭಿನಂದನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಎಚ್.ಡಿ.ಕೋಟೆ ಪಟ್ಟಣದಲ್ಲಿ ಒಂದು ಉತ್ತಮ ರೀತಿಯ ವಾಲ್ಮೀಕಿ ಸಮುದಾಯ ನಿರ್ಮಾಣ ಮಾಡಬೇಕು ಎಂಬುದು ನಮ್ಮ ದಿವಂಗತ ಚಿಕ್ಕಮಾದು ಅವರು ಆಸೆಯಾಗಿತ್ತು ಅವರ ಆಸೆಯಂತೆ ತಾಲೂಕಿನ ನಾಯಕ ಸಮುದಾಯಕ್ಕೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಮೊಟ್ಟ ಮೊದಲಿಗೆ 6 ಕೋಟಿ ವೆಚ್ಚದಲ್ಲಿ ನಮ್ಮ ಹೆಚ್.ಡಿ. ಕೋಟೆ ಪಟ್ಟಣದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನವನ್ನ ನಿರ್ಮಾಣ ಮಾಡಲಾಗಿದ್ದು ಭವನದ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ ಎಂದರು.

ವಾಲ್ಮೀಕಿ ಸಮುದಾಯ ಭವನ ಉದ್ಘಾಟನೆ ಪ್ರಸನ್ನ ನಂದಪುರಿ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ, ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವರುಗಳಾದ ಪರಮೇಶ್ವರ್, ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ, ನಾಗೇಂದ್ರ ಇನ್ನೂ ಹಲವಾರು ಪ್ರಮುಖರ ಸಮ್ಮುಖದಲ್ಲಿ ಆಗಲಿದೆ. ಇದರೊಂದಿಗೆ 51 ಜೋಡಿ ಸಾಮೂಹಿಕ ವಿವಾಹ ನಡೆಸಲಾಗುವುದು. ಜೊತೆಗೆ ಇನ್ನು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ನನ್ನ ಈ 5 ವರ್ಷದ ಅವಧಿಯಲ್ಲಿ ಸಮಾಜದ ಏಳಿಗೆಗಾಗಿ ನಿಷ್ಠೆಯಿಂದ ದುಡಿಯುತ್ತಾ ಬಂದಿದ್ದೇನೆ. ಇನ್ನು ಮುಂದೆಯೂ ಸಮಾಜದ ಏಳಿಗೆಗಾಗಿ, ಸಮಾಜದ ಅಭಿವೃದ್ಧಿಗಾಗಿ ಸಂಪೂರ್ಣ ಜವಾಬ್ದಾರಿಯಿಂದ ದುಡಿಯುತ್ತೇನೆ ಎಂದು ಭರವಸೆ ನೀಡಿದರು.


ಸಮಾಜದ ಮಕ್ಕಳಿಗೆ ಪೋಷಕರುಗಳು ಉತ್ತಮ ರೀತಿಯಲ್ಲಿ ವಿದ್ಯಾಭ್ಯಾಸ ಕೊಡುವುದರಲ್ಲಿ ಹೆಚ್ಚಿನ ಗಮನ ವಹಿಸಿದರೆ ನಮ್ಮ ಸಮುದಾಯ ಇನ್ನು ಹೆಚ್ಚಿನ ಮಟ್ಟದಲ್ಲಿ ಬೆಳೆಯಲು ಸಾಧ್ಯ ಎಂದು ಮನವಿ ಮಾಡಿದ ಅವರು, ಈ ಬಾರಿ ವಾಲ್ಮೀಕಿ ಜಯಂತಿಯನ್ನು ಎಲ್ಲಾ ಸಮುದಾಯ ಭಾಗಿಯಾಗುವ, ನಿಟ್ಟಿನಲ್ಲಿ ಅದ್ದೂರಿಯಾಗಿ ಆಚರಿಸೋಣ ಎಂದರು.

ಇದೇ ವೇಳೆ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ನಾಯಕ ಸಮುದಾಯದ ಮಕ್ಕಳಿಗೆ ಗೌರವಧನ ನೀಡುವುದರ ಮೂಲಕ ವಿಶೇಷವಾಗಿ ಗೌರವಿಸಿ, ಸನ್ಮಾನಿಸಲಾಯಿತು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಚಿಕ್ಕವೀರ ನಾಯಕ, ಶಂಭುಲಿಂಗ ನಾಯಕ, ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ರಾಜನಾಯಕ, ನಾಗರಾಜು, ತಾಲೂಕು ನಾಯಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು, ಪುರಸಭೆ ಸದಸ್ಯ ಪಟ್ಟಬಸವ, ತಾಪಂ ಸದಸ್ಯ ಅಂಕನಾಯಕ, ರಾಜು, ಮುಖಂಡರುಗಳಾದ ದಾಸನಾಯಕ, ಕೃಷ್ಣ, ವಕೀಲ ಹನುಮೇಶ್, ಸಿದ್ದನಾಯಕ, ಆಗತ್ತೂರು ಅಂಕನಾಯಕ, ವೇಣು, ಮಣಿ ಮಾಗುಡಿಲು, ನೆರಳೆ ಗೋವಿಂದ ರಾಜು, ಮರಿತಿಮ್ಮ ನಾಯಕ, ಸಿದ್ದನಾಯಕ, ರವಿ, ಈರನಾಯಕ, ಡಿ.ಎಲ್.ಸ್ವಾಮಿ, ತಿಮ್ಮನಾಯಕ, ಚಿಕ್ಕಣ್ಣ ನಾಯಕ, ಸ್ವಾಮಿ, ಮಹೇಶ್‌ನಾಯಕ, ರಮೇಶ್, ಚಲುವನಾಯಕ, ಬಸಪ್ಪ ಇನ್ನು ಮುಂತಾದವರು ಹಾಜರಿದ್ದರು.

> ನಾಯಕ ಸಮುದಾಯದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಹೆಚ್.ಡಿ. ಕೋಟೆ ತಾಲೂಕಿನಲ್ಲಿ ದಿವಂಗತ ಚಿಕ್ಕಮಾದು ಅವರ ಹೆಸರಿನಲ್ಲಿ ಶಾಲೆ ತೆರೆಯಬೇಕು.
> –ನಾಯಕ ಸಮಾಜದ ಮುಖಂಡರ ಮನವಿ

ಶ್ರೀಕಂಠೇಶ್ವರಸ್ವಾಮಿಯ ವೈಭವದ ತೆಪ್ಪೋತ್ಸವ



ನಂಜನಗೂಡು, ಜೂ.29– ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ– ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಯುಕ್ತ ಬುಧವಾರ ಮತ್ತು ಗುರುವಾರ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ಶ್ರೀಯವರ ತೆಪ್ಪೋತ್ಸವವು ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಸಾವಿರಾರು ಭಕ್ತರು ಶ್ರದ್ಧಾ–ಭಕ್ತಿಯಿಂದ ವೀಕ್ಷಿಸಿ ವಿಜೃಂಭಣೆಯ ತೆಪ್ಪೋತ್ಸವಕ್ಕೆ ಸಾಕ್ಷಿಯಾದರು. ಗಿರಿಜಾ ಕಲ್ಯಾಣ ಮಹೋತ್ಸವದ ಅಂಗವಾಗಿ ಬುಧವಾರ ಮುಂಜಾನೆಯಿಂದಲೇ ಕಪಿಲಾನದಿಯಲ್ಲಿ ತೀರ್ಥಸ್ನಾನ ಮಾಡಿ, ಉರುಳು ಸೇವೆ, ಧೂಪ ದೀಪ ಸೇವೆ, ಬೆಳ್ಳಿ ಹರಕೆ ಪದಾರ್ಥಗಳನ್ನು ಹುಂಡಿಯಲ್ಲಿ ಹಾಕಿ ಶ್ರೀಕಂಠೇಶ್ವರನ ದರ್ಶನ ಪಡೆದು ಹರಕೆ ತೀರಿಸಿದರು. ತೆಪ್ಪೋತ್ಸವದ ಅಂಗವಾಗಿ ದೇವಾಲಯದಲ್ಲಿ ಇಂದು ಮುಂಜಾನೆಯಿಂದಲೇ ವಿವಿಧ ರೀತಿಯ ಪೂಜಾ ಕೈಂಕರ್ಯಗಳನ್ನು ನೆರವೇರಿಸಿ ಮಹಾ ಮಂಗಳಾರತಿಯ ನಂತರ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ನಂತರ ರಾತ್ರಿ 7 ಗಂಟೆಯಲ್ಲಿ ದೇವಾಲಯದಿಂದ ಉತ್ಸವ ಮೂರ್ತಿಯನ್ನು ಮಂಗಳವಾದ್ಯದೊಡನೆ ಪಲ್ಲಕ್ಕಿಯಲ್ಲಿ ಮೆರವಣಿಗೆ ಮೂಲಕ ಕಪಿಲಾ ನದಿಗೆ ಕರೆತರಲಾಯಿತು. ಪ್ರಧಾನ ಅರ್ಚಕ ನಾಗಚಂದ್ರ ಧೀಕ್ಷಿತ್ ಹಾಗೂ ಅರ್ಚಕ ವೃಂದ ಪಾರ್ವತಿ ಸಮೇತ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ ಮೂರ್ತಿಯನ್ನು ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಪ್ರತಿಷ್ಠಾಪಿಸಿ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು.

ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಉತ್ಸವ ಮೂರ್ತಿಯನ್ನು ವಿಶೇಷವಾಗಿ ವಜ್ರ–ವೈಡೂರ್ಯ, ಮುತ್ತು ಹವಳ, ನವರತ್ನಗಳಿಂದ ಶೃಂಗರಿಸಲಾಗಿತ್ತು ಅಲ್ಲದೆ ನಾನಾ ಬಗೆಯ ವಿಶೇಷ ಹೂಗಳಿಂದ ತೇಲುವ ದೇವಾಲಯವನ್ನು ಅಲಂಕೃತಗೊಳಿಸಲಾಗಿತ್ತು. ಉತ್ಸವ ಮೂರ್ತಿಯನ್ನು ಹೊತ್ತ ವಿದ್ಯುತ್ ದೀಪಾಲಂಕೃತ ತೇಲುವ ದೇವಾಲಯದಲ್ಲಿ ಶ್ರೀಯವರನ್ನು ಮೂರು 3 ಪ್ರದಕ್ಷಿಣೆ ಹಾಕಲಾಯಿತು. ಇದೇ ಸಂದರ್ಭದಲ್ಲಿ ದೇವಾಲಯದ ಇಓ ಜಗದೀಶ್ ಕುಮಾರ್, ಎಇಓ ವೆಂಕಟೇಶ್‌ಪ್ರಸಾದ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಕೆ.ಆರ್.ನಗರದಲ್ಲಿ ಬಕ್ರೀದ್ ಆಚರಣೆ



ಮುಸ್ಲಿಮರ ಪವಿತ್ರ ಹಬ್ಬದ ಪ್ರಯುಕ್ತ ಪಟ್ಟಣದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆಯಲ್ಲಿ ತೊಡಗಿರುವ ಮುಸ್ಲಿಂ ಬಾಂಧವರು.

ಕೆ.ಆರ್.ನಗರ, ಜೂ.29– ಮುಸ್ಲಿಮರ ಪವಿತ್ರ ಹಬ್ಬವಾದ ಬಕ್ರೀದ್ ಪ್ರಯುಕ್ತ ಮುಸ್ಲಿಂ ಸಮುದಾಯದ ಮುಖಂಡರು ಧರ್ಮಗುರುಗಳ ನೇತೃತ್ವದಲ್ಲಿ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಪಟ್ಟಣದ ಜಾಮಿಯಾ ಮಸೀದಿಯಿಂದ ಧರ್ಮಗುರುಗಳಾದ ಮುಫ್ತಿ– ಜೈನುಲಾ ಆಫ್ ಬಿದ್ದಿನ್ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ತೆರಳಿ ಪ್ರಾರ್ಥನೆ ಸಲ್ಲಿಸಿದ ನಂತರ ಸಂಪ್ರದಾಯದಂತೆ ಕುರಿಯನ್ನು ಬಲಿ ಕೊಡುವ ಮೂಲಕ ಬಡ ಮುಸ್ಲಿಂ ಸಮುದಾಯದವರಿಗೆ ದಾನ ಮಾಡಿದರು.

ಜಾಮಿಯಾ ಮಸೀದಿಯಾ ಗುರುಗಳಾದ ಮುಫ್ತಿ ಜೈನುಲಾ ಆಫ್ ಬಿದ್ದಿನ್ ರಾಜ್ಯದ ಮತ್ತು ದೇಶದ ಜನತೆಯು ಸಾಮರಸ್ಯದಿಂದ ಸಮೃದ್ಧಿಯಿಂದ ಯಾವುದೇ ಸಮಸ್ಯೆಗಳಿಲ್ಲದೆ ಜೀವನ ಸಾಗಿಸುವಂತೆ ಅಲ್ಲಾ ನೋಡಿಕೊಳ್ಳಲಿ. ಶಾಂತಿ ಮತ್ತು ಸುವ್ಯವಸ್ಥೆಯಿಂದ ಇರಲಿ ಎಂದು ಪ್ರಾರ್ಥಿಸಿದರು.

ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಡಿ.ರವಿಶಂಕರ್ ಮಾತನಾಡಿ, ನಾನು ಇಲ್ಲಿ ನಿಂತು ಮಾತನಾಡಲು ಶಕ್ತಿ ನೀಡಿದ ನಿಮ್ಮ ಜೊತೆ ಎಂದೆಂದಿಗೂ ಇರುತ್ತೇನೆ ಹಾಗೂ ನಿಮ್ಮ ಕಷ್ಟ ಸುಖದಲ್ಲಿ ಭಾಗಿಯಾಗುತ್ತೇನೆ ಎಂದು ತಿಳಿಸಿದರು.

ಜಾಮಿಯಾ ಮಸೀದಿಯ ಅಧ್ಯಕ್ಷ ಅಪ್ಸರಬಾಬು ಮಾತನಾಡಿ, ಮಾಜಿ ಸಚಿವ ಸಾರಾ ಮಹೇಶ್ ಬೇರೆ ಕಾರ್ಯಕ್ರಮದ ನಿಮಿತ್ತ ಹೊರಗಡೆ ಇರುವುದರಿಂದ ಸಂದೇಶವನ್ನು ಕಳಿಸಿದ್ದು ಬಕ್ರೀದ್ ಹಬ್ಬದ ಶುಭಾಶಯಗಳು,ಎಲ್ಲಾ ಮುಸ್ಲಿಂ ಸಮುದಾಯದವರು ಅತ್ಯಂತ ಅರ್ಥಪೂರ್ಣವಾಗಿ ಪ್ರಾರ್ಥನೆಯೊಂದಿಗೆ ಹಬ್ಬವನ್ನು ಆಚರಿಸಿ ಯಾವತ್ತು ನಾನು ನಿಮ್ಮ ಜೊತೆ ಇರುತ್ತೇನೆ ಎಂದು ತಿಳಿಸಿದ್ದಾರೆ ಎಂದರು.

ಸಾಮೂಹಿಕ ಪ್ರಾರ್ಥನೆಯಲ್ಲಿ ಖ್ಯಾತ ಮೂಳೆ ತಜ್ಞ ಡಾ.ಮೆಹಬೂಬ್ ಖಾನ್ ಪುರಸಭಾ ಸದಸ್ಯ ಸಿದ್ದಿಕ್ ಜಾವೀದ್ ನವೀದ್, ಮಾಜಿ ಸದಸ್ಯರಾದ ಸಿರಾಜ್ ಅಸ್ಲಾಂ ಸೇರಿದಂತೆ ಇನ್ನಿತರರು ಹಾಜರಿದ್ದರು.

ಹುಣಸೂರು ರೋಟರಿ ಕ್ಲಬ್‌ಗೆ ಅಧ್ಯಕ್ಷರ ಆಯ್ಕೆ

ಹುಣಸೂರು, ಜೂ.29– ಹುಣಸೂರು ರೋಟರಿ ಕ್ಲಬ್‌ಗೆ 2023–24ನೇ ಸಾಲಿನ ಅಧ್ಯಕ್ಷರಾಗಿ ವಿದ್ಯುತ್ ಇಲಾಖೆಯ ಇಂಜಿನಿಯರ್ ಎಸ್.ಚೆನ್ನಕೇಶವ ಹಾಗೂ ಕಾರ್ಯದರ್ಶಿಯಾಗಿ ಹುಣಸೂರು ಮಹಿಳಾ ಪದವಿ ಕಾಲೇಜಿನ ಪ್ರಾಧ್ಯಾಪಕ ಕೆ.ಪಿ.ಪ್ರಸನ್ನ ಅವರನ್ನು ಆಯ್ಕೆ ಮಾಡಲಾಗಿದ್ದು, ಜು.4ರಂದು ನಡೆಯಲಿರುವ ಪದಗ್ರಹಣ ಸಮಾರಂಭದಲ್ಲಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಇಚ್ಛಾಶಕ್ತಿಯ ಕೊರತೆಯಿಂದ ಹುಟ್ಟುತ್ತಲೇ ನಾಶವಾಗುತ್ತಿರುವ ಸಂಘ–ಸಂಸ್ಥೆಗಳು

ಹಿರಿಯ ರಂಗ ಕಲಾವಿದ ಮಂಡ್ಯ ರಮೇಶ್ ವಿಷಾದ



ತಿ.ನರಸೀಪುರ ಪಟ್ಟಣದಲ್ಲಿ ನೂತನವಾಗಿ ಅಸ್ತಿತ್ವಕ್ಕೆ ತರಲಾಗಿರುವ ಬೆಳಕು ಸೇವಾ ಫೌಂಡೇಶನ್ ಸಂಸ್ಥೆಯ ಉದ್ಘಾಟನೆಯನ್ನು ನಟನ ರಂಗಶಾಲೆಯ ಸಂಸ್ಥಾಪಕ ಮಂಡ್ಯ ರಮೇಶ್ ನೆರವೇರಿಸಿದರು.

ತಿ.ನರಸೀಪುರ, ಜೂ.29– ಇಚ್ಛಾಶಕ್ತಿಯ ಕೊರತೆ ಹಾಗೂ ಸ್ವಪ್ರತಿಷ್ಠೆಗಳಿಂದಾಗಿ ಹಲವಾರು ಸಂಘ ಸಂಸ್ಥೆಗಳು ಹುಟ್ಟುತ್ತಲೇ ನಾಶವಾಗುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಚಲನಚಿತ್ರ ನಟ ಹಾಗೂ ರಂಗ ಕಲಾವಿದ ಮಂಡ್ಯ ರಮೇಶ್ ವಿಷಾದ ವ್ಯಕ್ತಪಡಿಸಿದರು.

ಪಟ್ಟಣದ ಚಿಕ್ಕಮ್ಮ ತಾಯಿ ಯಾತ್ರಿ ಭವನದಲ್ಲಿ ಬೆಳಕು ಸೇವಾ ಫೌಂಡೇಶನ್ ಎಂಬ ನೂತನ ಸರ್ಕಾರೇತರ ಸಂಸ್ಥೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚೆಗೆ ಸಂಘ–ಸಂಸ್ಥೆಗಳು ನೂರಾರು ಸಂಖ್ಯೆಯಲ್ಲಿ ಉದ್ಘಾಟನೆಯಾಗುತ್ತಿವೆ. ಆದರೆ ಸಂಸ್ಥೆಯ ಉದ್ದೇಶವೇ ಅರಿಯದೇ ಅಷ್ಟೇ ಬೇಗನೆ ನೇಪಥ್ಯಕ್ಕೆ ಸರಿಯುತ್ತಿವೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಯಾವುದೇ ಸಂಸ್ಥೆ ಸದೃಢವಾಗಿ ಬೆಳೆಯಬೇಕಾದರೆ ಅಲ್ಲಿನ ಸದಸ್ಯರ ಇಚ್ಛಾಶಕ್ತಿ ಬಲವಾಗಿರಬೇಕು. ಕೇವಲ ಕ್ಷುಲ್ಲಕ ಕಾರಣಗಳನ್ನು ಮುಂದಿಟ್ಟುಕೊಂಡು ಸಂಸ್ಥೆಯ ಅವನತಿಗೆ ಕಾರಣವಾಗಬಾರದು. ಪ್ರತಿಯೊಬ್ಬರಲ್ಲೂ ಪ್ರತಿಫಲ ಇಲ್ಲದೆಯೂ ದುಡಿಯುತ್ತೇನೆ ಎಂಬ ಮನೋಭಾವ ಇರಬೇಕು. ಹಾಗಾದಲ್ಲಿ ಮಾತ್ರವೇ ಸಂಸ್ಥೆ ಬೆಳವಣಿಗೆ ಹೊಂದಲು ಸಾಧ್ಯ ಎಂದರು.

ರಾಜಕಾರಣಿ, ಒಳ್ಳೆಯ ಇಂಜಿನಿಯರ್, ಡಾಕ್ಟರ್ ಸೇರಿದಂತೆ ಯಾವುದೇ ರಂಗಕ್ಕೂ ನಾಟಕ ಮತ್ತು ರಂಗಭೂಮಿ ಹಿನ್ನೆಲೆಯ ಅವಶ್ಯಕತೆ ಬೇಕಿದೆ.ಯಾಕೆಂದರೆ ಯಾವುದೇ ರಾಜಕಾರಣಿಯಾಗಲಿ ಮತ್ತೊಬ್ಬರಾಗಲಿ ತಮ್ಮ ಸಮಸ್ಯೆ ಮತ್ತಿತರ ವಿಷಯಗಳನ್ನು ಮಂಡಿಸಲು ಸ್ಪಷ್ಟತೆಯ ಕೊರತೆ ಎದುರಾಗುತ್ತದೆ.ಅವರಿಗೆ ಅಭಿವ್ಯಕ್ತಿಯ ಗುಣಗಳೇ ಗೊತ್ತಿರುವುದಿಲ್ಲ. ಹಾಗಾಗಿ ಎಲ್ಲರಿಗೂ ರಂಗಭೂಮಿಯ ತಿರುಳು ಹಾಗೂ ನಾಟಕದ ಮಹತ್ವದ ಬಗ್ಗೆ ತಿಳುವಳಿಕೆ ಇರಬೇಕೆಂದು ರಮೇಶ್ ಅಭಿಪ್ರಾಯಪಟ್ಟರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗು ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಕತ್ತಲಿನಲ್ಲಿರುವ ಬಡವರನ್ನು, ಸಮಾಜದಲ್ಲಿ ತುಳಿತಕ್ಕೆ ಒಳಗಾಗಿರುವ ಜನರನ್ನು ಸರಿದಾರಿಗೆ ಕೊಂಡೊಯ್ಯುವಂತಹ ಮಹತ್ತರವಾದ ಕೆಲಸವನ್ನು ಬೆಳಕು ಸಂಸ್ಥೆ ಮಾಡಿದ್ದೇ ಆದಲ್ಲಿ ಜನರ ಪ್ರೀತಿ ವಿಶ್ವಾಸ ಗಳಿಸುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಪುರಸಭೆಯ ಮುಖ್ಯಾಧಿಕಾರಿ ಬಿ.ಕೆ. ವಸಂತ ಕುಮಾರಿ, ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್, ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜ್ ಗೌಡ ಮಾತನಾಡಿದರು.

ಕಾರ್ಯಕ್ರಮದಲ್ಲಿ ನೇತ್ರದಾನ ಮಾಡಿದ ಫೌಂಡೇಶನ್ ಸದಸ್ಯರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಬಡ ಜನರಿಗೆ ಆಹಾರದ ಪೊಟ್ಟಣ ನೀಡುವ ಕಾರ್ಯಕ್ರಮಕ್ಕೆ ವೇದಿಕೆಯಲ್ಲಿ ಚಾಲನೆ ನೀಡಲಾಯಿತು. ಚಿಣ್ಣರು ಮಾಡಿದ ನೃತ್ಯ ಎಲ್ಲರ ಗಮನ ಸೆಳೆಯಿತು.

ಅನಾಥ ಶವಗಳ ಮುಕ್ತಿದಾತ ಡಾ.ಎಂ. ಮಾದೇಶ್, ತಾಲೂಕು ಹಿರಿಯ ಶ್ರೇಣಿ ಅಪರ ಸರ್ಕಾರಿ ವಕೀಲ ಚೌಹಳ್ಳಿ ಜಿ.ರವಿಶಂಕರ್, ಖಾಸಗಿ ಬಸ್ ಏಜೆಂಟ್ ಸಂಘದ ಅಧ್ಯಕ್ಷ ಪಿ ಪುಟ್ಟರಾಜು, ತ್ರಿವೇಣಿ ದ್ವಿಚಕ್ರ ವಾಹನಗಳ ದುರಸ್ತಿಗಾರರ ಸಂಘದ ಅಧ್ಯಕ್ಷ ರಂಗಸ್ವಾಮಿ, ಟೈಲರ್ ಸಂಘದ ಕಾರ್ಯದರ್ಶಿ ರಾಜಬುದ್ಧಿ, ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ರಾಜೇಶ್, ಸಹ ಕಾರ್ಯದರ್ಶಿ ಜಿ.ಪ್ರಶಾಂತ್ ಕುಮಾರ್, ಖಜಾಂಚಿ ಮಹೇಶ್, ಸಂಘಟನಾ ಕಾರ್ಯದರ್ಶಿ ಎನ್.ಸಿದ್ದರಾಜು, ಫೌಂಡೇಶನ್ ಅಧ್ಯಕ್ಷ ಜಿ.ಅರವಿಂದ್, ಕಾರ್ಯದರ್ಶಿ ಆರ್. ಚೇತನ್, ನಿರ್ದೇಶಕರಾದ ನವೀನ್ ಕುಮಾರ್, ಉಪನ್ಯಾಸಕ ಕುಮಾರಸ್ವಾಮಿ, ಜಿ.ಕೃಷ್ಣಕುಮಾರ್, ಎಂ.ಬಿ.ಗಿರೀಶ್, ಜಿ.ಮೋಹನ್, ಗೋವರ್ಧನ್, ಚಂದನ್ ಮತ್ತಿತರರಿದ್ದರು.

ಸರಗೂರಲ್ಲೂ ಬಕ್ರೀದ್ ಪ್ರಾರ್ಥನೆ



ಸರಗೂರಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರು ನೂರ್ ಮಸೀದಿಯಲ್ಲಿ ಪ್ರಾರ್ಥನೆ ಮಾಡುವ ಮೂಲಕ ಹಬ್ಬವನ್ನು ಆಚರಿಸಿದರು.

ಸರಗೂರು, ಜೂ.29– ಪಟ್ಟಣದಲ್ಲಿ ಮುಸ್ಲಿಂ ಬಾಂಧವರು ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಮೂಲಕ ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬವನ್ನು ಆಚರಿಸಿದರು.

ಬಕ್ರೀದ್ ಎಲ್ಲರಲ್ಲಿ ಉತ್ತಮ ಬಾಂಧವ್ಯ ಬೆಸೆಯುತ್ತದೆ ಎಂದು ಜಾಮಿಯಾ ಮಸೀದಿ ಗುರುಗಳಾದ ಅಬ್ದುಲ್ ರಶೀದ್ ತಿಳಿಸಿದರು. ಪ್ರಾರ್ಥನೆ ಸಲ್ಲಿಸಿದ ನಂತರ ಸಿಹಿ ಹಂಚಲಾಯಿತು. ಪುಟ್ಟ ಮಕ್ಕಳು ಹೊಸಬಟ್ಟೆ ತೊಟ್ಟು ಬಕ್ರೀದ್ ಹಬ್ಬಕ್ಕೆ ಮೆರಗು ತಂದರು.

ಜಾಮಿಯಾ ಮಸೀದಿ ಗುರುಗಳಾದ ಅಬ್ದುಲ್ ರಶೀದ್, ನೂರ್ ಮಸೀದಿ ಗುರುಗಳಾದ ಅಬ್ದುಲ್ ಜಲೀಲ್, ಮಾತನಾಡಿ, ಎಲ್ಲರೂ ಸಹಬಾಳ್ವೆಯಿಂದ ಬದುಕಬೇಕು. ಹಬ್ಬಗಳ ಆಚರಣೆಯಿಂದ ಎಲ್ಲರಲ್ಲಿ ಉತ್ತಮ ಬಾಂಧವ್ಯ ಬೆಸೆಯುತ್ತದೆ. ಎಲ್ಲರಿಗೂ ಬಕ್ರೀದ್ ಹಬ್ಬದ ಶುಭಾಶಯಗಳು, ಎಲ್ಲರಿಗೂ ಅಲ್ಲಾ ಒಳಿತು ಮಾಡಲಿ ದೇಶಕ್ಕೆ ಉತ್ತಮ ಮಳೆ ಬೆಳೆಯಾಗಲಿ ಎಂದು ತಿಳಿಸಿದರು,

ಸಮಾಜದ ಯಜಮಾನರಾದ ಅಬ್ದುಲ್ ಮಜೀದ್, ಹಾಜಿ ಅಬ್ದುಲ್ ಅಜೀಜ್, ಮುಖಂಡರಾದ ಮುಜೀಬ್, ಜಲೀಲ್, ಖಲೀಲ್, ಸುಭಾನ್, ನಾಸೀರ್, ಜಾವೀದ್, ಸುಹೇಲ್, ಹಿಬ್ರಾಹಿಂ, ಹಿದಾಯತ್, ಸಿರಾಜ್ ಪಾಷ, ಮಫಿ, ಮುಸ್ತಾಪ, ಅಕ್ಬರ್, ರಫಿ, ಎಂ.ಹಾದಿ, ರಾಹೀಲ್‌ಪಾಷ, ಶಾಹೀದ್, ಅಸೀಫ್, ಅಬ್ಬಸ್ ಹಾಗೂ ಮುಸ್ಲಿಂ ಬಾಂಧವರು ಭಾಗವಹಿಸಿದ್ದರು.

ನಂಜನಗೂಡಲ್ಲಿ ಮುಸ್ಲಿಂ ಬಾಂಧವರಿಂದ ಬಕ್ರೀದ್ ಸಾಮೂಹಿಕ ಪ್ರಾರ್ಥನೆ



ನಂಜನಗೂಡು, ಜೂ.29– ತ್ಯಾಗ ಮತ್ತು ಬಲಿದಾನದ ಸಂಕೇತವಾದ ಬಕ್ರೀದ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರು ನಗರದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವ ಮೂಲಕ ಸಡಗರ, ಸಂಭ್ರಮದಿಂದ ಬಕ್ರೀದ್ ಹಬ್ಬವನ್ನು ಆಚರಿಸಿದರು.

ನಗರದ ಮುಸ್ಲಿಂ ಬಡಾವಣೆ, ನೀಲಕಂಠ ನಗರ ಸೇರಿದಂತೆ ಇನ್ನಿತರ ಕಡೆಗಳಿಂದ ಸಾಮೂಹಿಕ ಮೆರವಣಿಗೆಯ ಮೂಲಕ ಈದ್ಗಾ ಮೈದಾನಕ್ಕೆ ಆಗಮಿಸಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದ ನಂತರ ಒಬ್ಬರಿಗೊಬ್ಬರು ಆಲಂಗಿಸಿ ಪರಸ್ಪರ ಶುಭಾಶಯ ವಿನಮಯ ಮಾಡಿಕೊಂಡರು.

ಮುಸ್ಲಿಂ ಧರ್ಮಗುರು ಮುಸವೀರ್ ಅಹಮದ್ ಮಾತನಾಡಿ, ಬಕ್ರೀದ್ ಹಬ್ಬ ತ್ಯಾಗ ಬಲಿದಾನಗಳ ಸಂಕೇತವಾಗಿದೆ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಹ ಒಂದೇ. ಪರಸ್ಪರ ದ್ವೇಷವನ್ನು ಬಿಟ್ಟು ಎಲ್ಲರೂ ಒಂದಾಗಿ ಜೀವಿಸುವಂತಾಗಬೇಕು. ಈ ನಿಟ್ಟಿನಲ್ಲಿ ಈ ಪವಿತ್ರ ಹಬ್ಬದಲ್ಲಿ ಹಿಂದು ಮತ್ತು ಮುಸಲ್ಮಾನರು ಪರಸ್ಪರ ಸೌಹಾರ್ದ ವಾತಾವರಣದಲ್ಲಿ ಬಾಳ್ವೆ ಮಾಡುವಂತಾಗಲಿ ಮತ್ತು ದೇಶದಲ್ಲಿ ಶಾಂತಿ ಸೌಹಾರ್ದ ವಾತಾವರಣ ನಿರ್ಮಾಣವಾಗಲಿ ಹಾಗೂ ಉತ್ತಮ ಮಳೆ ಬೆಳೆಯಾಗಲಿ ಎಂದು ಪ್ರಾರ್ಥನೆ ಸಲ್ಲಿಸಿರುವುದಾಗಿ ತಿಳಿಸಿದರು.

ಶಾಸಕ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಬಿ.ಹರ್ಷವರ್ಧನ್ ಮುಸ್ಲಿಂ ಬಾಂಧವರಿಗೆ ಶುಭಾಶಯ ಕೋರಿದರು. ಇದೇ ಸಂದರ್ಭದಲ್ಲಿ ಮುಖಂಡರಾದ ಅಬ್ದುಲ್ ಖಾದರ್, ಅಕ್ಬರ್ ಅಲೀಂ, ಶೌಕತ್ ಅಲಿ, ನಗರಸಭಾ ಸದಸ್ಯ ಸಿದ್ದಿಕ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.



ಜಯಪುರ ಗ್ರಾಮದಲ್ಲಿ ಬಕ್ರೀದ್ ಹಬ್ಬದ ಪ್ರಯುಕ್ತ ಮುಸ್ಲಿಂ ಬಾಂಧವರು ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿ, ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ತ್ಯಾಗ, ಬಲಿದಾನಗಳ ಸಂಕೇತ ಬಕ್ರೀದ್ ಆಚರಣೆ



ಹೆಚ್.ಡಿ.ಕೋಟೆ, ಜೂ.29– ತ್ಯಾಗ, ಬಲಿದಾನಗಳ ಸಂಕೇತವಾದ ಬಕ್ರೀದ್ ಹಬ್ಬವನ್ನು ತಾಲೂಕಿನಾದ್ಯಂತ ಮುಸ್ಲಿಂ ಬಾಂಧವರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ಮುಂಜಾನೆಯೇ ಪಟ್ಟಣದ ಈದ್ಗಾ ಮೈದಾನದಲ್ಲಿ ಮಳೆಯಾಗಿದ್ದರಿಂದ ಮಸೀದಿಯಲ್ಲಿಯೇ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಮುಸ್ಲಿಂ ಬಾಂಧವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಧರ್ಮ ಗುರುಗಳು ಹಬ್ಬದ ಸಂದೇಶ ಸಾರಿ, ಬಕ್ರೀದ್ ಹಬ್ಬದ ಆಚರಣೆ ಹಾಗೂ ದಾನ–ಧರ್ಮದ ಮಹತ್ವ ಕುರಿತು ಬೋಧನೆ ಮಾಡಿದರು. ಬಕ್ರೀದ್ ಹಿನ್ನೆಲೆಯಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು.

ಮೈಸೂರು ರೇಸುಗಳು

6ನೇ ದಿನ, ಶುಕ್ರವಾರ 30–6–2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಬ್ಯೂಗಲ್ ರಾಕ್ ಪ್ಲೇಟ್ ಡಿ2–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಯುನಿಟಿ 2. ಫಿಫ್ಟಿ ಗ್ರಾಂಡ್ 3. ಕ್ಯಾಲಿಫೋರ್ನಿಯಾ ಗೋಲ್ಡ್

II. ಬ್ಯೂಗಲ್ ರಾಕ್ ಪ್ಲೇಟ್ ಡಿ1–1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1 ಲೀಡ್ ಸಿಂಗರ್ 2. ಇನ್‌ಎಕ್ಸ್‌ಪ್ಲಿಕಬಲ್ 3. ಪೆಟ್ಟಿಸ್ ಚಾಯ್ಸ್

III. ವೈಟ್ ಫೀಲ್ಡ್ ಪ್ಲೇಟ್ ಡಿ2–1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1 NIR ಮಿಲೇನಿಯಮ್ 2. ಆಕರ್ 3. ಸಿಂಧೋಲ್ ಫಾರ್ ಬುಲೆಟ್

IV. ಶಿವಾಜಿನಗರ್ ಪ್ಲೇಟ್ – 1400 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1. ಅಸ್ತ್ರಾ 2. ಶಿವಾಲಿಕ್ ಸೌಂಡ್ 3. ಪಾರ್ಕರ್

V. ಮೈಸೂರ್ ಕೋಲ್ಟ್ ಟ್ರೈಲ್ ಸ್ಟೇಕ್ಸ್ –1400 ಮೀ. ರೇಟೆಡ್ 3 ವರ್ಷದ (ಟರ್ಮ್ಸ್). ಸಂ.4.00ಕ್ಕೆ
1. ಬ್ರೇವ್ ಟ್ರೂಪರ್ 2. ಸ್ಟಲಾಂಟಿಸ್ 3. ಮೊರಿಸೆಟ್

VI. ಗೋಲ್ಡನ್ ಫ್ಯಾಂಟಸಿ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಸಂ.4.30ಕ್ಕೆ
1 ಸರ್‌ಕ್ಯಾಲ್‌ಕುಲಸ್ 2 ಪ್ಯೂರಿಯಸ್ ಪನ್ 3. ಸ್ಮೈಲ್ ಅರೌಂಡ್

VII. ವೈಟ್ ಫೀಲ್ಡ್ ಪ್ಲೇಟ್ ಡಿ1–1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1 ಪೇಸ್ಟ್ ಆಫ್ ಲೈಫ್ 2. ಐ ದಿ ಮೈಂಡ್ 3. ಪರ್ಫೆಕ್ಟ್ ಜಸ್ಟೀಸ್

ದಿನದ ಅತ್ಯುತ್ತಮ............................	: ಅಸ್ತ್ರಾ
ಡಬ್ಬಲ್..	: ಲೀಡ್ ಸಿಂಗರ್, ಪೇಸ್ಟ್ ಆಫ್ ಲೈಫ್
ಜಾಕ್‌ಪಾಟ್.....................................	: 3, 4, 5, 6 ಮತ್ತು 7
I ಟ್ರಿಬಲ್..	: 2, 3 ಮತ್ತು 4
II ಟ್ರಿಬಲ್.......................................	: 5, 6 ಮತ್ತು 7
ಎಕ್ಸ್‌ಆಕ್ಟ್.....................................	: 1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 03 MYS 2023-24
ದಿನಾಂಕ: 26.06.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಸಿಂಗಲ್ ಲೈನ್‌ಗಾಗಿ ಮೈಕ್ರೊಪ್ರೊಸೆಸರ್ ಆಧಾರಿತ ಸ್ಟೇಷನ್ ಮಾಸ್ಟರ್ ಬ್ಲಾಕ್ ಪ್ಯಾನೆಲ್‌ನ ಪೂರೈಕೆ, ಸ್ಥಾಪನೆ, ಸಾರಿಗೆ, ಕಾರ್ಯಗತಗೊಳಿಸುವಿಕೆ ಮತ್ತು ಕಾರ್ಯಾರಂಭ. (ಟೆಂಡರ್ ಸಂಖ್ಯೆ. L9235179A)	ರೂ. 1,36,59,680/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 24–07–2023, 10:30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಕ್ತಾಯ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ

ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು
ಮೈಸೂರು

PUB/213/AAV/PRB/SWR/2023-24
S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ಚಾಮರಾಜ ಮೊಹಲ್ಲಾ, ರಾಮಕೃಷ್ಣ ನಗರ, ಐ ಬ್ಲಾಕ್, 4ನೇ ಮುಖ್ಯರಸ್ತೆ, 3ನೇ ತಿರುವು, ಮನೆ ನಂ. 704 ರಲ್ಲಿ ವಾಸವಾಗಿರುವ ಶ್ರೀ ಸಿದ್ದೇಗೌಡ ರವರ ಮಗ ಸುಮಾರು 52 ವರ್ಷ ವಯಸ್ಸಿನ ಶ್ರೀ ಸೋಮಶೇಖರ ಕೆ.ಎಸ್. ರವರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಇದರ ಮಾಲೀಕರಾದ ಮೈಸೂರು ಸಿಟಿ, ಖಿಲ್ಲೆ ಮೊಹಲ್ಲಾ, ವಿದ್ಯಾರಣ್ಯಪುರಂ, 4ನೇ ಮೇನ್, 5ನೇ ಕ್ರಾಸ್, ಮನೆ ನಂ. 905/85 ರಲ್ಲಿ ವಾಸವಾಗಿರುವ ಶ್ರೀ ಕೆ.ವಿ. ರಾಮಸ್ವಾಮಿ ರವರ ಮಗನಾದ ಸುಮಾರು 60 ವರ್ಷ ವಯಸ್ಸಿನ ಶ್ರೀ ಕೆ.ಆರ್. ಸತ್ಯನಾರಾಯಣ ಮತ್ತು ಇವರ ಧರ್ಮಪತ್ನಿ ಯಾದ ಸುಮಾರು 56 ವರ್ಷ ವಯಸ್ಸಿನ ಶ್ರೀಮತಿ ಕೆ.ಎಸ್. ದಾಕ್ಷಾಯಿಣಿ ರವರುಗಳಿಂದ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಕ್ರಯ ಪತ್ರವನ್ನು ಬರೆಸಿಕೊಳ್ಳಲು ಸಿದ್ದರಿರುವ ಕಾರಣ, ಮೇಲ್ಕಂಡರವರನ್ನು ಬಿಟ್ಟು, ಈ ಷೆಡ್ಯೂಲ್ ಸ್ವತ್ತಿಗೆ ಬೇರೆ ಯಾರಿಗಾದರೂ ಹಕ್ಕು ಬಾಧ್ಯತೆ, ಭೋಗ್ಯ, ದಾನ, ಕರಾರು ಅಥವಾ ಪರಾಭಾರೆ ಆಗಿದ್ದ ಪಕ್ಷದಲ್ಲಿ ಜೊತೆಗೆ ಜೀವನಾಂಶ, ಮೈನರ್ ಹಕ್ಕುಗಳು, ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್ ಮೆಂಟ್, ಡಿಕ್ರಿ, ಇನ್ನಾವುದೇ ಜಪ್ತಿಗಳಿಗೆ ಈಡಾಗಿದ್ದ ಪಕ್ಷದಲ್ಲಿ ಈ ಕೆಳಕಂಡ ವಕೀಲರನ್ನು ಈ ಪ್ರಕಟಣೆ ಕೊಟ್ಟ 15 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಖುದ್ದಾಗಿ ಅಥವಾ ವಕೀಲರ ಮೂಲಕ ಬಂದು ಭೇಟಿಯಾಗಬೇಕೆಂದು ಈ ಮೂಲಕ ಸೂಚಿಸಲಾಗಿದೆ. ಒಂದು ವೇಳೆ ಯಾರಿಂದಲೂ, ಯಾವುದೇ ರೀತಿಯ ತಂಟೆ, ತಕರಾರುಗಳು ಮೇಲೆ ಹೇಳಿದ ಅವಧಿಯಲ್ಲಿ ಬರದಿದ್ದ ಪಕ್ಷದಲ್ಲಿ ಷೆಡ್ಯೂಲ್ ಸ್ವತ್ತಿಗೆ ಯಾರಿಂದಲೂ ಯಾವ ರೀತಿಯ ಹಕ್ಕು ಬಾಧ್ಯತೆ, ಹಿತಾಸಕ್ತಿ ಇರುವುದಿಲ್ಲವೆಂದು ಪರಿಗಣಿಸಿ, ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವವರಿದ್ದು, ನಂತರ ಬರುವ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಬಾಧ್ಯಸ್ಥರಾಗಿರುವುದಿಲ್ಲವೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ : ಮೈಸೂರು ನಗರ, ಚಾಮರಾಜನ ಮೊಹಲ್ಲಾ, ದಟ್ಟಗಳ್ಳಿ ಬಡಾವಣೆ, 3ನೇ ಹಂತ, ನಿವೇಶನ ಸಂಖೆ : 3261/ಎ ರಲ್ಲಿ ಇದರ ಪೂರ್ಣ ವಿಸ್ತೀರ್ಣ ಪೂರ್ವ ಪಶ್ಚಿಮ 18.00 ಮೀಟರ್‌ಗಳು, ದಕ್ಷಿಣೋತ್ತರ 12.00 ಮೀಟರ್‌ಗಳು ಒಟ್ಟು 216.00 ಚದರ ಮೀಟರ್‌ಗಳುಳ್ಳ ಖಾಲಿ ನಿವೇಶನ ಇದಕ್ಕೆ ಚೆಕ್ಕು ಬಂದಿ :– ಪೂರ್ವಕ್ಕೆ : 3262/ಎನೇ ನಂಬರ್ ಸ್ವತ್ತು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : 3261ನೇ ನಂಬರ್ ಸ್ವತ್ತು, ದಕ್ಷಿಣಕ್ಕೆ : ಪ್ರಾಧಿಕಾರದ ಸ್ವತ್ತು.

ಸಹಿ/– ಕೆ.ಹೆಚ್. ಸತೀಶ ಬಿ.ಎಸ್ಸಿ, ಎಲ್.ಎಲ್.ಬಿ.,
ವಕೀಲರು, ಕೆ.ಎ.ಆರ್. ನಂ. 2038/2006
ನಂ. 2760/ಬಿ4, 2ನೇ ಮಹಡಿ, ರೈಲ್ವೆ ಗೇಟ್ ರಸ್ತೆ, ಕೆ.ಜಿ. ಕೊಪ್ಪಲ್, ಮೈಸೂರು–570009
ಮೊ.: 9900282950